ಹೆಣ್ಣುಮಗುವಿನ ವರ್ಷ
ಅನಕ್ಷರತೆ ಅನಾರೋಗ್ಯ ನಿವಾರಣೆಗೆ

ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ



ಸಂಪುಟ 12 ಸಂಚಿಕೆ 28
ಬೆಲೆ ರೂ. 1.50 ಜುಲೈ 15-1990

ಒಳಪುಟಗಳಲ್ಲಿ

ನ್ಯಾಯಮೂರ್ತಿ ಕುಲದೀಪ್ ಸಿಂಗ್ ವರದಿ ಬಹಿರಂಗ
ಬೆಂಗಳೂರಿನ ಮೇಲೆರಗಿದ ರಣಹದ್ದುಗಳು

ಈಗ ಎರಡು ವಾರಗಳಿಂದಲೂ ನ್ಯಾ. ಕುಲದೀಪ್‌ಸಿಂಗ್ ರವರ ವರದಿಯ ಬಗ್ಗೆ ಚರ್ಚೆಗಳ ಬುಗ್ಗೆ ಮತ್ತೆಮತ್ತೆ ಎದ್ದು ರಾಮಕೃಷ್ಣ ಹೆಗ್ಗಡೆಯವರು ತಮ್ಮ ಯೋಜನಾ ಆಯೋಗದ ಉಪಾಧ್ಯಕ್ಷಸ್ಥಾನಕ್ಕೆ ರಾಜೀನಾಮೆ ನೀಡಿ ಅದು ಒಪ್ಪಿಗೆಯೂ ಆದನಂತರ ವರದಿ ಬಹಿರಂಗವಾಗಿದೆ.

ಹೆಗ್ಗಡೆಯವರ ಅಳಿಯಮನೂ ನಿಚ್ಛಾನಿಯ ಪ್ರಭಾವದಿಂದ ಬಿ.ಡಿ.ಎ. ಅಧ್ಯಕ್ಷ ಎಚ್.ಜೆ.ವಿ. ರೆಡ್ಡಿ ಅನೇಕ ಅಕ್ರಮಗಳನ್ನು ಎಸಗಿ ಬೆಂಗಳೂರಿನಲ್ಲಿ 150 ಎಕರೆ ಭೂಮಿ ನೀಡುವ ಬಗ್ಗೆ ನಿರ್ಣಯ ಕೈಗೊಂಡರೂ ಹೆಗ್ಗಡೆಯವರು ಈ ಬಗ್ಗೆ ಎಲ್ಲಾ ವಿವರಗಳು ತಿಳಿದಿದ್ದರೂ ತಮ್ಮ ನಿಷ್ಕ್ರಿಯತೆಯಿಂದ ಅವರಿಗೆ ಸಹಾಯ ಮಾಡಿದ್ದಾರೆ ಎಂಬುದು ಈ ವರದಿಯ ಒಟ್ಟು ಸಾರಾಂಶ.

ಈ ಎಲ್ಲಾ ಹಗರಣ ಒಂದು ಪ್ರಮುಖ ಅಂಶವನ್ನು ಪ್ರಬಲವಾಗಿ ಬಹಿರಂಗಕ್ಕೆ ತಂದಿದೆ. ಆದರೆ ತಪ್ಪು ಹೆಗ್ಗಡೆಯವರದೋ, ನ್ಯಾ.ನಯಾರ್ ದುರುದ್ದೇಶಪೂರ್ವಕವಾಗಿ ಹೆಗ್ಗಡೆಯವರ ವಿರುದ್ಧ ತೀರ್ಮಾನಕ್ಕೆ ಬಂದಿದ್ದಾರೆಯೋ ಕೇಂದ್ರದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ಸರ್ಕಾರದ ರಾಜಕೀಯ ದುರುದ್ದೇಶವೇ ಈ ಆಯೋಗದ ನೇಮಕಾತಿಗೆ ಹಾಗೂ ಈ ನ್ಯಾಯಮೂರ್ತಿಯವರನ್ನೇ ಈ ಕೆಲಸಕ್ಕೆ ಆಯ್ಕೆ ಮಾಡಿದ್ದಕ್ಕೆ ಕಾರಣವಾಗಿದೆಯೋ ಎಂಬ ವಾದ-ವಿವಾದಗಳ ಹಿನ್ನೆಲೆಯಲ್ಲಿ ಜನತೆಯ ಗಮನಕ್ಕೆ ಬಾರದೆ ಹೋಗಬಹುದಾಗಿದೆ.

ಭಾರತದ ಅನೇಕ ರಾಜ್ಯಗಳಲ್ಲಿ ಬಂಡವಾಳಶಾಹಿ ಪಕ್ಷಗಳು ಮುಖ್ಯವಾಗಿ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೂ ಆಳುತ್ತಾ ಬಂದ ಕಾಂಗ್ರೆಸ್ ಪಕ್ಷ ಹಾಗೂ ಬಂಡವಾಳಶಾಹಿಗಳ ಚೋರರ ನಡುವಿನ ನಿಕಟ ಸಂಬಂಧ-ಭ್ರಷ್ಟರಾಜಕಾರಣಿ ಬಂಡವಾಳಶಾಹಿಗಳ ಈ ಜೋಡಿ ನಡೆಸುತ್ತಿರುವ ಆದಾದುಂದಿ ಒಂದುಕಡೆ, ಬಂಡವಾಳಶಾಹಿ ರಾಜಕೀಯಕ್ಕೂ ರಾಜಕೀಯದ ಮೇಲಿರುವ ಅತ್ಯಂತ ಪವಿತ್ರ' ಸಂಸ್ಥೆಯಾದ ನ್ಯಾಯಾಂಗಕ್ಕೂ ಇರುವ ಅತ್ಯಂತ ಹತ್ತಿರದ ಒಳ ಸಂಬಂಧಗಳು ಮತ್ತೊಂದು ಕಡೆ ಈ ಪ್ರಕರಣದಲ್ಲಿ ಕಣ್ಣು ಕೋರೈಸುತ್ತಾ ಹೊರಬಂದಿವೆ. ಇವು ಅಲಕ್ಷ್ಯ ಮಾಡಬೇಕಾದ ಸಂಗತಿಗಳೇನೂ ಅಲ್ಲ.

ಆದರೂ ಇಡೀ ಹಗರಣದ ಹೃದಯವಾಗಿರುವುದೇ ಭೂಮಿ-ಭಾರತದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ, ಚಿನ್ನಕ್ಕಿಂತಲೂ ಹುಬಾರಿ ವೇಗದಲ್ಲಿ ಬೆಲೆ ಏರುತ್ತಿರುವ ಬೆಂಗಳೂರಿನ ಭೂಮಿ.

70ರ ದಶಕದಲ್ಲಿ ಭೂಮಿಯ ಬೆಲೆ ನಿಧಾನವಾಗಿ ಏರತೊಡಗಿದಂತೆ ಬೆಂಗಳೂರಿನ ಆಗಸದಂಚಿನಲ್ಲಿ ದೇಶದಲ್ಲೆಡೆಯ ರಣಹದ್ದುಗಳು, ಗಿಡುಗಗಳು ಸುತ್ತಾಡಲಾರಂಭಿಸಿದುವು. 80 ರ ದಶಕದಲ್ಲಿ ಒಂದೇ ಸಮನೆ ನಾಗರಿಕರ ಮೇಲೆರಗಿ ಕಿತ್ತು ತಿನ್ನಲಾರಂಭಿಸಿದುವು.

ದೇವರಾಜ ಅರಸರ ಪ್ರಗತಿಪರ ಮುಖವಾಡದ ಹಿಂದಿನ ಭ್ರಷ್ಟ ಆಡಳಿತ, ಗುಂಡೂರಾವ್‌ರವರ- ಮುಖವಾಡಗಳೇ ಇಲ್ಲದ ಭ್ರಷ್ಟಕೌರ್‍ಯಗಳ ಕಾಲದಲ್ಲಿ ಬಹಿರಂಗವಾದ ಹಗರಣಗಳ ಪರಂಪರೆಯನ್ನು

ಪುಟ 8 ಕ್ಕೆ

ಪ್ರಧಾನಿಗೆ ಇ.ಎಂ.ಎಸ್. ಪತ್ರ

ರಾಷ್ಟ್ರೀಯ ರಂಗ ಸರಕಾರದ ಸಿರಿವಂತ-ಪರ ಧೋರಣೆಗಳಿಗೆ ಸಿ.ಪಿ.ಐ(ಎಂ) ಬೆಂಬಲ ಸಾಧ್ಯವಿಲ್ಲ

ರಾಷ್ಟ್ರೀಯ ರಂಗ ಸರ್ಕಾರ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಬೇಕಾದರೆ ಆರ್ಥಿಕ ಧೋರಣೆಗೆ ಒಂದು ಸರಿಯಾದ ದಿಕ್ಕು ನೀಡುವುದು ಅತ್ಯಗತ್ಯ. ಹಣಕಾಸು ಮಸೂದೆಯಲ್ಲಿ ಜನ ಸಾಮಾನ್ಯರಿಗೆ ಪರಿಹಾರ ನೀಡುವಂತೆ ಬದಲಾವಣೆ ತರಬೇಕೆಂಬ ನಮ್ಮ ಮನವಿಯನ್ನು ಗಮನಕ್ಕೆ ತಗೊಳ್ಳಲಿಲ್ಲ. ಹೊಸ ಕೈಗಾರಿಕಾ ಧೋರಣೆ ದುಡಿಯುವ ಜನರ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ವಿ.ಪಿ. ಸಿಂಗ್ ಸರ್ಕಾರದ ಹಿತಚಿಂತಕರಾಗಿ ಆರ್ಥಿಕ ಧೋರಣೆಯ ಆಮೂಲಾಗ್ರ ಮರು ಪರಿಶೀಲನೆ ನಡೆಸಬೇಕೆಂದು ನಾವು ಆಗ್ರಹ ಪಡಿಸುತ್ತೇವೆ ಎಂದು ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದರಿಪ್ಪಾಡ್ ಪ್ರಧಾನ ಮಂತ್ರಿ ವಿ.ಪಿ. ಸಿಂಗ್‌ರಿಗೆ ಬರೆದ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಮೇ 31, 1990 ರಂದು ಸಂಸತ್ತಿನಲ್ಲಿ ಕೇಂದ್ರ ಕೈಗಾರಿಕಾ ಮಂತ್ರಿಗಳು ಮಂಡಿಸಿದ ಕೈಗಾರಿಕಾ ಧೋರಣೆಯ ಹೇಳಿಕೆ ದೊಡ್ಡ ಬಂಡವಾಳಶಾಹಿ ಪರ ಒಲವು ತೋರಿದ್ದು, ವಿದೇಶೀ ಬಂಡವಾಳ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳು ಲಂಗುಲಗಾಮಿಲ್ಲದೆ ದೇಶದೊಳಕ್ಕೆ ನುಗ್ಗಲು ಬಾಗಿಲು ತೆರೆಯುತ್ತದೆ, ದೇಶದ ಸ್ವಾವಲಂಬನೆಗೆ, ಸಾರ್ವಜನಿಕ ವಲಯಕ್ಕೆ ಇದು ವಿನಾಶಕಾರಿ, ದೇಶದ ಸಾರ್ವಭೌಮತೆಗೆ ಸಂಚಕಾರ ತರುವ ದಿಕ್ಕು ಇದರದ್ದು ಎಂದು ಸಿ.ಪಿ.ಐ(ಎಂ)ಪೊಲಿಟ್ ಬ್ಯೂರೋ ಜೂನ್ 6ರಂದು ನೀಡಿದ ಹೇಳಿಕೆಯಲ್ಲಿ ಖಂಡಿಸಿತ್ತು.

ಜುಲೈ 1 ರಂದು ಕೇಂದ್ರ ಮಂತ್ರಿಮಂಡಲ ಈ ಹೇಳಿಕೆಗೆ ಅಂಗೀಕಾರ ಕೊಟ್ಟಿದೆಯೆಂಬ ಸುದ್ದಿ ಬಂದ ಮೇಲೆ ಜುಲೈ 5 ರಂದು ಇ.ಎಂ.ಎಸ್. ಪ್ರಧಾನಿಗೆ ಬರೆದ ಈ ಪತ್ರದಲ್ಲಿ ಸರಕಾರದ ಈ ಧೋರಣೆಯ ಬಗ್ಗೆ ನಮ್ಮ ಬಲವಾದ ಭಿನ್ನಭಿಪ್ರಾಯ ತಿಳಿಸ ಬಯಸುತ್ತೇನೆ" ಎಂದಿದ್ದಾರೆ.

ಹೊಸ ಕೈಗಾರಿಕಾ ಧೋರಣೆಯ ಕುರಿತಂತೆ ಈ ನಾಲ್ಕು ಅಂಶಗಳನ್ನು ಅವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಮೊದಲನೆಯದಾಗಿ, 40%ರವರೆಗೆ ವಿದೇಶೀ ಇಕ್ವಿಟಿಗೆ ಮುಕ್ತ ಅವಕಾಶ ನೀಡಿರುವುದು - – ಇದು ಅತ್ಯಂತ ಆಕ್ಷೇಪಾರ್ಹ ಅಂಶ. ಎರಡನೆಯದಾಗಿ, ನಿಜವಾದ ಸಣ್ಣ ಪ್ರಮಾಣದ ವಲಯವನ್ನು ಮೂಲೆ ಗುಂಪು ಮಾಡುತ್ತದೆ. ಮೂರನೆಯದಾಗಿ, 60% ಉದ್ದಿಮೆಗಳನ್ನು ಲೈಸೆನ್ಸ್ ನೀಡಿಕೆಯ ವ್ಯಾಪ್ತಿಯಿಂದ ಹೊರಗಿಟ್ಟು ಯೋಜನಾ ಪ್ರಕ್ರಿಯೆಯನ್ನೇ ವಿರೂಪಗೊಳಿಸುತ್ತದೆ. ನಾಲ್ಕನೆಯದಾಗಿ, ಎಂಟನೇ ಪಂಚ ವಾರ್ಷಿಕ ಯೋಜನೆಯ ರೂಪರೇಷೆಯನ್ನು ಅಂತಿಮಗೊಳಿಸುವಮೊದಲೇ ... ಯೋಜನಾ ಪ್ರಕ್ರಿಯೆಯನ್ನೇ ಮೂಲೆಗೊತ್ತುವ ಪ್ರಯತ್ನ ನಡೆದಿದೆ. 8 ನೇ ಯೋಜನೆಯ ದಸ್ತಾವೇಜಿನಲ್ಲಿ ಹೇಳಿರುವ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಆಶ್ವಾಸನೆಗಳಿಗೆ ವಿರುದ್ಧವಾಗಿದೆ ಈ ಧೋರಣೆಯ ದಿಕ್ಕು ಎಂದುಇ.ಎಂ.ಎಸ್. ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

ವಿದೇಶೀ ವಿನಿಮಯ ಹತೋಟಿ ನಿಯಮಗಳ (ಫೆರಾದ) ವ್ಯಾಪ್ತಿಯ ಹೊರಗಡೆ ವಿದೇಶೀ ಬಂಡವಾಳಕ್ಕೆ 40% ದವರೆಗೆ ಮುಕ್ತ ಅವಕಾಶ ಅತ್ಯಗತ್ಯ ವಲಯಗಳಲ್ಲಿ ನಮಗೆ ವಿದೇಶೀ ತಂತ್ರಜ್ಞಾನ ಪಡೆಯಲು ನೆರವಾಗುವುದಿಲ್ಲ ಬದಲಾಗಿ ಅದು ನಮ್ಮವಿದೇಶೀ ವಿನಿಮಯ ಪೋಲಾಗಲು ಕಾರಣವಾಗುತ್ತದೆ.

ಕೈಗಾರಿಕಾ ಹೇಳಿಕೆಯಲ್ಲಿ ತಿಳಿದಿರುವ ಅಂಶಗಳು ಹೆಚ್ಚು ಉದ್ಯೋಗವಕಾಶ ನಿರ್ಮಿಸುತ್ತವೆ ಎಂಬುದು ನಿಜವಲ್ಲ. ಬದಲಾಗಿ ಅದು ನಿಜವಾದ ಸಣ್ಣ ಪ್ರಮಾಣದ ವಲಯವನ್ನು ಮೂಲೆ ಗುಂಪುಮಾಡಿ ಅನಗತ್ಯವಾದ, ಶ್ರೀಮಂತರ ಬಳಕೆಯ ಸರಕುಗಳ ಉತ್ಪಾದನೆಗೆ, ಶ್ರಮದ ಅಗತ್ಯ ಕಮ್ಮಿ ಬರುವ ಉದ್ದಿಮೆಗಳಿಗೆ ವಿದೇಶೀ ಬಂಡವಾಳ ಹರಿಯುವಂತೆ ಮಾಡುತ್ತದೆ ಜತೆಗೆ ನಮ್ಮ ಸ್ವಾವಲಂಬನೆ ಹಾಗೂ ಸ್ಥಳೀಯ ಸಂಶೋಧನಾ ಚಟುವಟಿಕೆಗಳಿಗೆ ಅಡ್ಡಿಯುಂಟು ಮಾಡುತ್ತದೆ.

ಸಣ್ಣ ಪ್ರಮಾಣದ ವಲಯದಲ್ಲಿ ತೊಡಗಿರುವ ಬಂಡವಾಳದ ಮಿತಿಯನ್ನು 35 ಲಕ್ಷದಿಂದ 60 ಲಕ್ಷಕ್ಕೇರಿಸಿರುವುದು, ಸಹಾಯಕ ಘಟಕಗಳಲ್ಲಿ 75 ಲಕ್ಷಕ್ಕೆ ಏರಿಸಿರುವುದು ಸಣ್ಣ ಪ್ರಮಾಣದ ಘಟಕಗಳಿಗೆ ಪ್ರೋತ್ಸಾಹ ನೀಡುವ ಸಂಗತಿಯಲ್ಲ. ಇದು ದೊಡ್ಡ ಬಂಡವಾಳಶಾಹಿಗಳಿಗೆ ಸಣ್ಣ ಪ್ರಮಾಣದ ಹಾಗೂ ಸಹಾಯಕ ಘಟಕಗಳಲ್ಲಿ ನುಗ್ಗಲು ಅವಕಾಶ ಮಾಡಿಕೊಡುವ ಸಂಗತಿ. "ಹಿಂದಿನ ಗರಿಷ್ಠ ಮಿತಿಯ ಬಳಿಗೆ ಬಂದದ್ದು ಕೇವಲ ...

ತ್ರಿಪುರಾ: 105 ಮತಗಟ್ಟೆಗಳಲ್ಲಿ ಮರುಮತದಾನ ನಡೆಯಬೇಕು
ಪೊಲಿಟ್ ಬ್ಯೂರೋ ಒತ್ತಾಯ

ಜುಲೈ 8 ರಂದು ತ್ರಿಪುರಾ ಸ್ವಾಯತ್ತ ಜಿಲ್ಲಾ ಮಂಡಳಿಗೆ ನಡೆದ ಚುನಾವಣೆ ಗಳಲ್ಲಿ 8 ಮಂದಿ ಸತ್ತಿದ್ದಾರೆ. 100 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. 105 ಮತಗಟ್ಟೆಯಲ್ಲಿ ಪೂರ್ಣವಾಗಿ ಮೋಸ ನಡೆದಿದೆ. ಕಾಂಗ್ರೆ ಟಿ.ಯು.ಜೆ.ಎಸ್. ಹರಿಯ ಬಿಟ್ಟ ಈ ಹಿಂಸಾಚಾರವನ್ನು ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ.


ಸಂತೋಷ್ ಮೋಹನ್ ದೇವ್ ನೇತೃತ್ವದಲ್ಲಿ, ಕಳೆದ ವಿಧಾನ ಸಭಾ ಚುನಾವಣೆಗಳಲ್ಲಿ ವ್ಯಾಪಕ ಹಿಂಸಾಚಾರ ನಡೆಸಿ ಕಾಂಗ್ರೆ ಟಿ.ಯು.ಜೆ.ಎಸ್. ಸರಕಾರವನ್ನು ತ್ರಿಪುರಾ ಜನತೆಯ ಮೇಲೆ ಹೇರಿದ್ದು, ಅಂದಿನಿಂದ ಕಾಂಗ್ರೆ ಕೃಪಾಪೋಷಿತ ಗೂಂಡಾಗಳು ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನು ನಾಶಮಾಡಿ, ಸಾವಿರಕ್ಕೂ ಹೆಚ್ಚುಸಿ.ಪಿ.ಐ(ಎಂ) ಕಾರ್ಯಕರ್ತರನ್ನು ಬಲಿತೆಗೆದುಕೊಂಡಿರುವುದು ಎಲ್ಲರಿಗೂ ತಿಳಿದ ವಿಷಯ.

ಇತ್ತೀಚಿನ ಚುನಾವಣೆಗಳಲ್ಲಿಯೂ ಮೋಸ ನಡೆಸಲು ಕಾಂಗ್ರೆ ತನ್ನೆಲ್ಲಾ ಸಂಪನ್ಮೂಲಗಳನ್ನು ಕಟ್ಟಿ ಹಾಕುತ್ತಿದೆಯೆಂದು ಸಿ.ಪಿ.ಐ(ಎಂ) ಬಾರಿ ಬಾರಿಗೂ ಎಚ್ಚರಿಸುತ್ತಾ ಬಂದಿತ್ತು.

ಚುನಾವಣಾ ಆಯೋಗಕ್ಕೆ ಈ ಬಗ್ಗೆ ಈಗಾಗಲೇ ನೀಡಿರುವ ದೂರುಗಳ ಆಧಾರದ ಮೇಲೆ 105 ಮತಗಟ್ಟೆಗಳಲ್ಲಿ ಮರುಮತದಾನ ನಡೆಸಬೇಕೆಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ. ಜನ ನಿರ್ಭಯವಾಗಿ ತಮ್ಮ ಮತವನ್ನು ಚಲಾಯಿಸುವಂತಾಗಲು ಮರು ಮತದಾನದ ವೇಳೆ, ಮತ ಎಣಿಕೆಯ ಸಮಯದಲ್ಲಿ, ಹಾಗೂ ಆ ಮೇಲೆ ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹ ಪಡಿಸಿದೆ.

ಇತ್ತೀಚೆಗೆ ಬಂದ ವರದಿಗಳ ಪ್ರಕಾರ ಜುಲೈ 8ರಂದು ನಡೆದ ಚುನಾವಣೆ ಗಳಲ್ಲಿ, ವ್ಯಾಪಕ ಮೋಸ ನಡೆದರೂ ಸಿ.ಪಿ.ಐ(ಎಂ) 10 ಸ್ಥಾನಗಳನ್ನು ಗಳಿಸಿದೆ. ಕಾಂಗ್ರೆ ಟಿ.ಯು.ಜೆ.ಎಸ್. ಕೂಟಕ್ಕೆ 18 ಸ್ಥಾನ ದೊರಕಿದೆಯೆಂದು ಘೋಷಿಸಲಾಗಿದೆ. ಉಳಿದ ಎರಡು ಸ್ಥಾನಗಳಿಗೆ ರಾತ್ರಿ ...

ಸಗಟು ಬೆಲೆ ಏರಿಕೆ



ಬೆಂಗಳೂರಿನಲ್ಲಿ ಯಶಸ್ವಿ ಸಮಾವೇಶ

"ಕೋಮುಸೌಹಾರ್ದದ, ರಾಷ್ಟ್ರೀಯ ಐಕ್ಯತೆಯ ಸಂದೇಶರಾಜ್ಯದಾದ್ಯಂತ ಕೊಂಡೊಯ್ಯಬೇಕು"

ಜನರ ಒಗ್ಗಟ್ಟು ಮತ್ತು ದೇಶದ ಏಕತೆ-ಸಮಗ್ರತೆಯನ್ನು ರಕ್ಷಿಸಲಿಕ್ಕಾಗಿ ಜನರನ್ನು ಒಗ್ಗೂಡಿಸಲು, ಕೋಮುವಾದಿ ಛಿದ್ರಕಾರಿಗಳ ವಿರುದ್ಧ ದನಿಯೆತ್ತಲು ಏಕಮನಸ್ಸಿನಿಂದ ದುಡಿಯುವ ಅಗತ್ಯ ವಿದೆಯೆಂದು ರಾಜ್ಯದ ವಿವಿಧ ಎಡ-ಜಾತ್ಯಾತೀತ ಪಕ್ಷಗಳ ಮುಖಂಡರು ಜುಲೈ 8 ರಂದು ನಡೆದ 'ಕೋಮುವಾದ ಮತ್ತು ಪ್ರತ್ಯೇಕತಾವಾದ ವಿರೋಧಿ' ಸಮಾವೇಶದಲ್ಲಿ ಪ್ರತಿಪಾದಿಸಿದರು.

ಮೇ 24ರಂದು ದಿಲ್ಲಿಯಲ್ಲಿ ನಡೆದ ಸಮಾವೇಶದ ಕರೆಗನುಸಾರವಾಗಿ ಸಿ.ಪಿ.ಐ (ಎಂ) ಮತ್ತು ಸಿ.ಪಿ.ಐ. ಕರ್ನಾಟಕ ಘಟಕಗಳು ಸಂಯುಕ್ತವಾಗಿ ಈ ಸಮಾವೇಶವನ್ನು ಏರ್ಪಡಿಸಿದ್ದವು.

ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್, ಸಿ.ಪಿ.ಐ. ಮುಖಂಡ ಎಂ.ಸಿ. ವೆಂಕಟರಾಮು ಮತ್ತು ಕಾಂಗ್ರೆ ಸಂಸತ್ ಸದಸ್ಯ ಹಾಗೂ ಪ್ರಧಾನ ಕಾರ್ಯದರ್ಶಿ ಆಸ್ಕರ್ ಫೆರ್ನಾಂಡಿಸ್ ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ಸಮಾವೇಶದ ಕಲಾಪಗಳನ್ನು ನಿರ್ವಹಿಸಿತು.

ಕೋಮುವಾದಿಗಳು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ದೇಶದ ವಿವಿಧ ಭಾಗಗಳಲ್ಲಿ ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಜನರನ್ನು ಎಚ್ಚರಿಸುವ ದಿಲ್ಲಿ ಸಮಾವೇಶದ ನಿರ್ಣಯವನ್ನು ಸಿ.ಪಿ.ಐ. ರಾಜ್ಯಮಂಡಳಿ ಕಾರ್ಯದರ್ಶಿ ಎಂ.ಎಸ್. ಕೃಷ್ಣನ್ ಮಂಡಿಸಿದರು. ಜಾತಿ ವಾದಿ, ಪ್ರತ್ಯೇಕತಾವಾದಿಗಳ ಚಟುವಟಿಕೆಗಳು ಜನಸಾಮಾನ್ಯರ, ಅದರಲ್ಲೂ ಮುಖ್ಯವಾಗಿ ದುಡಿಮೆಗಾರರ ಚಳುವಳಿಗೆ ಮಾರಕವಾಗಿ ಪರಿಣಮಿಸುತ್ತಿದೆ. ಅಂಥ ದುಷ್ಟ ಶಕ್ತಿಗಳ ಆಟವನ್ನು ವಿಫಲಗೊಳಿಸಲು ಬಲಿಷ್ಠ ಹೋರಾಟ ನಡೆಸಬೇಕೆಂದು ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್. ಸೂರ್ಯನಾರಾಯಣರಾವ್ ಕರೆ ನೀಡಿದರು.

ಜಮ್ಮು ಕಾಶ್ಮೀರ, ಪಂಜಾಬ್ ಪರಿಸ್ಥಿತಿ ಬಗ್ಗೆ ಪ್ರಸ್ತಾಪಿಸಿದ ಅವರು, ಸಂವಿಧಾನದ 370 ನೇ ವಿಧಿಯನ್ನು ರದ್ದು ಪಡಿಸಬೇಕೆಂದು ಬಿ.ಜೆ.ಪಿ. ನೇತೃತ್ವದ ಮಧ್ಯ ಪ್ರದೇಶ ಸರಕಾರ ಕೈಗೊಂಡ ನಿರ್ಣಯವನ್ನು ಕಟುವಾಗಿ ಖಂಡಿಸಿದರು.

ಅಯೋಧ್ಯೆಯಲ್ಲಿ ಗೆದ್ದು ಬಂದದ್ದು ವಾಮ ಪಕ್ಷದ ಪ್ರತಿನಿಧಿಗಳು ಎಂಬ ಸಂಗತಿಯೇ ಸ್ಥಳೀಯ ಜನರ ಮಾನ್ಯತೆ ಯೇನು, ತೀರ್ಪೇನು ಎಂದು ತೋರಿಸಿ ಕೊಟ್ಟಿದೆ ಎಂಬ ಕಾಂಗ್ರೆಸ್(ಐ)ನ ಸಂಸತ್ ಸದಸ್ಯ ಸಿ.ಕೆ. ಜಾಫರ್ ಷರೀಫ್ ಹಳ್ಳಿಗಳಲ್ಲಿ, ನಗರಗಳ-ಬೀದಿ-ಬೀದಿಗಳಲ್ಲಿ ಕೋಮುಸೌಹಾರ್ದನ, ರಾಷ್ಟ್ರೀಯ ರಕ್ಷಣೆಯ ಅಗತ್ಯದ ಪ್ರಚಾರಮಾಡಬೇಕೆಂದರು.

ಈ ಸಮಾವೇಶ ಸಂಘಟಿಸಲು ಮುತುವರ್ಜಿ ವಹಿಸಿದ ಕೋಮುವಾದದ ವಿರುದ್ಧ ಹೋರಾಟ ನಡೆಸಿರುವ ಉಭಯ ಕಮ್ಯುನಿಸ್ಟ್ ಪಕ್ಷಗಳನ್ನು ಅಭಿನಂದಿಸಿದ ಜನತಾದಳದ ಮುಖಂಡ ಎಂ.ಪಿ. ಪ್ರಕಾಶ್ ಇದು ಎಲ್ಲರೂ ಒಟ್ಟು ಸೇರಿ ಮಾಡಬೇಕಾದ ಕೆಲಸ ಎಂದರು. ಅಲ್ಪ ಸಂಖ್ಯಾತರಿಗೆ ಅಬದ್ರತೆಯ ಭಾವನೆಯಿರುವ ಸಮಾಜ ಆರೋಗ್ಯಕಾರಿ ಸಮಾಜ ಅಲ್ಲ ಎಂದರು. ಎಲ್ಲಾ ರಾಜಕೀಯ ಕಾರ್ಯಕರ್ತರಿಗೂ ಈ ಅಂಶಗಳ ಬಗ್ಗೆ ಸ್ಪಷ್ಟತೆ ಕೊಡಿಸುವುದು ಅಗತ್ಯ ಎಂದರು. ದೇಶದ ಕೋಮು ಸೌಹಾರ್ದ ವಾತಾವರಣ ಹದಗೆಡಿಸುವ ಬಾಬರಿ ಮಸೀದಿ-ರಾಮ ಜನ್ಮಭೂಮಿ ವಿವಾದವನ್ನು ಪ್ರಸ್ತಾಪಿಸಿದ ಸಿ.ಪಿ.ಐ. ರಾಷ್ಟ್ರೀಯ ಮಂಡಳಿ ಕಾರ್ಯದರ್ಶಿ ಹೋಮಿದಾಜಿ ಅವರು. ನ್ಯಾಯಾಲಯದ ತೀರ್ಪನ್ನು ಒಪ್ಪುವುದಿಲ್ಲವೆನ್ನುವ ವಿಶ್ವ ಹಿಂದೂ ಪರಿಷತ್ ಮುಖಂಡರ ನಿಲುವನ್ನು ಟೀಕಿಸಿದರು. ಶ್ರೀರಾಮ ಎಲ್ಲಿ ಜನಿಸಿದ ಎಂಬುದನ್ನು ಲಕ್ನೊ ಹೈಕೋರ್ಟ್ ನ್ಯಾಯಾಧೀಶರು ಹೇಗೆ ತೀರ್ಮಾನಿಸುವರು ಎಂಬ ವಿ.ಎಚ್.ಪಿ. ಮುಖಂಡರ ಪ್ರಶ್ನೆಯನ್ನು ಎತ್ತಿಕೊಂಡ ದಾಜಿ, ಹಾಗಿದ್ದಲ್ಲಿ ವಿ.ಎಚ್.ಪಿ. ಯಾದರೂ ಅದನ್ನು ಹೇಗೆ ನಿರ್ಧರಿಸುವರು ಎಂದು ವ್ಯಂಗವಾಡಿದರು.

ಕೆಲವೊಂದು ಪ್ರದೇಶಗಳಲ್ಲಿ ಸ್ಥಳೀಯರ ಅಸ್ತಿರಕ್ಷಣೆಗೆ ಖಾತರಿ ನೀಡುವಂತಹ ವಿಧಿ ಜಮ್ಮುಂಕಾಶ್ಮೀರದಲ್ಲಿ ಮಾತ್ರವಲ್ಲದೆ ಬೇರೆ ಬೇರೆ ರಾಜ್ಯಗಳಲ್ಲಿಯೂ ಇದೆ. ಹಿಮಾಚಲ ಪ್ರದೇಶದಲ್ಲಿಯೂ ಅಂಥ ವಿಧಿ ಜಾರಿಯಲ್ಲಿದ್ದು ಅದನ್ನು ಹಿಂತೆಗೆಯುವಂತೆ ಅಲ್ಲಿನ ಬಿ.ಜೆ.ಪಿ. ಸರಕಾರವನ್ನು ಮಧ್ಯ ಪ್ರದೇಶದ ಸರಕಾರ ಒತ್ತಾಯಿಸುವುದೇ ಎಂದವರು ಪ್ರಶ್ನಿಸಿದರು.

ಕಾಶ್ಮೀರ, ಪಂಜಾಬ್ ಮತ್ತಿತರ ಸಮಸ್ಯೆಗಳು ಆರ್ಥಿಕ ಅಸಮಾನತೆಯ ಫಲವಾಗಿದ್ದು ಸಮಾನತೆ ಹಾಗೂ ಅಭಿವೃದ್ಧಿಗಾಗಿನ ಹೋರಾಟಗಳು ಪ್ರತ್ಯೇಕತಾವಾದ ಸೋಲಿಸಲು ಬಹಳ ಸಹಕಾರಿಯಾಗುವುವು ಎಂದು ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ನುಡಿದರು.

ದೇಶವನ್ನು ಉಳಿಸುವ ಶಕ್ತಿ ನಮಗಿದೆ ಎನ್ನುವುದನ್ನು ಜನರು ತೋರಿಸಿಕೊಡಬೇಕಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾಯದರ್ಶಿ ಪಿ. ರಾಮಚಂದ್ರರಾವ್ ಕರೆ ನೀಡಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಹಾಲಿ ಜಾನಪದ ಅಕಾಡೆಮಿ ಅಧ್ಯಕ್ಷ ಎಸ್.ಕೆ.ಕರೀಂಖಾನ್ ಅವರು. ಪ್ರಸಕ್ತ ಜಾತೀಯ-ಮತೀಯ ಗಲಭೆಗಳ ಬಗ್ಗೆ ತೀವ್ರಖೇದ ವ್ಯಕ್ತಪಡಿಸಿದರು. ಯಾವುದೇ ಧರ್ಮ ಜನರ ಸಮಸ್ಯೆಗಳನ್ನು ಬಗೆಹರಿಸದು ಎಂದು ಅವರು ಮಾರ್ಮಿಕವಾಗಿ ವಿವರಿಸಿದರು.

ಜನತಾಪಕ್ಷದ ಶಾಸಕ ಸಿ.ಬೈರೇಗೌಡ, ಜನತಾದಳದ ಮುಖಂಡ ಮೊಹಿದ್ದೀನ್, ಬಂಡಾಯ ಸಾಹಿತ್ಯ ಸಂಘಟನೆಯ ಮುಖಂಡ ರಂಜಾನ್‌ದರ್ಗಾ ಅವರೂ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು.

ಕರ್ನಾಟಕ ಪ್ರದೇಶ ಕಾಂಗ್ರೆ ಅಧ್ಯಕ್ಷ ಆಸ್ಕರ್ ಫೆರ್ನಾಂಡಿಸ್ ಸಮಾರೋಪ ಭಾಷಣ ಮಾಡಿ ಸಮಾವೇಶದ ಸಂದೇಶವನ್ನು ಎಲ್ಲಾ ಕಡೆಗೆ ಕೊಂಡೊಯ್ಯ ಬೇಕೆಂದು ನುಡಿದರು.

ಮಧ್ಯಪ್ರದೇಶ ಸರಕಾರದ ಕ್ರಮವನ್ನು ಖಂಡಿಸುವುದನ್ನು ಸೇರಿಸಿಕೊಂಡು ಆರಂಭದಲ್ಲಿ ಮಂಡಿಸಲಾದ ನಿರ್ಣಯವನ್ನು ಸಮಾವೇಶದಲ್ಲಿ ಪಾಲ್ಗೊಂಡವರು ಸ್ಫೂರ್ತಿಯಿಂದ ಅಂಗೀಕರಿಸಿದರು.

ರಾಜ್ಯಮಟ್ಟದ ಸಮಾವೇಶ ನಡೆದ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್ ಕೋಮುವಾದ ವಿರೋಧಿ,ಜಾತ್ಯಾತೀತ, ಪ್ರಗತಿಪರ ಜನರಿಂದ ತುಂಬಿ ತುಳುಕುತ್ತಿತ್ತು. ಹಲವರು ನಿಂತುಕೊಂಡೇ ಕೊನೆ ತನಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಅನೇಕ ಶಾಸಕರೂ ಸಭೆಯಲ್ಲಿದ್ದರು.

ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದ ಇನ್ನಷ್ಟು ಬಲಗೊಳ್ಳಲಿ

ಸಿ.ಪಿ.ಎಸ್.ಯು.ನ 28 ನೇ ಮಹಾಧಿವೇಶನಕ್ಕೆ ಸಿ.ಪಿ.ಐ.(ಎಂ) ಶುಭಾಶಯ

ಸಿ.ಪಿ.ಎಸ್.ಯು.ನ 28 ಮಹಾಧಿವೇಶನದ ಕಲಾಪಗಳು ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಶ್ರಮಿಕ ವರ್ಗದ ಅಂತರ್ರಾಷ್ಟ್ರೀಯತೆಗೆ ತನ್ನ ಬದ್ಧತೆಯನ್ನು ಮತ್ತೊಮ್ಮೆ ಒತ್ತಿ ಹೇಳಿ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದವನ್ನು ಇನ್ನಷ್ಟು ಬಲಗೊಳಿಸುತ್ತದೆ ಎಂದು ಆಶಿಸುತ್ತಾ ಸಿ.ಪಿ.ಐ.(ಎಂ) ಈ ನಿರ್ಣಾಯಕ ಅವಧಿಯಲ್ಲಿ ಎಲ್ಲ ರೀತಿಯ ಯಶಸ್ಸು ಅದಕ್ಕೆ ದೊರೆಯಲಿ ಎಂದು ಹಾರೈಸಿದೆ.

ಜುಲೈ 2 ರಿಂದ ಆರಂಭವಾಗಲಿದ್ದ ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ 28 ನೇ ಮಹಾಧಿವೇಶನದ ಸಂದರ್ಭದಲ್ಲಿ ಸೌಹಾರ್ದ ಶುಭಾಶಯ ಕಳುಹಿಸುತ್ತಾ ಅದು ಹೀಗೆಂದು ಹಾರೈಸಿದೆ. ಶುಭಾಶಯ ಸಂದೇಶದ ಪೂರ್ಣಪಾಠವನ್ನು ಈ ಕೆಳಗೆ ನೀಡಲಾಗಿದೆ.

ಸೋವಿಯೆತ್ ಒಕ್ಕೂಟ ಕಮ್ಯುನಿಸ್ ಪಕ್ಷದ
28 ನೇ ಮಹಾಧಿವೇಶನ

ಮಾನ್ಯ ಸಂಗಾತಿಗಳೇ,

ಸಿ.ಪಿ.ಎಸ್.ಯು.ನ 28 ನೇ ಮಹಾಧಿವೇಶನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತನ್ನ ಹಾರ್ದಿಕ ಸೌಹಾರ್ದ ಶುಭಾಶಯಗಳನ್ನು ಕಳುಹಿಸುತ್ತಿದೆ.

ವಿಶ್ವ ಸಮಾಜವಾದದ ಒಂದು ಅತ್ಯಂತ ನಿರ್ಣಾಯಕ ಗಳಿಗೆಯಲ್ಲಿ ಈ ಮಹಾಧಿವೇಶನ ಸೇರುತ್ತಿದೆ. ಸಿ.ಪಿ.ಎಸ್.ಯು. ಮಾನವ ಕುಲದ ಉಳಿವು ಮತ್ತು ವಿಶ್ವ ಶಾಂತಿಯ ರಕ್ಷಣೆಗಾಗಿ, ಒಂದು ಪರಮಾಣು ಪ್ರಳಯದ ಬೆದರಿಕೆಯನ್ನು ನಿರ್ಮೂಲನ ಮಾಡಲು ಮೊದಲ್ಗೊಂಡ ಕ್ರಮಗಳನ್ನು ಅತ್ಯಂತ ಮೆಚ್ಚುಗೆಯಿಂದ ಸಿ.ಪಿ.ಐ(ಎಂ) ಗಮನಿಸಿದೆ. ಸಮಾಜವಾದಿ ಸೋವಿಯತ್ ಒಕ್ಕೂಟದ ಸ್ಥಾಪನೆಯಾಂದದಿನಿಂದ ಮೊದಲ್ಗೊಂಡ ಕ್ರಮಗಳು ವಿಶ್ವಶಾಂತಿಯ ಶಕ್ತಿಗಳಿಗೆ ನವೋಲ್ಲಾಸ ನೀಡಿ ಸಕಾರಾತ್ಮಕ ಫಲ ನೀಡಿವೆ. ಇತ್ತೀಚಿನ ವರ್ಷಗಳಲ್ಲಿ ಛರ ಪ್ರಯತ್ನ ಯುದ್ಧದ ಬೆದರಿಕೆಯನ್ನು, ಸೆಳೆತವನ್ನು ಸಡಿಲಗೊಳಿಸಲು ಅನುಕೂಲವಾದ ಒಂದು ವಾತಾವರಣವನ್ನು ವಿಶ್ವದಲ್ಲಿ ನಿರ್ಮಿಸಿದೆ.

ಸಿ.ಪಿ.ಎಸ್.ಯು. ಕೈಗೊಂಡಿರುವ ಸುಧಾರಣಾ ಪ್ರಕ್ರಿಯೆಯನ್ನು ಸಿ.ಪಿ.ಐ.(ಎಂ) ಕುತೂಹಲದಿಂದ ವೀಕ್ಷಿಸುತ್ತಿದೆ. ಆರ್ಥಿಕ ಮತ್ತು ರಾಜಕೀಯ ಇವೆರಡೂ ವಲಯಗಳಲ್ಲಿ ಹಿಂದಿನ ವಿಕೃತಿ ಮತ್ತು ತಪ್ಪುಗಳನ್ನು ನಿವಾರಿಸಲು ಸಮಾಜವಾದವನ್ನು ಕ್ರೋಢೀಕರಿಸಿ ಮುನ್ನಡೆಸಲು ಸುಧಾರಣೆಗಳ ಅಗತ್ಯವಿದೆವೆಂಬುದನ್ನು ಸಿ.ಪಿ.ಐ(ಎಂ) ಗುರುತಿಸುತ್ತದೆ. ಈ ಪ್ರಕ್ರಿಯೆ ಈಗ ಒಂದು ಅತ್ಯಂತ ಗಂಭೀರ ಅವಧಿಯ ಮೂಲಕ ಹಾದು ಹೋಗುತ್ತಿದೆ. ಸಮಾಜವಾದವನ್ನು ಮಾರ್ಕ್ಸ್‌ವಾದ ಲೆನಿನ್‌ವಾದದ ಆಧಾರದ ಮೇಲೆ ಬಲಗೊಳಿಸುವ ಸುಧಾರಣೆಗಳನ್ನು ಕ್ರೋಢೀಕರಿಸಲಾಗುವುದು ಎಂದು ಸಿ.ಪಿ.ಐ.(ಎಂ) ಆಶಿಸುತ್ತದೆ.

ವಿಶ್ವ ಮಟ್ಟದಲ್ಲಿ ಸಮಾಜವಾದವನ್ನು ಬುಡಮೇಲು ಮಾಡಲು ಸಾಮ್ರಾಜ್ಯಶಾಹೀ ಶಕ್ತಿಗಳು ಮತ್ತು ವಿಶ್ವ ಪ್ರತಿಗಾಮಿ ಶಕ್ತಿಗಳು ತಮ್ಮ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿವೆ. ಹಲವಾರು ಸಮಾಜವಾದಿ ದೇಶಗಳು ಎದುರಿಸುತ್ತಿರುವ ಕಷ್ಟಗಳ ದುರ್ಲಾಭ ಪಡೆದು ಆ ಶಕ್ತಿಗಳು ಸಮಾಜವಾದ ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದದ ವಿರುದ್ಧ ವಿಶ್ವವ್ಯಾಪಿ ಪ್ರಚಾರವೊಂದನ್ನು ಇನ್ನಷ್ಟು ದುಷ್ಟ ತನದಿಂದ ಹರಿಯಬಿಟ್ಟಿದೆ. ಸಮಾಜವಾದವನ್ನು ಒಳಗಿನಿಂದಲೇ ಬುಡಮೇಲು ಮಾಡುವ

ಪುಟ 7 ಕ್ಕೆ

ಎದೆಯ ಮೇಲೆ ಹೆಡೆಯೆತ್ತಿದ್ದ ಸರ್ಪ ಕೆಳಗೆ ಪೋಲೀಸರ ದರ್ಪ

ಕಯ್ಯೂರು ರೈತರ ಹೋರಾಟ ನಡೆದಿರುವಾಗ ಈಗಿನ ಕೇರಳದ ಮುಖ್ಯಮಂತ್ರಿ ಕಾಂ. ಇ.ಕೆ. ನಯನಾರ್‌ರವರು ಹದಿಹರೆಯದ ಹುಡುಗ. ಈ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಯಾದವರು. ಆಗ ಕಯ್ಯೂರು ಹೋರಾಟಗಾರರ ಬಂಧನ, ದಬ್ಬಾಳಿಕೆಯು ತೀವ್ರವಾಗಿದ್ದವು. ಕಾಂ. ನಯನಾರ್ ಭೂಗತರಾಗಿದ್ದರು. ಅವರನ್ನು ಜೀವಂತವಾಗಿ ಹಿಡಿಯುವುದು ಅಥವಾ ಶವವನ್ನಾದರೂ ಒದಗಿಸಬೇಕೆಂದು ಆಜ್ಞೆಯಾಗಿತ್ತು. ಕೊನೆಗೆ ಕಾಂ. ನಯನಾರ್‌ರವರು ಭೂಗತರಾಗಿದ್ದ ಕಾಡಿನ ಸ್ಥಳದ ಮಾಹಿತಿ ಪೋಲೀಸರಿಗೆ ದೊರೆತು ಸುತ್ತಲಿನಿಂದಲೂ ಆಕ್ರಮಣ ಗೈದರು. ಇದು ತಿಳಿದ ಕಾಂ. ನಯನಾರ್ ತಪ್ಪಿಸಿಕೊಳ್ಳಲು ಜಾಗವೊಂದನ್ನು ಅರಸುತ್ತಾ ಹೋದರು. ಕೆಳಗಿನ ಶಬ್ದಗಳನ್ನು ಆಲಿಸಿ ಪೋಲೀಸರ ಚಲನವಲನಗಳನ್ನು ಗಮನಿಸುತ್ತಿದ್ದ ಕಾಂ. ನಯನಾರ್ ಸ್ವಲ್ಪ ಸ್ವಲ್ಪವೇ ಉಸಿರಾಡುತ್ತ ಜಾಗರೂಕತೆಯಿಂದಿದ್ದರು. ಆಗ.. ಇದ್ದಕ್ಕಿದ್ದಂತೆ ಹೊಟ್ಟೆಯ ಮೇಲೆ ಏನೋ ಹರಿದಾಡಿದಂತಾಯಿತು. ನಿಧಾನಕ್ಕೆ ಅದು ಎದೆಯ ಮೇಲಕ್ಕೇರತೊಡಗಿತ್ತು. ಸರಕ್ಕನೇ ನೋಡುತ್ತಾರೆ ಅದು ನಾಗರ ಹಾವು! ತಕ್ಷಣ ಕಾಂ. ನಯನಾರ್‌ರವರು ಕಣ್ಣು ಮುಚ್ಚಿದರು.ಎದೆ ಮೇಲೆ ಹೆಡೆಯೆತ್ತಿದ್ದ ಸರ್ಪ, ಕೆಳಗೆ ಪ್ರಾಣದ ಬೇಟೆಯಾಡಲು- ಕಾದು ಕುಳಿತ ಪೋಲೀಸರ ಬಂದೂಕುಗಳು! ಕಣ್ಣು ಮುಚ್ಚಿದವರೇ ಶವದಂತೆ ಮಲಗಿ ಉಸಿರಾಟ ನಿಲ್ಲಿಸಿದರು. ಆಚೀಚೆ ನೋಡಿದ ನಾಗರ ನಿಧಾನಕ್ಕೆ ಕೆಳಗಿಳಿದುಹೋಯಿತು.

ಇತಿಹಾಸ ಪುಟಗಳಿಂದ

ಕೊನೆಗೆ ಉತ್ತರದ ಪ್ರದೇಶವೊಂದರಲ್ಲಿ ಬೃಹದಾಕಾರದ ಬಡೆಯೊಂದು ಕಂಡಿತು. ಸರಸರನೇ ಅದರಮೇಲೇರಿದವರೇ ಆಕಾಶಕ್ಕೆ ಮುಖ ಮಾಡಿ ಮಲಗಿದರು. ಪೋಲೀಸರ ತಂಡ ಹುಡುಕತ್ತಾ ಬಂತು! ಕಂಡಲ್ಲಿ ಗುಂಡು ಹಾಕಲು ಆಜ್ಞೆ ಪಡೆದಿದ್ದ ಪೋಲೀಸರು ಬಂದೂಕಗಳೊಂದಿಗೆ ಸುತ್ತಿ ಸುತ್ತಿ ಸುಸ್ತಾದ್ದರಿಂದ ಕೊಂಚ ವಿಶ್ರಮಿಸಿಕೊಳ್ಳವೆಂದು ಅದೇ ಹೆಬ್ಬಂಡೆಯ ಕೆಳಗೆ ಕುಳಿತರು. ಅವರು ಕದಲುವವರೆಗೂ ಮಿಸುಕದೇ ಮಲಗಲೇ ಬೇಕಿತ್ತು. ಹೋದ ಜೀವ ಬಂದಂತಾಗಿ ಕಾಂ. ನಯನಾರ್‌ರವರು ಉಸಿರಾಡ ತೊಡಗಿದರು. ಆಗಲೇ ವಿಶ್ರಾಂತಿ ಹೆಚ್ಚಾಯಿತೆಂದು ಕೊಂಡು ಪೋಲೀಸ್ ಅಧಿಕಾರಿ ಎಲ್ಲರನ್ನೂ ಕೂಗಿ ಕರೆದ. ಮತ್ತೆ ಹುಡುಕಾಟ ಆರಂಭಿಸಿದರು. ಅವರು ಮರೆಯಾದ ಮೇಲೆ ಕಾಂ. ನಯನಾರ್‌ರವರು ಬಡೆಯಿಂದ ಕೆಳಗಿಳಿದು ಮತ್ತೆ ಭೂತರಾಗಿ ಕಣ್ತಪ್ಪಿಸಿ ಕೊಂಡರು.

— ಇ.ಕೆ.ಎನ್. ರಾಜನ್
ಎಸ್.ವೈ. ಗುರುಶಾಂತ್

ಜುಲೈ 30:ಬ್ಯಾಂಕ್‌ಗಳ ಮುಂದೆ ರೈತರ ಧರಣಿ

ಇತ್ತೀಚೆಗೆ ಬೆಂಗಳೂರಿನಲ್ಲಿ ಸೇರಿದ್ದ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಜುಲೈ 30ರಂದು ರಾಜ್ಯಾದ್ಯಂತ ಬ್ಯಾಂಕ್‌ಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದೆ.

ರಾಷ್ಟ್ರೀಯರಂಗ ಸರ್ಕಾರ ಸಾಲಮನ್ನಾ ಘೋಷಣೆಯ ಭಾಗವಾಗಿ ಕೇಂದ್ರ ಸರಕಾರ ಬ್ಯಾಂಕ್‌ಗಳಿಗೆ ಸರಕಾರಿಆಜ್ಞೆಯನ್ನು ಕಳಿಸಿದೆ. ಅದರ ನಿರ್ದೇಶನದಲ್ಲಿ ಬ್ಯಾಂಕುಗಳು ಯಾರ ಸಾಲವನ್ನು ಮನ್ನಾಮಾಡುವುದೆಂದು ಸಮೀಕ್ಷೆ ನಡೆಸುತ್ತಿದ್ದಾರೆ.

ಎಲ್ಲಾ ರೈತರು ತಮ್ಮ ಸಾಲ ಮನ್ನಾವಾಗುತ್ತದೆಂದು ನಂಬಿ ಕುಳಿತಿದ್ದಾರೆ ಆದರೆ ವಸ್ತು ಸ್ಥಿತಿ ಬೇರೆಯಾಗಿದೆಯೆಂಬುದನ್ನು ಪ್ರಾಂತ ರೈತ ಸಂಘ ಅಧ್ಯಯನ ನಡೆಸಿ ಸಾಲ ಮನ್ನಾಕ್ಕಾಗಿ ಚಳುವಳಿ ನಡೆಸಲು ತೀರ್ಮಾನಿಸಿದೆ.

ಕೇಂದ್ರ ಸರಕಾರದ ಆಜ್ಞೆಯ ಪ್ರಕಾರ ಅಕ್ಟೋಬರ್ 2-1986ರವರೆಗೆ ಸಾಲ ಕಟ್ಟದೆಯಿರುವ ಸುಸ್ತಿಬಡ್ಡಿ ಸಾಲವನ್ನೆಲ್ಲಾಮನ್ನಾ ಮಾಡಲಾಗುವುದು. ಅಕ್ಟೋಬರ್2, 1986ರ ನಂತರ ಅಕ್ಟೋಬರ್ 2-1989 ರವರೆಗೆ ಪಡೆದ ರೈತ ಕೃಷಿ ಕೂಲಿ ಕಾರರ ಸಾಲವನ್ನು ಈ ಕೆಳಗಿನ ಶರತ್ತುಗಳನ್ನು ಆಧರಿಸಿ ಮನ್ನಾಮಾಡಲಾಗುವುದು.

ಶರತ್ತು:- ಯಾವುದೇ ಪ್ರದೇಶದಲ್ಲಿ ಬರಗಾಲ, ನೆರೆಹಾವಳಿ, ಚಂಡ ಮಾರುತ, ಇತರ ಪ್ರಕೃತಿ ವಿಕೋಪಗಳಿಂದ ನಿರಂತರವಾಗಿ ಎರಡು ವರ್ಷ ಬೆಳೆಬಾರದೆಯಿರಬೇಕು.

ಕಂದಾಯ ಇಲಾಖೆಯ ಅಧಿಕಾರಿಗಳಿಂದ ಅದನ್ನು ಗುರುತಿಸಿ 37%ಕ್ಕಿಂತಲೂ ಕಡಿಮೆ ಬೆಳೆಬಂದಿದೆಯೆಂದು ಘೋಷಿಸಿ ಸರಕಾರಿ ಆಜ್ಞೆಯನ್ನು ಜಿಲ್ಲಾಧಿಕಾರಿಯಿಂದ ಹೊರಡಿಸಿದ್ದರೆ ಮಾತ್ರ ಅಂತಹ ಹಳ್ಳಿಯ ರೈತರ ಸಾಲಮನ್ನಾ ವಾಗುತ್ತದೆ.

ಇಲ್ಲವಾದಲ್ಲಿ ಸಾಲ ಪಡೆದ ರೈತ ಸತ್ತು ಹೋಗಿದ್ದರೆ ಅವನ ಸಾಲ ಮೇಲಿನ ಶರತ್ತಿಲ್ಲದೆ ಮನ್ನಾಮಾಡಲಾಗುವದು. ರಾಜ್ಯ ಸರಕಾರ ಇನ್ನೂವರೆಗೆ ಭೂಅಭಿವೃದ್ಧಿ ಬ್ಯಾಂಕ್ ಸಹಕಾರಿ ಸಂಘಗಳ ಸಾಲದ ಕುರಿತು ಯಾವ ರೀತಿ ಮನ್ನಾಮಾಡಲು ತನ್ನ ಅಭಿಪ್ರಾಯವನ್ನು ಘೋಷಿಸಿಲ್ಲ.

ಇದರಿಂದಾಗಿ ಕೇವಲ ಕೈ ಬೆರಳಿನಿಂದ ಎಣಿಸಲು ಸಾಧ್ಯವಾಗುವಂತಹ ರೈತರ ಸಾಲ ಮನ್ನಾವಾಗಿ ಬಹುಸಂಖ್ಯಾತರು ಇದರಿಂದ ವಂಚಿತರಾಗುತ್ತಾರೆಂಬುದನ್ನು ಗಮನಿಸಿ ಎಲ್ಲಾ ರೈತರಿಗೆ ಈ ಸೌಲಭ್ಯ ಸಿಗಲು ಒತ್ತಾಯಿಸಿ ಪ್ರಾಂತ ರೈತ ಸಂಘ ರಾಜ್ಯ ವ್ಯಾಪಿ ಚಳುವಳಿಯನ್ನು ನಡೆಸಲು ಕರೆಕೊಡುತ್ತದೆ.

ಮೊದಲನೇ ಹಂತವಾಗಿ ಜುಲೈ 30 ರಂದು ಎಲ್ಲಾ ಬ್ಯಾಂಕಿನ ಮುಂದೆ ಧರಣಿನಡೆಸುವುದು ಅದರ ಮುಖಾಂತರ ರೈತರಿಗೆ ಸಾಲಮನ್ನಾ ಕುರಿತು ಅರಿವು ಮೂಡಿಸಲು ತೀರ್ಮಾನಿಸಲಾಗಿದೆ.

ಎರಡನೇ ಹಂತವಾಗಿ ಸಾಲಮನ್ನಾ ಬೇಡಿಕೆ ಜೊತೆಗೆ ವಿದ್ಯುತ್ ಸಮಸ್ಯೆ ಹಾಗೂ ರಾಜ್ಯಪಾಲರ ಆಡಳಿತದ ಅವಧಿಯಲ್ಲಿ ರಾಜಭವನ ಪಿಕೆಟಿಂಗ್‌ನಲ್ಲಿ ಒಳಗೊಂಡ ಬೇಡಿಕೆಗಳಾದ ಭೂಮಿ, ಹಸಿರುಕಾರ್ಡ್, ಪ್ರಶ್ನೆಯನ್ನು ಸೇರಿಸಿ ಐದು ಬೇಡಿಕೆಗಳಿಗಾಗಿ ಆಗಸ್ಟ್ ತಿಂಗಳಲ್ಲಿ ರೈತರ ಕೃಷಿ ಕೂಲಿಕಾರರಿಂದ ದೊಡ್ಡ ಸಂಖ್ಯೆಯಲ್ಲಿ ಸಹಿ ಸಂಗ್ರಹಣೆ ನಡೆಸಲು ಪ್ರಾಂತ ರೈತ

ಕಾರ್ಮಿಕ ವಿವಾದಗಳ ಇತ್ಯರ್ಥ ಬಗ್ಗೆ ಸರಕಾರದ ಭರವಸೆ

ಅಪೋಲೋಫುಟ್ ವೇರ್, ಹರ್ಬರ್ಟ್ ಇಂಡಿಯಾ, ಶಿವಮಣಿ ಸ್ಟೀಲ್ ಟ್ಯೂಬ್ಸ್ ಮತ್ತಿತರೆಡೆ ಕೈಗಾರಿಕಾ ವಿವಾದದಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿ ಜುಲೈ 9 ರಂದು ವಿಧಾನಸೌಧದೆದುರು ಧರಣಿ ನಡೆಲಾಯಿತು. ಅದರ ಮೊದಲು ಮೈಸೂರು ಬ್ಯಾಂಕ್ ವೃತ್ತದಿಂದ ಕಾರ್ಮಿಕರ ಮೆರವಣಿಗೆ ನಡೆಯಿತು. ಧರಣಿ ಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷ ಕಾಂ.ಎಸ್.ಸೂರ್ಯ ನಾರಾಯಣ್ ರಾವ್ ಹಾಗೂ ಅಸೆಂಬ್ಲಿ ಯಲ್ಲಿ ವಿರೋಧ ಪಕ್ಷದ ಉಪಮುಖಂಡ ಪಿ.ಜಿ. ಆರ್. ಸಿಂಧ್ಯಾ ಮಾತನಾಡಿದರು.

ಸೂರ್ಯನಾರಾಯಣ್‌ರಾವ್, ಜಾನ್ ವಿನ್ಸೆಂಟ್, ಬಿ.ಎಲ್. ಶೃಂಗೇಶ್ವರ್ ಮತ್ತು ಗೋಪಾಲಗೌಡರನ್ನೊಳಗೊಂಡ ನಿಯೋಗ ವೊಂದು ಪಿ.ಜಿ.ಆರ್. ಸಿಂಧ್ಯಾರೊಂದಿಗೆ ಕಾರ್ಮಿಕ ಮಂತ್ರಿ ಕೆ.ಹೆಚ್. ಪಾಟೀಲ್ ರನ್ನು ಭೇಟಿ ಮಾಡಿ ಸರಕಾರ ಮಧ್ಯ ಪ್ರವೇಶದ ಅಗತ್ಯದ ಬಗ್ಗೆ ವಿವರಿಸುವ ಮನವಿ ಪತ್ರವನ್ನು ಸಲ್ಲಿಸಿತು. ನವದೆಹಲಿ ಯಲ್ಲಿ ಆಗಸ್ಟ್ 20 ರಂದು ಶಿವಮಣಿ ಸ್ಟೀಲ್ ಬಗ್ಗೆ ಬಿ.ಐ.ಎಫ್.ಆರ್. ಸಭೆ ಯಲ್ಲಿ ಭಾಗವಹಿಸಲು ತನ್ನ- ಕಾರ್ಯ ದರ್ಶಿಯನ್ನು ಕಳುಹಿಸುವುದಾಗಿ ಹಾಗೂ ಅಪೋಲೋ ಫುಟ್‌ವೇರ್‌ನಲ್ಲಿ ತ್ರಿಪಕ್ಷೀಯ ಸಭೆ ಕರೆಯುವುದಾಗಿಯೂ, ಅದಕ್ಕೆ ವ್ಯವಸ್ಥಾಪಕ ವರ್ಗ ಬಂದಿದ್ದರೆ ಅಲ್ಲಿ ಈಗಿರುವ ಲಾಕೌಟ್‌ನ ಮುಂದುವರಿಕೆ ಯನ್ನು ನಿಷೇಧಿಸುವುದಾಗಿ ಮಂತ್ರಿಗಳು ಆಶ್ವಾಸನೆ ನೀಡಿದರು.

ಶಿಕ್ಷಣ ಆಯುಕ್ತರ ಆಜ್ಞೆಗೆ ಎಸ್.ಎಫ್.ಐ. ಸ್ವಾಗತ

ಅರ್ಹ ಎಲ್ಲ ವಿದ್ಯಾರ್ಥಿಗಳಿಗೆ ಪ್ರಥಮ ಪಿ.ಯು.ಸಿ. ಪ್ರವೇಶವನ್ನು ನೀಡ ಬೇಕೆಂದು, ಯಾವುದೇ ಕಾರಣದಿಂದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಬಾರ ದೆಂದು ರಾಜ್ಯದ ಎಲ್ಲ ಕಾಲೇಜುಗಳ ಪ್ರಾಂಶುಪಾಲರಿಗೆ ರಾಜ್ಯ ಶಿಕ್ಷಣ ಆಯುಕ್ತರು ನೀಡಿರುವ ಆಜ್ಞೆ ಯನ್ನು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿ ಸ್ವಾಗತಿಸುತ್ತಾ ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕಟ್ಟಡ, ಉಪನ್ಯಾಸಕರು ಮುಂತಾದ ಸೌಲಭ್ಯ ಗಳನ್ನು ಆದಷ್ಟು ಬೇಗ ಒದಗಿಸಲು ಕ್ರಮವಹಿಸಬೇಕೆಂದು ಆಗ್ರಹಪಡಿಸಿದೆ.

ಶೈಕ್ಷಣಿಕ ಹತ್ತಾರು ವರ್ಷ ಆರಂಭವಾಗಿ ದಿನಗಳು ಕಳೆದಿದ್ದರೂ, ರಾಜ್ಯಾದ್ಯಂತ ಸುಮಾರು 20-30 ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗದೇ ಅನುಭವಿಸಿದ ಬವಣೆ, ವಿದ್ಯಾರ್ಥಿ ಪೋಷಕರ ಪ್ರತಿಭಟನೆಗಳು, ಎಸ್.ಎಫ್.ಐ. ಜುಲೈ 2 ರಂದು ಪ್ರವೇಶ ನೀಡಿಕೆ ಮುಂತಾದ ತುರ್ತು ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ವಿಧಾನ ಸೌಧದ ಎದುರು ರಾಜ್ಯ ಮಟ್ಟದ ಪ್ರದರ್ಶನ ನಡೆಸಿತ್ತು. ಹಾಗೂ ಶಿಕ್ಷಣ ಸಚಿವರ ಜೊತೆ ಮಾತುಕತೆ ನಡೆಸಿತ್ತು.

ರಾಜ್ಯ ಸರ್ಕಾರದ ತೊಘಲಕ್ ಆಡಳಿತ ಮಾದರಿ ವರ್ಗಾವಣೆಯಿಂದ, ತಮ್ಮ ವಿಷಯಗಳಿಲ್ಲದಿರುವ . ಕಾಲೇಜುಗಳಿಗೆ ಉಪನ್ಯಾಸಕರ ವರ್ಗಾವಣೆ, ಕೆಲವು ಕಾಲೇಜುಗಳಲ್ಲಿ 10-20 ಉಪನ್ಯಾಸಕರ ವರ್ಗಾವಣೆ ಮಾಡಿ ಖಾಲಿ ಇರುವ ಆ ಹುದ್ದೆಗಳಿಗೆ ಒಬ್ಬರನ್ನಾದರೂ ವರ್ಗಾವಣೆ ಮಾಡದಿರುವುದು ಖಂಡನಾರ್ಹ. ಇದನ್ನು ಕೂಡಲೇ ಸರಿಪಡಿಸಬೇಕು ಮತ್ತು ಸಮಸ್ಯೆಯ ಖಾಯಂ ಪರಿಹಾರಕ್ಕಾಗಿ ಉಪನ್ಯಾಸಕರನ್ನು ತಕ್ಷಣ ನೇಮಕಾತಿ ಮಾಡಬೇಕೆಂದುಎಸ್.ಎಫ್.ಐ. ರಾಜ್ಯ ಸಮಿತಿ ಒತ್ತಾಯಿಸಿದೆ.

ಸಾಕ್ಷರತಾ ಆಂದೋಲನದ ಯಶಸ್ವಿಗೆ ಡಿ.ವೈ.ಎಫ್.ಐ. ಯತ್ನ

ವಯಸ್ಕರ ಶಿಕ್ಷಣ ಪರಿಸ್ಥಿತಿಯಲ್ಲಿನ ಕೊರತೆಗಳನ್ನು ನೀಗಿಸಿ- ಪೂರ್ಣವಾಗಿ ಸ್ವಯಂಸೇವಾ ನೆಲೆಯಲ್ಲಿ ಜಾರಿಗೊಳಿಸ ಲ್ಪಡಲಿರುವ ಸಂಪೂರ್ಣ ಸಾಕ್ಷರತಾ ಆಂದೋಲನ ಯಶಸ್ವಿಯಾಗುವುದು ಅತೀ ಅಗತ್ಯ; ವರ್ಷಗಳಿಂದ ಶಿಕ್ಷಣದಿಂದ ವಂಚಿಸಲ್ಪಟ್ಟ ಜನ ಸಮುದಾಯಕ್ಕೆ ಓದುಬರಹದೊಂದಿಗೆ ಅರಿವು ಹಾಗೂ ಪ್ರತಿಭಟನಾಧ್ವನಿಯನ್ನು ಈ ಆಂದೋಲನ ನೀಡುವಂತಾಗಬೇಕು ಎಂದು ಆಶಿಸಿರುವ ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಸಮಿತಿ ಜಿಲ್ಲೆಯಾದ್ಯಂತ ಕಾರ್ಯಕ್ರಮದ ವ್ಯಾಪಕ ಪ್ರಚಾರಕ್ಕಾಗಿ ಕರಪತ್ರ, ಗೋಡೆ ಬರಹ, ಬ್ಯಾನರ್‌ಗಳನ್ನು ಸಂಘಟಿಸಲಿದೆ. ಬೀದಿ ನಾಟಕ–ಹಾಡುಗಳ ಕಾರ್ಯಕ್ರಮವನ್ನು ರೂಪಿಸಲಿದೆ ಎಂದು ತಿಳಿಸಿದೆ.

ಇದೊಂದು ಸರಕಾರದ ಕಾರ್ಯಕ್ರಮ ವಾಗದೆ ಜನ ಆಂದೋಲನವಾಗಿ ಮೂಡಿ ಬರಲು ಜನತೆ ಅದರಲ್ಲೂ ವಿಶೇಷವಾಗಿ ವಿದ್ಯಾವಂತ ಯುವಜನತೆ ಪ್ರತಿಜ್ಞಾ ಪೂರ್ವಕವಾಗಿ ದುಡಿಯಲು ಡಿವೈಎಫ್ಐ ವಿನಂತಿಸಿದೆ.

ಬಳ್ಳಾರಿ: ಪ್ರಿಂಟಿಂಗ್ ಪ್ರೆಸ್ ಕಾರ್ಮಿಕರ ಎಚ್ಚರಿಕೆ

ಬಳ್ಳಾರಿ ನಗರದಲ್ಲಿ ಸುಮಾರು 60 ಪ್ರಿಂಟಿಂಗ್ ಪ್ರೆಸ್‌ಗಳಿದ್ದು ಇದರಲ್ಲಿ 150 ಕ್ಕೂ ಮೇಲ್ಪಟ್ಟು ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಕರ್ನಾಟಕ ಸರಕಾರವು ಪ್ರಿಂಟಿಂಗ್ ಪ್ರೆಸ್ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಕಳೆದ ನವೆಂಬರಿನಲ್ಲಿ ನಿಗದಿ ಪಡಿಸಿದ್ದು ಇವೆಲ್ಲವೂ ಕಾರ್ಮಿಕ ಅಧಿ ಕಾರಿಗಳ ನಿರ್ಲಕ್ಷ್ಯದಿಂದ ಬೇಜವಾಬ್ದಾರಿ ತನದಿಂದ ಜಾರಿಗೆ ಬರದಂತಾಗಿದೆ.

ಈಗ ಕೊಡುತ್ತಿರುವ ವೇತನ ಬಹಳ ಕಡಿಮೆ ಇದ್ದು ದಿನೇ ದಿನೇ ಬೆಲೆ ಏರಿಕೆಯ ದಾಳಿಯಿಂದ ಭಯಭೀತರಾಗಿ ರುತ್ತಾರೆ. ಸೇವಾ ಭದ್ರತೆಯಿಲ್ಲದೇ ಕೆಲಸ ಮಾಡುವ ಪ್ರದೇಶದಲ್ಲಿ ಯಾವುದೇ ರೀತಿಯ ಸೌಲಭ್ಯಗಳಿಲ್ಲದೇ ಕೆಲಸ ನಿರ್ವಹಿಸುತ್ತಿರುವ ಈ ಪರಿಸ್ಥಿತಿಯಲ್ಲಿ ಸಿ.ಐ.ಟಿ.ಯು. ನಾಯಕತ್ವದಲ್ಲಿ ಬಳ್ಳಾರಿ ಪ್ರಿಂಟಿಂಗ್ ಪ್ರೆಸ್ ವರ್ಕರ್ಸ್ ಯೂನಿ ಯನ್ ಪ್ರಾರಂಭಗೊಂಡು, ಈ ಕಾರ್ಮಿಕರ ಕನಿಷ್ಠ ವೇತನಕ್ಕಾಗಿ ಮತ್ತಿತರ ಬೇಡಿಕೆಗೆ ಸಂಬಂಧಿಸಿದಂತೆ ಪ್ರೆಸ್ ಮಾಲೀಕರಿಗೆ ನೋಟೀಸ್ ನೀಡಲಾಗಿದ್ದು 15 ದಿನಗಳೊಳಗಾಗಿ ಸೂಕ್ತ ಕ್ರಮ ವಹಿಸದಿದ್ದರೆ, ಮುಂದಿನ ಹೋರಾಟ ರೂಪಿಸುವುದಾಗಿ ಎಚ್ಚರಿಕೆ ನೀಡಲಾಗಿದೆ ಎಂದು ಸಂಘದ ಅಧ್ಯಕ್ಷರು ಶ್ರೀ ರಘುನಾಥ ಹಾಗೂ ಪ್ರಧಾನ ಕಾರ್ಯದರ್ಶಿ ಆರ್. ಅಂಬಣ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖಾಸಗಿ ಬಸ್ ದರ ಏರಿಕೆಯ ವಿರುದ್ಧ ಬಸ್ ತಡೆ

ದ.ಕ. ಜಿಲ್ಲೆಯ ಖಾಸಗೀ ಬಸ್ ಮಾಲಿಕರು ಶೇಕಡಾ 30 ರಿಂದ 40 ರಷ್ಟು ದರ ಏರಿಸಿದುದನ್ನು ಪ್ರತಿಭಟಿಸಿ ಡಿವೈಎಫ್ಐ ಉಳ್ಳಾಲ ವಲಯ ಸಮಿತಿಯ ನೇತೃತ್ವದಲ್ಲಿ ಯುವಜನರು ತೊಕ್ಕೋಟಿನಲ್ಲಿ 5-7-90 ರಂದು ಬೆಳಗ್ಗೆ ಘಂಟೆ 6.30 ರಿಂದ 8.30 ರ ವರೆಗೆ ಬಸ್ ತಡೆಯುವುದರಲ್ಲಿ ಯಶಸ್ವಿಯಾದರು. ಉಳ್ಳಾಲ ಪೋಲೀಸರು ಹೆಚ್ಚಿನ ಸಿಬ್ಬಂದಿ ಯೊಂದಿಗೆ ಬಂದು 57 ಕಾರ್ಯಕರ್ತ ರನ್ನು ಬಂಧಿಸಿದರು. ಈ ಹೋರಾಟಕ್ಕೆ ಅಪಾರ ಜನ ಬೆಂಬಲ ದೊರೆಯಿತು. ದರ ಇಳಿಸದಿದ್ದಲ್ಲಿ ಹೋರಾಟ ತೀವ್ರಗೊಳಿಸಲು ಡಿವೈಎಫ್ಐ ಆಲೋಚಿಸುತ್ತಿದೆ. ಯು. ಜನಾರ್ಧನ ನಾಯಕ್, ಯು.ಪಿ.ಡಿ. ಸೋಜ, ಸುಕುಮಾರ್, ಕೃಷ್ಣಪ್ಪ ಟೈಲರ್, ವಿಠಲ ಶ್ರೀಯಾನ್, ಪಿ. ಬಾಬು, ಯುವಜನತಾದಳದ ನಜೀರ್ ಉಳ್ಳಾಲ್, ಹೋರಾಟದ ನೇತೃತ್ವ ವಹಿಸಿದ್ದರು.

ಹೋಟೆಲ್ ಮಾಲೀಕರ ವಿರುದ್ಧ ಉಗ್ರ ಕ್ರಮಕ್ಕೆ ಒತ್ತಾಯ

ತಾ. 25-6-90 ರಂದು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸರ್ವ ಸದಸ್ಯರ ಸಭೆಯು ಕಾಂ. ಗಣಪತಿ ಹೆಗಡೆಯವರ ಅಧ್ಯಕ್ಷತೆಯಲ್ಲಿ, ನಗರದ ಎನ್.ಜಿ.ಓ. ಸಭಾಂಗಣದಲ್ಲಿ ನಡೆಯಿತು. ಸಭೆಯ ಕಾರ್ಯಕಲಾಪಗಳ ಮೊದಲು ಅಗಲಿದ ಹಿರಿಯ ಕ್ರಾಂತಿಕಾರಿ ನಾಯಕರಾದ ಕಾಂ. ಬಿ.ಟಿ.ಆರ್. ರವರಿಗೆ ಸಂತಾಪವನ್ನು, ಎರಡು ನಿಮಿಷಗಳ ಮೌನಾಚರಣೆಯ ಮೂಲಕ ಸಲ್ಲಿಸಲಾ ಯಿತು. ನಂತರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಕಾಂ. ಇ ಕೆ.ಎನ್. ರಾಜನ್‌ರವರು ಸಂಘದ ವರದಿಗಳ ಚಟುವಟಿಕೆಗಳನ್ನು ಮಂಡಿಸಿದರು. 1989 ರ ಲೆಕ್ಕ ಪತ್ರವನ್ನು ಖಜಾಂಚಿಯ ಅಭಾವದಲ್ಲಿ ಪ್ರಧಾನ ಕಾರ್ಯದರ್ಶಿ ಯವರೇ ಮಂಡಿಸಿದರು. ಈ ಸಭೆಯು ಅನೇಕ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಿತು.

1986 ರ ಕಾರ್ಮಿಕ ಮಂತ್ರಿಗಳ ಸಮ್ಮೇಳನ ಅಂಗೀಕರಿಸಿದ ಗ್ರಾಹಕ, ಬೆಲೆ ಸೂಚ್ಯಂಕ 50 ಪಾಯಿಂಟು ಹೆಚ್ಚಿದರೆ ಕನಿಷ್ಠ ಕೂಲಿಯನ್ನು ಪುನರ್ ವಿಮರ್ಶಿಸುವುದು ಎಂಬ ನಿರ್ಣಯ ವನ್ನು ಕರ್ನಾಟಕ ಸರ್ಕಾರ ಆರು ವರ್ಷಗಳ ನಂತರ ಕಳೆದ ತಿಂಗಳಲ್ಲಿ, ಹೋಟೆಲ್ ಕಾರ್ಮಿಕರಿಗೆ ಕನಿಷ್ಠ ವೇತನ ಪುನರ್ ವಿಮರ್ಶಿಸಿದೆ. ಆದರೆ, ಇದು ಮೊದಲಿನ ಮೂಲ ವೇತನವಾಗಿದೆ ಹಾಗೂ ಒಂದು ಪೈಸೆ ಹೆಚ್ಚಳವೂ ಆಗಿಲ್ಲ ಆದ್ದರಿಂದ ಇದು ಹೋಟೆಲ್ ಕಾರ್ಮಿಕರನ್ನು ವಂಚಿಸುವ ತಂತ್ರವಾಗಿದೆ ಎಂದು ಸಂಘವು ತೀವ್ರವಾಗಿ ಖಂಡಿಸಿ, ರೂ. 1250 ಗಳನ್ನು ಕನಿಷ್ಠ ಕೂಲಿಯಾಗಿ ಹಾಗೂ ಪ್ರತಿ ಒಂದು ಪಾಯಿಂಟಿಗೆ ರೂ. 1-30 ತುಟ್ಟಿ ಭತ್ಯೆಯನ್ನು ನೀಡಬೇಕೆಂದು ಒತ್ತಾಯಿಸಿದೆ.

ಸ್ವಯಂ ಸೇವೆಯ ಹೋಟೆಲ್‌ಗಳು ನಗರದಲ್ಲಿ ಶೀಘ್ರವಾಗಿ ತಲೆ ಎತ್ತುತಿದ್ದು ಅದರಿಂದ ಕಾರ್ಮಿಕರಿಗೆ ಯಾವ ರೀತಿಯಲ್ಲಿ ಪ್ರಯೋಜನವಾಗದೆ ಇದೊಂದು ಕಾರ್ಮಿಕರನ್ನು ಕಡಿಮೆ ಪ್ರಮಾಣದಲ್ಲಿ ತೆಗೆದುಕೊಂಡು ಹೆಚ್ಚು ಲಾಭಗಳ ಸಂದು ಉದ್ದೇಶದ್ದಾಗಿದೆ. ಆದ್ದರಿಂದ ಸರ್ಕಾರವು ಇಂತಹ ಸ್ವಯಂ ಸೇವೆ ಹೋಟೆಲುಗಳಿಗೆ ಲೈಸನ್ಸ್‌ಗಳನ್ನು ನೀಡಬಾರದೆಂದು ಒತ್ತಾಯಿಸಿದೆ.

ಸೆಕ್ಯುರಿಟಿ ವಿಭಾಗದವರನ್ನು ಗುತ್ತಿಗೆ ಆಧಾರದಲ್ಲಿ ತೆಗೆದುಕೊಂಡು ಅವರಿಗೆ ಯಾವುದೇ ಸೇವಾ ರಕ್ಷಣೆಯನ್ನು ನೀಡಿಲ್ಲದಿರುವುದನ್ನು ಖಂಡಿಸಿ, ಈ ಬಗ್ಗೆ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲವಾದ್ದರಿಂದ ಈ ಕಾರ್ಮಿಕ ವಿರೋಧಿ ನೀತಿಯನ್ನು ನಿಲ್ಲಿಸಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಸ್ವಚ್ಛತೆಯಿಲ್ಲದ ಹೋಟೆಲ್‌ಗಳ ಪರವಾನಗಿಯನ್ನು ರದ್ದು ಪಡಿಸುವಂತೆ, ಆ ಹೋಟೆಲ್ ಮಾಲಿಕರ ವಿರುದ್ಧ ಉಗ್ರಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ. ಕನಿಷ್ಠ ಕೂಲಿಯನ್ನು ಕೊಡದ ಹೋಟೆಲ್ ಮಾಲೀಕರ ವಿರುದ್ಧ ದೂರು ನೀಡುತ್ತಿದ್ದಾಗ್ಯೂ ಯಾವುದೇ ಕ್ರಮ ತೆಗೆದುಕೊಳ್ಳದಿರುವುದನ್ನು ಉಗ್ರವಾಗಿ ಖಂಡಿಸಿದೆ. ಆದ್ದರಿಂದ ಕನಿಷ್ಠ ಕೂಲಿಯನ್ನು ಯಶಸ್ವಿಯಾಗಿ ಎಲ್ಲಾ ಹೋಟೆಲ್ ಕಾರ್ಮಿಕರಿಗೆ ಜಾರಿ ಗೊಳಿಸಬೇಕೆಂದು ಒತ್ತಾಯಿಸಿದೆ.

ಈ ಸಭೆಯಲ್ಲಿ ಹೊಸ ಸಮಿತಿಯು ಚುನಾಯಿಸಲ್ಪಟ್ಟಿದ್ದಾರೆ ಅಧ್ಯಕ್ಷರಾಗಿ- ಕಾಂ. ಗಣಪತಿ ಹೆಗಡೆ, ಉಪಾಧ್ಯಕ್ಷರಾಗಿ- ಎ.ಆರ್. ಅಡವೀಶ್, ಸದಾಶಿವ, ಶ್ಯಾಂಪ್ರಕಾಶ್ ಹೋಟೇಲ್ ಪ್ರಧಾನ ಕಾರ್ಯದರ್ಶಿಯಾಗಿ - ಇ.ಕೆ.ಎನ್. ರಾಜನ್, ಜಂಟಿ ಕಾರ್ಯ ದರ್ಶಿಯಾಗಿ - ಸಿ. ರಾಮಯ್ಯ, ಸಹ ಕಾರ್ಯದರ್ಶಿ ಯಾಗಿ - ಮಿಲ್ಕಿಯೋರ್ ಕೈ ಬರ್ ಹೋಟೆಲ್ ಖಜಾಂಚಿಯಾಗಿ ಕೆಪಿನಿ ಪತಿ, ಹೋಟೆಲ್ ಅಶೋಕ, ಹಾಗೂ ಸೀತಾರಾಮ್‌ರವರನ್ನೊಳಗೊಂಡ 35 ಜನರ ಸವಲತಿಯನ್ನು ಸರ್ವಾನುಮತದಿಂದ ಚುನಾಯಿಸಲಾಗಿದೆ.

ನಿಮ್ಮ ಪ್ರಶ್ನೆ - ನಮ್ಮ ಉತ್ತರ

ಎಲ್ಲರನ್ನೂ 'ಕಾಮ್ರೇಡ್' ಎಂದು ಕರೆಯುವಿರಿ. ಇದರ ಅರ್ಥವೇನು? ತಿಳಿಸುವಿರಾ?

ವಿ.ಆರ್. ಪಾಟೀಲ್, ಕೋರಾಪುರ

★ ಕಾಮ್ರೇಡ್ ಎಂಬ ಇಂಗ್ಲೀಷ್ ಪದದ ಅರ್ಥ ಒಂದು ಸಮಾನ ಉದ್ದೇಶಕ್ಕಾಗಿ ಸ್ವಯಂ ಸ್ಫೂರ್ತವಾಗಿ ಒಟ್ಟಿಗೆ ದುಡಿಯುವ ಅಥವಾ ಸಂಗಾತಿ ಎಂದು. ಇದು 'ಫ್ರೆಂಡ್' ಅಥವಾ 'ಗೆಳೆಯ'ಕ್ಕಿಂತ ಭಿನ್ನವಾದ ಪದ. ಅಷ್ಟೇ ಅಲ್ಲ 'ಸಮಾನ ಉದ್ದೇಶಕ್ಕಾಗಿ' ಮತ್ತು 'ಸ್ವಯಂ ಸ್ಫೂರ್ತತೆ' ಎರಡೂ ಒಟ್ಟಿಗೆ ಇರುವುದು ಮುಖ್ಯ. ಉದಾಹರಣೆಗೆ ಸಮಾನ ಉದ್ದೇಶಕ್ಕಾಗಿ ಯಾವುದೇ ಕಂಪನಿಯಲ್ಲಿ ಕೆಲಸ ಮಾಡುವ ಇಬ್ಬರು ಉದ್ಯೋಗಿಗಳು 'ಕಾಮ್ರೇಡ್' ಆಗುವುದಿಲ್ಲ. ಏಕೆಂದರೆ ಅದು 'ಸ್ವಯಂಸ್ಫೂರ್ತತೆ'ಯಿಂದ ಅಲ್ಲ. 'ಕಾಮ್ರೇಡ್' ಸಾಮಾನ್ಯವಾಗಿ ಕಮ್ಯುನಿಸ್ಟರು ಇತರ ಕಮ್ಯುನಿಸ್ಟರನ್ನು ಸಂಬೋಧಿಸಲು ಬಳಸುತ್ತಾರೆ. ಏಕೆಂದರೆ ಇಡೀ ವಿಶ್ವದಲ್ಲಿ ಸಮತವಾದಿ ಸಮಾಜವನ್ನು ಕಟ್ಟುವ ಕನಸು ಹೊತ್ತ, ಅದಕ್ಕಾಗಿ ಸ್ವಯಂಸ್ಫೂರ್ತವಾಗಿ ಒಟ್ಟಿಗೆ ದುಡಿಯಲು, ಮಡಿಯಲು ಅವರು ಸಿದ್ಧರಿದ್ದಾರೆ. ಆದರೆ 'ಕಾಮ್ರೇಡ್' ಎಂದರೆ 'ಕಮ್ಯುನಿಸ್ಟ್' ಅಂತಲ್ಲ.

ತಾಜಮಹಲ್ ಕಟ್ಟಿಸುವುದಕ್ಕಿಂತ ಮುಂಚೆಯೇ ಅಲ್ಲಿ ದೇವಾಲಯವಿತ್ತು ಅದನ್ನು ಉರುಳಿಸಿ, ತಾಜಮಹಲ್ ಕಟ್ಟಿಸಿದ್ದಾರೆ ಎಂಬುದಾಗಿ ಆರ್.ಎಸ್.ಎಸ್. ನವರು ಪ್ರಚಾರ ಮಾಡುತ್ತಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕೆ.ಎಸ್. ಪಾಪಣ್ಣ, ಕುಂದಲಗುರ್ಕಿ

★ ಹೀಗೆಂದುಆರ್.ಎಸ್.ಎಸ್.ರವರು ಪ್ರಚಾರ ಮಾಡುತ್ತಾರೆ. ನಿಜ. ಇದಕ್ಕೆ ಯಾವುದೇ ಚಾರಿತ್ರಿಕ ಆಧಾರಗಳು, ಪುರಾವೆಗಳು ಇಲ್ಲ. ಜಗತ್ತಿನ ಏಳು ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲಾದ ಈ ರಾಷ್ಟ್ರೀಯ ಸ್ಮಾರಕಕ್ಕೆ ಹೆಮ್ಮೆ ಪಡುವ ಬದಲು ಈ ರೀತಿಯ ವಾದ ಕೋಮುವಾದಿ ಪ್ರಚಾರದ ಪರಮಾವಧಿ. ಇಂತಹುದೇ ವಾದವನ್ನು ಅವರು ಅಯೋಧ್ಯೆಯ ಬಾಬ್ರಿ ಮಸೀದಿ ಮತ್ತಿತರ ಎಷ್ಟೋ ಚಾರಿತ್ರಿಕ ಯಾವುದೇ ಪುರುಳಿಲ್ಲ. ಚಾರಿತ್ರಿಕ ಆಧಾರ ಗಳು ಅವರಿಗೆ ಬೇಕಾಗಿಯೂ ಇಲ್ಲ.

ನಮ್ಮ ದೇಶದ ಧ್ವಜದಲ್ಲಿ ಅಶೋಕ ಚಕ್ರವಿದೆ. ರೂಪಾಯಿಯಲ್ಲಿ ಸಹ ಅಶೋಕನ ಚಿಹ್ನೆ 'ನಾಲ್ಕು ಸಿಂಹಗಳ ಗುರುತು ಇದೆ. ಸರಕಾರ ಅಶೋಕನ ಚಿಹ್ನೆಗಳನ್ನು ತೆಗೆದುಕೊಳ್ಳಲು ಕಾರಣ ವೇನಾದರೂ ಇದೆಯೇ ತಿಳಿಸುತ್ತೀರಾ?

ಸುಭಾಷ್ ಚಂದ್ರ, ಗುಲ್ಬರ್ಗಾ

★ ಇದಕ್ಕೆ ನಿಖರವಾದ ಕಾರಣಗಳನ್ನು ಗುರು ತಿಸುವುದು ಕಷ್ಟ. ಭಾರತ ಒಂದು ದೇಶವಾಗಿ ರೂಪಗೊಂಡದ್ದು ವಸಾಹತು ವಿರೋಧಿ ಬ್ರಿಟಿಷ್ ವಿರೋಧಿ ಸ್ವಾತಂತ್ರ್ಯ ಹೋರಾಟದಲ್ಲಿ. ಇದಕ್ಕೆ ಹಿಂದೆ ಅದು ಎಂದೂ ಒಂದೇ ಸರಕಾರದ ಅಡಿಯಲ್ಲಿ ಒಗ್ಗೂಡಿರಲಿಲ್ಲ. ಅಶೋಕ ಚಕ್ರ ವರ್ತಿಯ ಕಾಲದಲ್ಲಿ, ಅವನ ಸಾಮ್ರಾಜ್ಯ ದಕ್ಷಿಣ ಭಾರತದ ಕೆಲವು ಪ್ರದೇಶಗಳನ್ನು ಬಿಟ್ಟರೆ ಈಗಿನ ಭಾರತದ ಹೆಚ್ಚಿನ ಪ್ರದೇಶಗಳನ್ನು ಒಳಗೊಂಡಿತ್ತು. ಆದ್ದರಿಂದ ಸ್ವತಂತ್ರ ಭಾರತದ ಆಳುವ ವರ್ಗಗಳು ಐಕ್ಯತೆಯ 'ಪ್ರತೀಕ'ವಾಗಿ ಅಶೋಕನ ಚಿಹ್ನೆಗಳನ್ನು ಆರಿಸಿಕೊಂಡಿರಬೇಕು. ಅಲ್ಲದೆ ಭಾರತದ ಪ್ರಥಮ ಪ್ರಧಾನಿ ನೆಹರೂ ರವರಿಗೆ ಅಶೋಕ ಚಕ್ರವರ್ತಿ ಆಮೇಲೆ ಆತ ಅಹಿಂಸೆ ಸ್ವೀಕರಿಸಿ ಬೌದ್ಧನಾದುದರ ಬಗ್ಗೆ ಭಾರಿ ಅಭಿಮಾನ. ಭಾರತ ಸ್ವಾತಂತ್ರ್ಯ ಚಳುವಳಿ ಅಹಿಂಸಾತ್ಮಕವಾದದ್ದು ಎಂಬುದು ಆಳುವ ವರ್ಗಗಳ ಪಕ್ಷ ಕಾಂಗ್ರೆಸ್‌ನ ಅಂಬೋಣ. ಆದಕ್ಕಾಗಿಯೂ ಅಶೋಕನ ಚಿಹ್ನೆಗಳನ್ನು ಬಳಸುತ್ತಿರಬಹುದು.

ಸಿ.ಪಿ.ಐ.(ಎಂ)ಯಾವಾಗ ಸ್ಥಾಪನೆಯಾಯಿತು? ಇದರ ಮುಖಂಡತ್ವವಹಿಸಿದವರು ಯಾರು?

– ವಿ.ಆರ್. ಪಾಟೀಲ ಕೋರಾಪುರ

★ ಸಿ.ಪಿ.ಐ(ಎಂ) 1964ರಲ್ಲಿ ಸ್ಥಾಪನೆಯಾ ಯಿತು. ಅವಿಭಜಿತ ಭಾರತೀಯ ಕಮ್ಯುನಿಸ್ಟ್ ಪಕ್ಷದೊಳಗೆ ಪರಿಷ್ಕರಣವಾದಿ ಹಾದಿಯ ವಿರುದ್ಧ ಹೋರಾಟದಲ್ಲಿ, ಆಗಿನ ಕೇಂದ್ರ ಸಮಿತಿಯಿಂದ ಹೊರ ಹಾಕಲ್ಪಟ್ಟ 30 ನಾಯಕರು ಸಿ.ಪಿ.ಐ(ಎಂ) ಸ್ಥಾಪಿಸಿ ದರು. ಕಾಮ್ರೇಡ್ ಪಿ.ಸುಂದರಯ್ಯ ಅದರ ಪ್ರಥಮ ಪ್ರಧಾನ ಕಾರ್ಯದರ್ಶಿ ಯಾದರು.

10 ಲಕ್ಷ ಪಾರ್ಟಿ ಕಟ್ಟಡ ನಿಧಿ

ಬಳ್ಳಾರಿಯಲ್ಲಿ ಸ್ಫೂರ್ತಿದಾಯಕ ಆಶ್ವಾಸನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ತನ್ನದೇ ಆದ ಸ್ವಂತ ಕಟ್ಟಡ ಕಟ್ಟಬೇಕೆಂಬ ನಿರ್ಧಾರದಿಂದ ಕಟ್ಟಡ ನಿಧಿಗೆ ರೂ 10 ಲಕ್ಷ ಸಂಗ್ರಹಿಸಬೇಕೆಂದು ಪಕ್ಷದ ಸದಸ್ಯರಿಗೂ ಹಿತೈಷಿಗಳಿಗೂ ಕರೆ ಕೊಟ್ಟಿದೆ.

ಇದೇ ತಿಂಗಳ ತಾ 8-9 ರಂದು ಸಭೆ ಸೇರಿದ ಬಳ್ಳಾರಿ ಜಿಲ್ಲಾ ಸಮಿತಿಯಲ್ಲಿ, ಸೆಕ್ರೆಟಾರಿಯೇಟ್ ಸದಸ್ಯರಾದ ಎನ್.ಕೆ. ಉಪಾಧ್ಯಾಯ ಮತ್ತು ಚಂದ್ರಶೇಖರ ಬಾಳೆಯವರು ಭಾಗವಹಿಸಿ ಪಾರ್ಟಿ ನಿಧಿ ಸಂಗ್ರಹದ ಕುರಿತು ವಿವರಣೆ ನೀಡಿ ಮನೆಗೆ ಹೋಗಿ ನಿಧಿ ಸಂಗ್ರಹಿಸುವುದರ ಜೊತೆಗೆ ಪ್ರತಿಯೊಬ್ಬ ಪಕ್ಷದ ಸದಸ್ಯರೂ ತನ್ನ ವೈಯಕ್ತಿಕ ಕೊಡುಗೆ ನೀಡುವ ಅವಶ್ಯಕತೆ ಯನ್ನು ಒತ್ತಿ ಹೇಳಿದರು. ಅದರ ಪರಿ ಣಾಮವಾಗಿ ರಾಜ್ಯ ಸಮಿತಿಯ ಪಾಲು ರೂ 10 ಸಾವಿರ ಜಿಲ್ಲಾ ಸಮಿತಿಗೆ ರೂ 20 ಸಾವಿರ, ಶೇಖರಿಸುವ ನಿರ್ದಿಷ್ಟ ಕಾರ್ಯ ಕ್ರಮ ರೂಪಿಸಿದ್ದು ಮಾತ್ರವಲ್ಲ, ಪ್ರತಿ ಯೊಬ್ಬ ಜಿಲ್ಲಾ ಸಮಿತಿ ಸದಸ್ಯ ಹಾಗೆಯೇ ಎಲ್.ಐ.ಸಿ.,ಬ್ಯಾಂಕ್ ಮೊದಲಾದ ನೌಕರರು ರೂ 500ರಿಂದ ರೂ 1000 ವರೆಗೆ ಮೂರು ಕಂತಿನಲ್ಲಿ ಕಟ್ಟಡ ನಿಧಿಕೊಡುವ ಆಶ್ವಾಸನೆ ಆಗಸ್ಟ್ 5 ರಿಂದ 15 ರವರೆಗೆ ಪಾರ್ಟಿ ನಿಧಿ ಸಂಗ್ರಹದ ಕಾರ್ಯವನ್ನು ಶಿಸ್ತುಬದ್ಧವಾಗಿ ನಡೆಸಲು ತೀರ್ಮಾನಿಸಲಾಯಿತು.

ಸಿಪಿಐ(ಎಂ) ಪಕ್ಷದ ಕಟ್ಟಡ ನಿಧಿ ಸಂಗ್ರಹವಾಗಿರುವುದು

1. ಎನ್.ಕೆ. ಉಪಾಧ್ಯಾಯ	ರೂ. 2000/-
2. ಪಿ. ರಾಮಚಂದ್ರರಾವ್	700/-
3. ಮೈಕೋ ಚಂದ್ರು	700/-
4. ವಿ.ಜಿ.ಕೆ. ನಾಯರ ಮೂಲಕ ದಾವಣಗೆರೆ, ಬೆಳಗಾಂ, ಹರಿಹರ, ಕಾರ್ಮಿಕರಿಂದ	20,000/-

ಕನಿಷ್ಟ ಕೂಲಿ ಹೆಚ್ಚ


ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ ಕನಿಷ್ಟ ಕೂಲಿಯನ್ನು ಹೆಚ್ಚಿಸುವ ಹೋರಾಟಕ್ಕೆ ಧುಮುಕಲು ರಾಜ್ಯದ ಕಾರ್ಮಿಕರಿಗೆ ಕರೆ ನೀಡಿದೆ. ಜುಲೈ 15 ರೊಳಗೆ ರಾಜ್ಯಾದ್ಯಂತ ಐದು ಲಕ್ಷ ಸಹಿ ಸಂಗ್ರಹಣೆ ಮಾಡಿ ರಾಜ್ಯದ ಕಾರ್ಮಿಕ ಮಂತ್ರಿಗಳಿಗೆ ಅರ್ಪಿಸುವುದರೊಂದಿಗೆ ಈ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು.

ಏಕೆ ಈ ಹೋರಾಟ? ಕರ್ನಾಟಕದಲ್ಲಿ ವಿವಿಧ ವಲಯಗಳಲ್ಲಿ ಕನಿಷ್ಟ ಕೂಲ ನಿರ್ಧಾರಣೆಯ ಸ್ಥಿತಿ ಎಂತಹದು? ಸಿ.ಐ.ಟಿ.ಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಿ.ಪಿ.ಐ.(ಎಂ) ರಾಜ್ಯ ಸೆಕ್ರಟಾರಿಯೆಟ್ ಸದಸ್ಯ ಕಾಂ. ವಿ.ಜೆ.ಕೆ. ನಾಯರ್ ವಿವರಿಸುತ್ತಾರೆ. ತೋಟ ಕಾರ್ಮಿಕರು ಹಾಗೂ ಬೀಡಿ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಮಾಲಕರು ಅಪಾರ ಲಾಭ ಗಿಟ್ಟಿಸುತ್ತಿದ್ದರೂ ಹೇಗೆ ಕಾರ್ಮಿಕರ ಸ್ಥಿತಿ ಹದಗೆಡುತ್ತಲೇ ಸಾಗಿದೆ ಎಂಬುದನ್ನು ವಿವರಿಸುತ್ತಾರೆ.

ಸಮಸ್ತ ಕಾರ್ಮಿಕ ವರ್ಗವನ್ನು ಶೋಷಕರ ವಿರುದ್ಧ ಒಂದು ಬಲವಾದ ಹೋರಾಟದಲ್ಲಿ ತೊಡಗಿಸುವುದು ಇದು ಕಾರ್ಮಿಕ ಸಂಘಟನೆಯ ಚಳುವಳಿಯಲ್ಲಿ ನಾವು ನಿರ್ವಹಿಸಬೇಕಾದ ಕರ್ತವ್ಯ. ಈ ಕಾರ್ಯಾಚರಣೆಯ ಆರ್ಥಿಕ ಅಂಶವೆಂದರೆ ಎಲ್ಲೆಡೆ ವೇತನದ ಹೆಚ್ಚಳ. ಇದು ರಾಜಕೀಯ ಕಾರ್ಯಾಚರಣೆ ಕೂಡಾ. ಏಕೆಂದರೆ ಶೋಷಕರ ಸಂಘಟನೆಯನ್ನು, ಅವರ ಪ್ರಭುತ್ವವನ್ನು ಎದುರಿಸಲು ಕಾರ್ಮಿಕ ವರ್ಗ ಮತ್ತು ಅದರ ಮಿತ್ರರನ್ನು ಸಿದ್ಧಗೊಳಿಸದೆ ಈ ಗುರಿ ಸಾಧನೆ ಸಾಧ್ಯವಿಲ್ಲ.

ಭಾರತದಲ್ಲೆಲ್ಲಾ ಸಮಸ್ತ ಕಾರ್ಮಿಕ ವರ್ಗದ ಸಂಬಳದ ಮಟ್ಟವನ್ನು ಎತ್ತರಿಸಲು ನಮಗೆ ಸಾಧ್ಯವಾಗಿದೆಯೇ? ಈ ಪ್ರಶ್ನೆಯನ್ನು ಪರೀಕ್ಷಿಸಿದಾಗ ನಮಗೆ ಸಿಗುವ ಒಂದು ದೃಢವಾದ ಉತ್ತರ "ಇಲ್ಲ" ಎಂದು. ಲಭ್ಯವಿರುವ ಅಂಕಿ ಅಂಶಗಳ ಅಂದಾಜುಗಳ ಪ್ರಕಾರ ನಮ್ಮ ದೇಶದಲ್ಲಿ ನಿಜ ವೇತನ ಇಳಿಮುಖವಾಗಿದೆ. ಅದು ಸತತವಾಗಿ ಸವೆತ ಕಾಣುತ್ತಾ ಬಂದಿದೆ. ಹೌದು. ಕಾರ್ಮಿಕ ವರ್ಗದ ಪ್ರತಿಯೊಂದು ವಿಭಾಗದ ಮಟ್ಟಿಗೂ ಇದು ನಿಜವಲ್ಲ. ನಾವು ಸಂಘಟಿತರು ಎಂದು ಯಾರನ್ನು ಹೇಳುತ್ತೇವೋ ಅಂತಹ ಕೆಲವು ವಿಭಾಗಗಳಿಗೆ ಸ್ವಲ್ಪ ಪ್ರಯೋಜನ ದೊರೆತಿದೆ ನಿಜ. ಆದರೆ ಒಟ್ಟಾರೆಯಾಗಿ ಕಾರ್ಮಿಕ ವರ್ಗ ಸತತವಾಗಿ ನಿಜ ಸಂಬಳದ ಸವೆತದಿಂದ ಅಂದರೆ ಬೆಲೆಯೇರಿಕೆಯಿಂದಾಗಿ ಸಿಗುವ ಸಂಬಳದ ಬೆಲೆಯಲ್ಲಾಗುವ ಕಡಿತದಿಂದಾಗಿ ನರಳುತ್ತಲೇ ಬಂದಿದೆ. 1960 ರಿಂದ 1981-82 ರ ನಡುವೆ ಕಾರ್ಖಾನೆ ವಲಯದಲ್ಲಿ ಕಾರ್ಮಿಕರು ತಮ್ಮ ಶ್ರಮ ಶಕ್ತಿ ಉಪಯೋಗಿಸಿ ಉತ್ಪಾದಿಸಿದ ವಸ್ತುಗಳಿಗೆ ಸೇರಿಸಿದ ಮೌಲ್ಯ 5-6 ಪಟ್ಟು ಹೆಚ್ಚಿದೆ. ಆದರೆ ಅವರ ಸಂಬಳ 3-6 ಪಟ್ಟು ಮಾತ್ರ ಹೆಚ್ಚಿದೆ. ಈ ಅವಧಿಯಲ್ಲಿ ಬೆಲೆಯೇರಿಕೆ ಕೂಡಾ 3-5 ಪಟ್ಟು ಹೆಚ್ಚಿರುವುದರಿಂದ ಈ ಸಂಬಳ ಏರಿಕೆಯ ಪರಿಣಾಮ ಸುಮಾರು ಸೊನ್ನೆಯೇ. ಆದರೆ ಅವರು ತಾವು ಉತ್ಪಾದಿಸಿದ ವಸ್ತುಗಳಿಗೆ ತಮ್ಮ ಶ್ರಮದ ಮೂಲಕ ಸೇರಿಸಿದ ಮೌಲ್ಯ 89% ಹೆಚ್ಚಾಯಿತು. ಬೆಲೆಯೇರಿಕೆಯನ್ನು ಗಮನಿಸಿದಾಗಲೂ. ಅಂದರೆ ಇದು ಸಂಪೂರ್ಣವಾಗಿ ಬಂಡವಾಳಶಾಹಿಗಳ ಜೇಬಿಲ್ಲಷ್ಟೇ ಇಳಿಯಿತು! ಕಾರ್ಮಿಕ ವರ್ಗದ ಅತ್ಯಂತ ಮುಂದುವರಿದ ವಿಭಾಗಗಳದ್ದೇ ಕಥೆಯಿದು. ಹೀಗಿರುವಾಗ ಉಳಿದ ವಿಭಾಗಗಳ ಸ್ಥಿತಿಯನ್ನು ಯಾರಾದರೂ ಊಹಿಸಿಕೊಳ್ಳಬಹುದು. (ಚಿತ್ರ 1 ನೋಡಿ)→

ಚಿತ್ರ -1



ಕರ್ನಾಟಕದಲ್ಲಿ ಕನಿಷ್ಟ ಕೂಲಿ

ಇಲ್ಲಿ ನೋಟಿಫೈ ಆಗಿರುವ ಕನಿಷ್ಟ ಕೂಲಿಯೇ ಕಮ್ಮಿ. ಅವು ಎಷ್ಟು ಜಾರಿಯಾಗಿದೆಯೆಂದಂತೂ ಹೇಳುವಂತೆಯೇ ಇಲ್ಲ. ಕರ್ನಾಟಕ ಸರಕಾರ 36 ಉದ್ಯೋಗಗಳಲ್ಲಿ ಕನಿಷ್ಟ ಕೂಲಿಯನ್ನು ನಿಗದಿ ಮಾಡಿದೆ. ಅದು ಪ್ರತಿದಿನ ರೂ. 2.20 (ರೇಷ್ಮೆ ಬಟ್ಟೆ-1967 ರಲ್ಲಿ ನಿಗದಿ ಮಾಡಿದ್ದು) ರಿಂದ ರೂ. 28 ರವರೆಗೆ (ಕ್ಲಬ್ಬುಗಳಲ್ಲಿ ನೋಟಿಫೈ ಮಾಡಿದ್ದು) ಇದೆ.

ವಿವಿಧ ಉದ್ಯೋಗಗಳಲ್ಲಿ ನಿಗದಿಪಡಿಸಿದ ಕನಿಷ್ಟ ಕೂಲಿ, ತುಟ್ಟಿ ಭತ್ಯೆ

(೧) ರೇಷ್ಮೆ, ವಾಹನ ವರ್ಕ್‌ಶಾಪ್‌ಗಳು, ಫೌಂಡ್ರಿಗಳು, ಸ್ಥಳೀಯ ಪ್ರಾಧಿಕಾರ ಮತ್ತು ಕೃಷಿಯಲ್ಲಿ ಯಾವ ತುಟ್ಟಿಭತ್ಯೆಯೂ ಇಲ್ಲ.

(೨) ಅತ್ಯಂತ ಹೆಚ್ಚುಸಂಖ್ಯೆಯಲ್ಲಿರುವ, ಮಾಲಿಕರಿಗೆ ಅತ್ಯಂತ ಲಾಭದಾಯಕವಾದ ಬೀಡಿ, ಪ್ಲಾಂಟೇಶನ್‌ಗಳಲ್ಲಿ ಪಾಯಿಂಟಿಗೆ ಪೈಸೆ 908 ಪಾಯಿಂಟಿನಲ್ಲಿ ಕನಿಷ್ಟ ಕೂಲಿ ರೂ. 454 ಕ್ಕಿಂತ ಕಡಿಮೆ.

(೩) ಜಿನ್ನಿಂಗ್, ಪಿಂಗಾಣಿ ಕೆಲಸ, ಕಾಫಿ ಕ್ಯೂರಿಂಗ್ ಮತ್ತು ಅಗರ ಬತ್ತಿ ಉದ್ದಿಮೆಗಳಲ್ಲಿ 50-60 ಪೈಸೆ ಪ್ರತಿ ಪಾಯಿಂಟಿಗೆ. ಕನಿಷ್ಟಕೂಲಿ ರೂ. 454 ರಿಂದ 544.80 0 ರವರೆಗೆ- 908 ಪಾಯಿಂಟಿನಲ್ಲಿ

(೪) ಮುದ್ರಣ, ಚರ್ಮ ಹದಮಾಡುವುದು ಫಿಲಂ ಉದ್ದಿಮೆ, ಅಂಗಡಿಗಳು, ಹೋಟೇಲುಗಳು, ಇಂಜಿನಿಯರಿಂಗ್, ಟೈಲರಿಂಗ್, ಕಟ್ಟಡ ಕೆಲಸ, ಕಲ್ಲು ಒಡೆಯುವುದು ಮತ್ತು ಪ್ಲೈವುಡ್‌ನಲ್ಲಿ 60-70 ಪೈಸೆ ತುಟ್ಟಿ ಭತ್ಯೆ, ಕನಿಷ್ಟ ಕೂಲಿ 908 ಪಾಯಿಂಟಿನಲ್ಲಿ ರೂ. 451 ರಿಂದ ರೂ.636 .

(೫) ಮೋಟಾರ್ ಟ್ರಾನ್ಸ್‌ಪೋರ್ಟ್, ಆಸ್ಪತ್ರೆ, ನರ್ಸಿಂಗ್ ಹೋಂ, ಕ್ಲಬ್ಬುಗಳು, ಮರದ ಕೆಲಸ, ಸಾ ಮಿಲ್, ಅಕ್ಕಿ, ಹಿಟ್ಟುಗಿರಣಿ, ಮೂರ್ತೆದಾರಿಕೆ, ರೇಷ್ಮೆ ಕೃಷಿ, ಖಂಡಸಾರಿ- ಈ ಎಂಟು ಉದ್ದಿಮೆಗಳಲ್ಲಿ ಅತೀ ಹೆಚ್ಚು ತುಟ್ಟಿ ಭತ್ಯೆ ಪಾಯಿಂಟಿಗೆ 70-80 ಪೈಸೆ.

ಕನಿಷ್ಟ ಕೂಲಿಯನ್ನು ಯಾವಾಗ, ಎಷ್ಟು ವರ್ಷಕ್ಕೊಮ್ಮೆ ಪರಿಷ್ಕರಿಸಲಾಗಿದೆ ಎಂಬುದನ್ನು ನೋಡೋಣ.

(1) ಬಹಳ ಕಾಲದಿಂದ ಇರುವ ನೋಟಿಫಿಕೇಷನ್ 1967 ರದ್ದು ರೇಷ್ಮೆ ಬಟ್ಟೆ ಉದ್ದಿಮೆಯಲ್ಲಿ. 1968 ರಲ್ಲಿ ಸ್ಥಳೀಯ ಪ್ರಾಧಿಕಾರ(ಲೋಕಲ್ ಅಥಾರಿಟಿ) ನೋಟಿಫಿಕೇಷನ್ ಮಾಡಲಾಯಿತು. ಅದರಲ್ಲಿ ಕನಿಷ್ಟ ಮಾಸಿಕ ಕೂಲಿ ಕೇವಲ ರೂ. 61.20. 1974 ರಲ್ಲಿ ಕಲ್ಲು ಒಡೆಯುವವರಿಗೆ ನಿಗದಿ ಪಡಿಸಿದ ನೋಟಿಫಿಕೇಷನ್ ಇನ್ನೂ ಅಸ್ತಿತ್ವದಲ್ಲಿದೆ.

(2)1975 ರಲ್ಲಿ ಅಗರಬತ್ತಿ , ಕೃಷಿ ಗೇರು, ಚರ್ಮಹದಗಾರಿಕೆಯಲ್ಲಿ, 1976ರಲ್ಲಿ ಹೋಟೇಲ್, ಕಾಫಿ ಕ್ಯೂರಿಂಗ್ ನೋಟಿಫಿಕೇಶನ್‌ಗಳು ಬಂದವು. 1978ರಲ್ಲಿ ಹತ್ತು ನೋಟಿಫಿಕೇಶನ್‌ಗಳು ಬಂದವು-ಹೋಟೇಲ್(ಪರಿಷ್ಕೃತ), ಫಿಲಂಗಳು, ಪ್ಲೈವುಡ್, ಹಂಚು, ಟೈಲರಿಂಗ್, ಸಾರ್ವಜನಿಕ ಸಾರಿಗೆ, ಮರಗೆಲಸ, ಅಕ್ಕಿ, ಬೇಳೆ ಗಿರಣಿ, ಹತ್ತಿ ಜಿನ್ನಿಂಗ್ ಮತ್ತು ಪಿಂಗಾಣಿ ಕೆಲಸ. 1979 ರಲ್ಲಿ ಇಂಜಿನಿಯರಿಂಗ್, ಬೀಡಿ, ಪ್ಲಾಂಟೇಶನ್, ಫೌಂಡ್ರಿ, ವಾಹನ ಇಂಜಿನಿಯರಿಂಗ್, ಕೈಮಗ್ಗ, ಪ್ರಿಂಟಿಂಗ್ ಪ್ರೆಸ್-ಈ ಏಳು ಉದ್ದಿಮೆಗಳಲ್ಲಿ ನೋಟಿಫಿಕೇಶನ್ ಬಂತು.

(3) ಕಾಂಗ್ರೆಸ್ ಸರ್ಕಾರವನ್ನು ಚುನಾವಣೆಗಳಲ್ಲಿ ಅಧಿಕಾರದಿಂದ ಇಳಿಸುವ ಸ್ವಲ್ಪಮುನ್ನ 1983 ರಲ್ಲಿ ಗೇರು ಉದ್ದಿಮೆಗೆ ಒಂದು ನೋಟಿಫಿಕೇಶನ್ ಬಂತು. 1984 ರಲ್ಲಿ ನೋಟಿಫಿಕೇಶನ್‌ಗಳ ಸುರಿಮಳೆಯೇ ಆಯಿತು. ಇವುಗಳಲ್ಲಿ ಹೆಚ್ಚಿನವು ಈಗಲೂ ಅಸ್ತಿತ್ವದಲ್ಲಿವೆ. ಅಗರಬತ್ತಿ, ಮರಗೆಲಸ, ಫಿಲಂಗಳು, ಸಾರ್ವಜನಿಕ ಸಾರಿಗೆ, ಕಲ್ಲು ಒಡೆಯುವುದು, ಖಂಡಸಾರಿ, ಪ್ಲೈವುಡ್, ಪಿಂಗಾಣಿ ಕೆಲಸ ಹತ್ತಿ ಜಿನ್ನಿಂಗ್, ಮೂರ್ತೆದಾರಿಕೆ, ಪ್ರಿಂಟಿಂಗ್ ಪ್ರೆಸ್, ಅಕ್ಕಿ-ಹಿಟ್ಟು ಗಿರಣಿಗಳು, ಕಟ್ಟಡ ನಿರ್ಮಾಣ, ಚರ್ಮ ಹದಮಾಡುವುದು, ರೇಷ್ಮೆ ಕೃಷಿ, ಪ್ಲಾಂಟೇಶನುಗಳಲ್ಲಿ ಈ ನೋಟಿಫಿಕೇಶನ್ ಬಂದವು. ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಕೂಡಲೇ ಇವನ್ನು ನಿಗದಿಪಡಿಸಲಾಯಿತು. ಈ ಹೆಚ್ಚಿನ ನೋಟಿಫಿಕೇಶನ್‌ಗಳಲ್ಲಿ ತುಟ್ಟಿಭತ್ಯೆಯ ಮೇಲೆ ಮಿತಿಯಿತ್ತು.

(4) ಜನತಾ ಪಾರ್ಟಿ ಸರಕಾರ ಮತ್ತೆ ಅಧಿಕಾರಕ್ಕೆ ಬಂದ 1985ರಲ್ಲಿ ಯಾವ ನೋಟಿಫಿಕೇಶನ್ ಇರಲಿಲ್ಲ. 1986 ರಲ್ಲಿ ಟೈಲರಿಂಗ್, ಹೋಟೇಲ್, ಕಾಫಿಕ್ಯೂರಿಂಗ್, ಬೀಡಿ ಉದ್ದಿಮೆಗಳಿಗೆ ಜಾರಿ ಮಾಡಿದ ನೋಟಿಫಿಕೇಶನ್‌ಗಳು ಕೂಲಿದರವನ್ನು ಸುಮಾರಾಗಿ ಹೆಚ್ಚಿಸಲೇ ಇಲ್ಲವೆಂದೇ ಹೇಳಬಹುದು. ಉದಾ: ಬೀಡಿ ಕಾರ್ಮಿಕರಿಗೆ ಸಾವಿರಕ್ಕೆ ರೂ. 11.48 ರ ಕೂಲಿಯನ್ನು 11.50 ಮಾಡಲಾಯಿತಷ್ಟೆ. ಆಗ ಕಾರ್ಮಿಕ ಇಲಾಖೆ ವಹಿಸಿಕೊಂಡಿದ್ದದ್ದು ಎಸ್.ಆರ್.ಬೊಮ್ಮಾಯಿ.

(5) ಇದುವರೆಗಿನ ನೋಟಿಫಿಕೇಶನ್‌ಗಳಲ್ಲಿ ಅತ್ಯುತ್ತಮವೆನ್ನಬಹುದಾದದ್ದು ಬಂದಿರುವುದು 1987 ರಲ್ಲಿ. ಇಂಜಿನಿಯರಿಂಗ್, ಹಂಚು, ಅಂಗಡಿಗಳು, ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ಬೇಕರಿಗಳು, ಮಿಠಾಯಿ ತಯಾರಿಕೆ, ಕ್ಲಬ್ಬುಗಳು-ಈ ಏಳು ಉದ್ಯೋಗಗಳಿಗೆ ಸಂಬಂಧಪಟ್ಟ ನೋಟಿಫಿಕೇಶನ್‌ಗಳು ಇವು.

(6) 1988 ರಲ್ಲಿ ಒಂದೇ ನೋಟಿಫಿಕೇಶನ್ ಬಂತು. ಕೃಷಿಯಲ್ಲಿ ಕನಿಷ್ಟ ಕೂಲಿ ರೂ.12.60 ಎಂದು ನಿಗದಿಮಾಡಲಾಯಿತು. 1989 ರಲ್ಲಿ ಯಾವ ನೋಟಿಫಿಕೆಶನ್ ಕೂಡಾ ಇರಲಿಲ್ಲ. 1990 ರಲ್ಲಿ ಸುಮಾರು ಹೀಗೆಯೇ. ಹೋಟೇಲ್‌ನಲ್ಲಿ ಹಳೆಯ ದರವನ್ನು ಮುಂದುವರಿಸುವ ಒಂದು ಪ್ರಸ್ತಾಪ ಬಂದಿದೆಯಷ್ಟೆ.ಕಾಂಗ್ರೆಸ್(ಐ) ಮತ್ತೆ ಅಧಿಕಾರಕ್ಕೆ ಬಂದಿದೆ. ಒಂದು ಶಕ್ತಿಶಾಲೀ ಆಂದೋಲನವಿಲ್ಲದಿದ್ದರೆ ಅದು ಮಾಲಿಕರ ಪರವಾಗಿಯೇ ಕ್ರಮ ಕೈಗೊಳ್ಳಬಹುದು.

ಪ್ರತಿ ಎರಡು ವರ್ಷಕ್ಕೊಮ್ಮೆ ಅಥವಾ ಜೀವನ ವೆಚ್ಚ ಸೂಚ್ಯಂಕ 50 ಪಾಯಿಂಟ್‌ಗಳಷ್ಟು ಹೆಚ್ಚಾದಾಗ ಕನಿಷ್ಟ ಕೂಲಿಯನ್ನು ಪರಿಷ್ಕರಿಸಬೇಕು ಎಂದಿದೆ. ಕಾರ್ಮಿಕ ಮಂತ್ರಿಗಳ ಸಮ್ಮೇಳನ ಇದನ್ನು ನಿರ್ಧರಿಸಿತ್ತು. ಆದರೆ ಹೀಗೆ ಪರಿಷ್ಕರಿಸುವುದೆ ಅಪರೂಪ. 1948 ರ ಕನಿಷ್ಟಕೂಲಿ ಶಾಸನ ಕನಿಷ್ಟ 5 ವರ್ಷಗಳಿಗೊಮ್ಮೆಯಾದರೂ ಕೂಲಿಗಳನ್ನು ಪರಿಷ್ಕರಿಸಬೇಕೆಂದು ವಿಧಿಸಿದೆ. ಹಲವಾರು ಉದ್ಯೋಗಗಳಲ್ಲಿ ಕಳೆದ ಹತ್ತು ವರ್ಷಕ್ಕಿಂತಲೂ ಹೆಚ್ಚು ಸಮಯ ಕೂಲಿಯನ್ನು ಪರಿಷ್ಕರಿಸಿಲ್ಲ.

ಜೀವನಾಧಾರ ಮಟ್ಟ ಮತ್ತು ಬಡತನ ಮಟ್ಟ

ಕಳೆದ ತಿಂಗಳು ಕಾರ್ಮಿಕ ಮಂತ್ರಿ ಕರೆದ ಸಭೆಯಲ್ಲಿ ಕನಿಷ್ಟ ಕೂಲಿ ಬಡತನ ಮಟ್ಟಕ್ಕಿಂತ ಮೇಲಿರಬೇಕು ಎಂಬ ವಾದ ಕೇಳಿ ಬಂತು. ಹೌದು ಅದು ಬಡತನ ಮಟ್ಟಕ್ಕಿಂತ ಮೇಲಿರಬೇಕು. ಆದರೆ ಅದು ಬಡತನ ಮಟ್ಟದ ಆಸುಪಾಸಿನಲ್ಲೇ ಇರಬೇಕೇ? ಬಡತನ ಮಟ್ಟ ಎಂದರೇನು ಎಂಬ ಬಗ್ಗೆಯೂ ಭಿನ್ನಾಭಿಪ್ರಾಯವಿದೆ.

ಕನಿಷ್ಟ ಕೂಲಿಯನ್ನು ನಿರ್ಧರಿಸುವಾಗ ಮೂರು ಘಟಕಗಳ ಒಂದು ಸ್ಟಾಂಡರ್ಡ್ ಕುಟುಂಬವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಂತಹ ಕುಟುಂಬದ ಜೀವನಾಧಾರ ಮಟ್ಟ, ಕಾರ್ಮಿಕನ ದಕ್ಷತೆಯನ್ನು ಕಾಪಾಡುವ ದೃಷ್ಟಿಯಿಂದ ಕನಿಷ್ಟ ಕೂಲಿ ನಿಗದಿಯಾಗಬೇಕು. 1987 ರಲ್ಲಿ ರಾಜ್ಯದ ಸರಾಸರಿ ಜೀವನ ವೆಚ್ಚ ಸೂಚ್ಯಂಕ 752 ಇದ್ದಾಗ ಅದು ರೂ. 10.38 ಆಗುತ್ತದೆಂದು ಲೆಕ್ಕ ಹಾಕಿದ್ದೆವು (ನೋಡಿ ಐಕ್ಯರಂಗ-30-6-80) 1989 ರ ಸರಾಸರಿ ಜೀವನವೆಚ್ಚ ಸೂಚ್ಯಂಕ 908 ಪಾಯಿಂಟಿನಲ್ಲಿ ಈಗ ಕನಿಷ್ಟ ಕೂಲಿ ಕೊಡಲುಗುತ್ತಿದ್ದು ಈ ಪಾಯಿಂಟಿನಲ್ಲಿ ಕನಿಷ್ಟ ಕೂಲಿ ರೂ. 1,253 ಆಗಬೇಕು. ಅಂದರೆ ದಿನಕ್ಕೆ ರೂ 48.20. ರಾಷ್ಟ್ರೀಯ ಆದಾಯವೇ ಕಮ್ಮಿಯಿದೆ ಎಂಬ ವಾದವನ್ನು ಸಾಮಾನ್ಯವಾಗಿ ಈ ರೀತಿಯ ಲೆಕ್ಕಾಚಾರದ ವಿರುದ್ಧ ಹೂಡಲಾಗುತ್ತದೆ. ಈಗ ಬಡತನ ಮಟ್ಟದ ಮಾತೂ ಬರುತ್ತಿದೆ.

ಪ್ರಸ್ತುತ ಬೆಲೆಗಳಲ್ಲಿ ತಲಾ ವಾರ್ಷಿಕ ಖಾಸಗೀ ಬಳಕೆಯ ಅಂಕಿ ಅಂಶಗಳು ಹೀಗಿವೆ-1971-72 ರಲ್ಲಿ ರೂ 579 1984-85 ರಲ್ಲಿ 1950 ಅಂದರೆ ಸರಾಸರಿ ವಾರ್ಷಿಕ ಹೆಚ್ಚಳ 9.8% ಇದನ್ನು 10% ದಲ್ಲಿ ಮುಂದುವರಿಸಿದರೆ 1989-90 ರಲ್ಲಿ ಅದು ರೂ 31 40 ಆಗುತ್ತದೆ. ನಾವೀಗ ಕನಿಷ್ಟ ಕೂಲಿ ಕೇಳುತ್ತಿರುವ 1990-91 ಕ್ಕೆ ಇದು ರೂ.445 ಆಗುತ್ತದೆ. ಇದರ ಪ್ರಕಾರ ಮೂರು ಘಟಕಗಳ ಕುಟುಂಬದ ಬಳಕೆ ರೂ. 10,365/-ಅಥವಾ ದಿನಕ್ಕೆ ರೂ. 33.22 ಇದು ಹಿಂದೆ ಲೆಕ್ಕ ಹಾಕಿದ ಜೀವನಾಧಾರ ಮಟ್ಟದ 2/3 ರಷ್ಟಾಗುತ್ತದೆಯಷ್ಟೆ. ಒಬ್ಬ ಕಾರ್ಮಿಕ ಮತ್ತು ಆತನ ಕುಟುಂಬದ ಬಳಕೆಯ ಸರಾಸರಿ ಮಟ್ಟವನ್ನು ಇಳಿಸಲು ಅವಕಾಶ ಕೊಡಲು ಸಾಧವಿಲ್ಲ.

ಬಡತನ ಮಟ್ಟವನ್ನು ನಿರ್ವಹಿಸಬಯಸುವವರು ಜೀವನ ಮಟ್ಟವನ್ನು ಎತ್ತರಿಸಬೇಕೆಂಬ ಸಂವಿಧಾನದ ಗುರಿಯನ್ನು ಗಮನದಲ್ಲಿಟ್ಟುಕೊಂಡು ಮಾಡಲಿ. ತಲಾ ಬಳಕೆಯ ದರಕ್ಕಿಂತ ಕೆಳಗಿನ ಮಟ್ಟದಲ್ಲಿ ನಿರ್ಧರಿಸುವ ಕೂಲಿ ಜೀವನ ಮಟ್ಟವನ್ನು ಬಡತನದ ಮಟ್ಟದತ್ತ ಎಳೆಯುತ್ತದೆ. ಸರಾಸರಿ ಬಳಕೆ ದರಕ್ಕಿಂತ ಮೇಲಿನ ಮಟ್ಟದಲ್ಲಿ ಜೀವನಾಧಾರ ಮಟ್ಟದತ್ತ ಸಾಗುವ ಅಥವಾ ಆ ಮಟ್ಟದಲ್ಲಿ ನಿರ್ಧರಿಸುವ ಕೂಲಿದರ ಕ್ರಮೇಣ ಜೀವನ ಮಟ್ಟವನ್ನು ಎತ್ತರಿಸಬಲ್ಲದು.

ಆದ್ದರಿಂದ 1990-91ಕ್ಕೆ ನಿಗದಿ ಮಾಡುವ ಕನಿಷ್ಟ ಕೂಲಿಯನ್ನು ಮೂರು ಘಟಕಗಳ ತಲಾ ಖಾಸಗೀ ಬಳಕೆ ದರಕ್ಕಿಂತ ಕೆಳಗಿನ ಮಟ್ಟದಲ್ಲಿ ನಿಗದಿಮಾಡುವ ಹಕ್ಕು ಯಾರಿಗೂ ಇಲ್ಲ. ಸ್ವಲ್ಪ ಅವಕಾಶವಿರುವ ಉದ್ಯೋಗಗಳಲ್ಲಿ, ಉದ್ದಿಮೆಗಳಲ್ಲಿ ಅದನ್ನು ತಲಾ ಬಳಕೆ ಮಟ್ಟ ಮತ್ತು ಜೀವನಾಧಾರ ಮಟ್ಟದ ನಡುವೆ ನಿಗದಿ ಮಾಡಬಹುದು. ಅಂದರೆ ದಿನಕ್ಕೆ -40 ರೂ. ಅಥವಾ ಹೆಚ್ಚು. ಇದನ್ನು ಜೀವನ ವೆಚ್ಚ ಸೂಚ್ಯಕಕ್ಕೆ ಜೋಡಿಸಬೇಕು.ಈ ತುಟ್ಟಿಭತ್ಯೆ ಕೂಲಿಯನ್ನು ಕ್ರಮೇಣ ಜೀವನಾಧಾರ ಮಟ್ಟಕ್ಕೆ ಎತ್ತರಿಸುವಂತಿರಬೇಕು. ಈ ಭತ್ಯೆ ಜೀವನಾಧಾರ ಕೂಲಿ ಮಟ್ಟಕ್ಕಿಂತ ಕಡಿಮೆಯಿರಬಾರದು. ಇದು ಪಾಯಿಂಟಿಗೆ ದಿನಕ್ಕೆ 5 ಪೈಸೆ(1960 ಆಧಾರ ವರ್ಷ) ಅಥವಾ ತಿಂಗಳಿಗೆ ರೂ. 1.30

ಹೀಗೆ ಕನಿಷ್ಟಕೂಲಿದರ ರೂ.30/-(ಪ್ಲಾಂಟೇಶನ್, ಬೀಡಿ ಮುಂತಾದೆಡೆ) ರಿಂದ ರೂ.40-ರ ವರೆಗೆ(ಬೇಳೆ, ಹಿಟ್ಟು ಗಿರಣಿ, ರೇಷ್ಮೆ, ಸ್ಯಾನಿಟರಿ ಕಾರ್ಮಿಕರು, ಸಾರ್ವಜನಿಕ ಸಾರಿಗೆ, ಹೋಟೇಲ್ ಮುಂತಾದೆಡೆ), ಇದರ ಜೊತೆಗೆ ಕನಿಷ್ಟ ಪಾಯಿಂಟಿಗೆ 5ಪೈಸೆ ದರದಲ್ಲಿ ಮೂರು ತಿಂಗಳಿಗೊಮ್ಮೆ ಹೊಂದಾಣಿಕೆ ಮಾಡುವ ತುಟ್ಟಿಭತ್ಯೆ- ಇದು ತಕ್ಷಣ ಸಾಧ್ಯ.

ಹೌದು. ಇದನ್ನು ಸಾಧ್ಯಗೊಳಿಸಬೇಕಾದರೆ ಈ ಬಗ್ಗೆ ಎಡೆಬಿಡದ ಶಿಕ್ಷಣ, ಚಳುವಳಿ ಮತ್ತು ಅಂತಿಮವಾಗಿ ರಾಜ್ಯ ಸರಕಾರದ ಧೋರಣೆಯಲ್ಲಿ ಬದಲಾವಣೆ ತರುವುದು ಅತ್ಯಗತ್ಯ.

> ರೂ 30 ರಿಂದ ರೂ. 40 ರ ವರೆಗೆ ಕನಿಷ್ಟ ಕೂಲಿದರ, ಜತೆಗೆ ಪ್ರತಿ ಪಾಯಿಂಟಿಗೆ ಕನಿಷ್ಟ 5 ಪೈಸೆ ದರದಲ್ಲಿ ಮೂರು ತಿಂಗಳಿಗೊಮ್ಮೆ ಹೊಂದಾಣಿಕೆಯಾಗುವ ತುಟ್ಟಿಭತ್ಯೆ ನಿಗದಿಪಡಿಸುವುದು ತಕ್ಷಣ ಸಾಧ್ಯ.

ದ್ಧದ ಹೋರಾಟ

ಹತ್ತು ಕೋಟಿ ಅಸಂಘಟಿತ ಕಾರ್ಮಿಕರು


ಚಿತ್ರ 2 ದೇಶದ ಜನಸಂಖ್ಯೆಯಲ್ಲಿ ದುಡಿಮೆಗಾರರ, ಅವರೊಳಗೇ ವಿವಿಧ ವಿಭಾಗಗಳ ಪ್ರಮಾಣ 1981 ರ ಜನ ಗಣತಿಯ ಪ್ರಕಾರ ಎಷ್ಟಿದೆಯೆಂದು ತಿಳಿಸುತ್ತದೆ. 13 ಕೋಟಿ ಸಂಬಳದಾರರಲ್ಲಿ ಮೇಲೆ ಹೇಳಿದ ಕಾರ್ಖಾನೆ ವಲಯದ ಕಾರ್ಮಿಕರು ಕೇವಲ 78 ಲಕ್ಷ ಅಂದರೆ 1/2%' ತಮ್ಮ ಹೋರಾಟಗಳ ಮೂಲಕ ಕೂಡಾ ಈ ಅರ್ಧ ಶೇಕಡಾ ಕಾರ್ಮಿಕರೂ ಇಪ್ಪತ್ತು ವರ್ಷಗಳಲ್ಲಿ ತಮ್ಮ ಜೀವನ ಮಟ್ಟ ಉಳಿಸಿಕೊಳ್ಳಲಷ್ಟೆ ಸಾಧ್ಯವಾಯಿತು. ಹಿಂದೆ ಹೇಳಿದಂತೆ ಇದೇ ಅವಧಿಯಲ್ಲಿ ಮಾಲಕರಿಗೆ ಇವರು ಉತ್ಪಾದಿಸಿಕೊಟ್ಟ ಮೌಲ್ಯ ಸುಮಾರಾಗಿಇಮ್ಮಡಿಯಾಯಿತು. 1981 ರಲ್ಲಿ ಸಂಘಟಿತ ವಲಯದಲ್ಲಿದ್ದ ಒಟ್ಟು ಉದ್ಯೋಗವಕಾಶಗಳು 2.28 ಕೋಟಿ ಇದು ಒಟ್ಟು ಸಂಬಳದಾರರ 17.6% ಅಂದರೆ ಉಳಿದ 82.4% ದುಡಿಮೆಗಾರರು ಅಂಸಘಟಿತ ವಲಯ ದಲ್ಲಿದ್ದಾರೆ. 1981 ರ ಜನಗಣತಿ ಪ್ರಕಾರ ಇವರ ಸಂಖ್ಯೆ 10.7 ಕೋಟಿ.

ಈ ಅಸಂಘಟಿತ ವಲಯದಲ್ಲಿ ಅತಿ ದೊಡ್ಡ ವಿಭಾಗ ಕೃಷಿ ಕಾರ್ಮಿಕರದ್ದು 5.55 ಕೋಟಿ. ಸಂವಿಧಾನದ ನಿರ್ದೇಶಕ ಸೂತ್ರದಲ್ಲಿ ಅವರ ಬಗ್ಗೆ ನಿರ್ದಿಷ್ಟವಾಗಿ ಪ್ರಸ್ತಾಪವಿದೆ. ಈ ಸೂತ್ರ ಕೃಷಿ, ಕೈಗಾರಿಕಾ ಇತರ ಯಾವುದೇ ವಲಯದ ಕಾರ್ಮಿಕರಿಗೆ ಕೇವಲ ಬದುಕುಳಿಯುವ ಕೂಲಿ ಮಾತ್ರವಲ್ಲ, ಒಂದು ತಕ್ಕ ಮಟ್ಟದ ಜೀವನಸ್ತರ ಸಿಗುವಂತೆ ಮಾಡಬೇಕು ಎಂದು ನಿರ್ದೇಶಿಸಿದೆ. ಈ ದಿಕ್ಕಿನಲ್ಲಿ ಆದ ಸಾಧನೆಯೆಷ್ಟು ಎಂದು ಹೇಳದಿರು ವುದೇ ಒಳ್ಳೆಯದು.

ಭೂತಲಿಂಗಂ ಸಮಿತಿಯ 1978 ರ ವರದಿಯಲ್ಲಿ ಭಾರತದೆಲ್ಲೆಡೆ ಕೃಷಿ ಕಾರ್ಮಿಕರಿಗೆ ನಿಗದಿ ಮಾಡಿದ ಕನಿಷ್ಠ ದಿನಕೂಲಿಯ ಅಂಕಿ ಅಂಶ ದೊರೆಯುತ್ತದೆ. ಇದು ಹೆಚ್ಚಿನ ಕಡೆ 3 ರೂ. ಇದ್ದರೆ ಕೇರಳದಲ್ಲಿ 6.50, ಪಶ್ಚಿಮ ಬಂಗಾಳದಲ್ಲಿ 5.60 ಮತ್ತು ನಾಗಾಲ್ಯಾಂಡ್‌ನಲ್ಲಿ 8 ರೂ ಇತ್ತು. 1977 ರಲ್ಲಿ ಮೇಲೆ ಹೇಳಿದ ಕಾರ್ಖಾನೆ ವಲಯದ ಕಾರ್ಮಿಕರ ತಲಾ ದಿನಗೂಲಿ 42 ರೂ. (ಎಲ್ಲಾಸೇರಿ). ಅಂದರೆ ಕೃಷಿ ಕಾರ್ಮಿಕರಿಗೆ ಕಾರ್ಖಾನೆ ಕಾರ್ಮಿಕರಿಗಿಂತಲೂ ಬಹಳ ಕಡಿಮೆ ಸುಮಾರು 10% ದಷ್ಟು.

ಕೃಷಿ ಕಾರ್ಮಿಕರ ಕೂಲಿದರ ಬುಡಕಟ್ಟು ಜಮೀನು ಇನ್ನೂ ಇರುವ ನಾಗಾಲ್ಯಾಂಡ್,ಮಣಿಪುರಗಳಲ್ಲಿ ಹೆಚ್ಚಿದ್ದು, ನಂತರ ಭೂಸುಧಾರಣೆ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿರುವ ಕೇರಳ. ಪಶ್ಚಿಮ ಬಂಗಾಳದಲ್ಲಿ ಕೂಲಿದರ ಇತರೆಡೆಗಳಿಗಿಂತ ಸ್ವಲ್ಪ ಹೆಚ್ಚದೆಯೆಂಬುದನ್ನು ಗಮನಿಸಿದರೆ ಸರಿಯಾದ ಭೂಸುಧಾರಣೆಗಳಿಲ್ಲದೆ ಕೃಷಿ ಕಾರ್ಮಿಕರ ಕೂಲಿಯನ್ನು ಹೆಚ್ಚಿಸಲು ಸಾಧ್ಯವಿಲ್ಲ ಎಂಬ ಸಂಗತಿ ತಿಳಿದು ಬರುತ್ತದೆ.

ಕಾರ್ಮಿಕ ವರ್ಗ ಸಾರ್ವತ್ರಿಕವಾಗಿ ಕೂಲಿಯ ಮಟ್ಟ ಹೆಚ್ಚಿಸುವ ಹೋರಾಟ ದಲ್ಲಿ ಕೃಷಿ ಕಾರ್ಮಿಕರನ್ನು ಒಳಗೊಳ್ಳ ಬೇಕು. ಆ ಹೋರಾಟದ ಜತೆಗೇ ಭೂಸುಧಾರಣೆಯ ಹೋರಾಟವನ್ನು ನಡೆಸಬೇಕು. ಏಕೆಂದರೆ ಭೂಸುಧಾರಣೆಯ ಹೋರಾಟವಿಲ್ಲದೆ ಕೂಲಿ ಹೆಚ್ಚಿಸುವ ಹೋರಾಟ ಯಶಸ್ವಿಯಾಗಲು ಸಾಧ್ಯವಿಲ್ಲ. ಸಂವಿಧಾನದ ನಿರ್ದೇಶಕ ಸೂತ್ರ ಏನೇ ಹೇಳಿದರೂ ಕೃಷಿ ಕಾರ್ಮಿಕರಿಗೆ ಬದುಕುಳಿ ಯಲು ಬೇಕಾದ ಕನಿಷ್ಠ ಅವಶ್ಯಕತೆಯೂ ಸಿಗುತ್ತಿಲ್ಲ. ಜತೆಗೆ ಹಲ್ಲೆಗಳ ಭಯ ವಿಲ್ಲದೆ ಬದುಕುವ ಅವಕಾಶವೂ ಇಲ್ಲ. ಎಡ ಆಳ್ವಿಕೆಯ ರಾಜ್ಯಗಳನ್ನು ಬಿಟ್ಟರೆ ಉಳಿದೆಲ್ಲ ಕಡೆಗೆ ಇದೇ ಸ್ಥಿತಿ. ಇವರನ್ನು ಈ ರೀತಿಯ ಬಂಧನದಿಂದ ಮುಕ್ತ ಗೊಳಿಸಲು ಹೋರಾಡುವುದು ನಮ್ಮೆಲ್ಲರ ಕರ್ತವ್ಯ.





ಸಿರಿತನದ ನಟ್ಟ ನಡುವೆ ಬಡತನ

ಪ್ಲಾಂಟೇಶನ್ ಮತ್ತು ಬೀಡಿ ಉದ್ದಿಮೆಗಳಲ್ಲಿ

ಕರ್ನಾಟಕದಲ್ಲಿ ಕಾಫಿ ಮುಖ್ಯ ತೋಟದ ಬೆಳೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಅಂಕಿ-ಅಂಶಗಳನ್ನೇ ವಿಶ್ಲೇಷಿಸೋಣ.

1951 ರಲ್ಲಿ ತಲಾ ಕಾಫಿ ಉತ್ಪಾದನೆ 143 ಕೆ.ಜಿ. ಅಂದರೆ ಪ್ರತಿ ಹತ್ತು ಟನ್ ಕಾಫಿ ಉತ್ಪಾದನೆಗೆ 70 ಕಾರ್ಮಿಕರು ದುಡಿಯುತ್ತಿದ್ದರು. ಹತ್ತು ವರ್ಷಗಳ ನಂತರ 1961ರಲ್ಲಿ ಇದು 60ಕ್ಕೆ ಇಳಿಯಿತು. (ಆ ವರ್ಷ ಪ್ಲಾಂಟೇಶನ್ ಆಕ್ಟನ್ನು ತಿದ್ದುಪಡಿ ಮಾಡಿದಾಗ ಮಾಲಿಕರು ಅದುವರೆಗೆ ದುಡಿಸಿಕೊಂಡ ಕಾರ್ಮಿಕರ ಸರಿಯಾದ ಸಂಖ್ಯೆ ವರದಿ ಮಾಡಿದಂತೆ ಕಾಣುವುದಿಲ್ಲ. ಆದರೆ ಕಾರ್ಮಿಕರ ಉತ್ಪಾದಕತೆಯನ್ನು ಪರಿ ಶೀಲಿಸಲು ವರದಿಯಾಗಿರುವ ತಲಾ ಉದ್ಯೋಗದ ಅಂಕಿ-ಅಂಶಗಳನ್ನೇ ಅವಲಂಬಿಸಬೇಕಾಗಿದೆ)

1961 ರಿಂದ 1971 ರ ನಡುವೆ ತಲಾ ಉತ್ಪಾದನೆ 2510 ಕೆ.ಜಿ.ಗೆ ಏರಿತು. ಹತ್ತು ಟನ್‌ಕಾಫಿ ಉತ್ಪಾದಿಸಲು ಕೇವಲ ನಾಲ್ಕು ಕಾರ್ಮಿಕರು ಸಾಕಾಗಿತ್ತು. (ಕೋಷ್ಟಕ ನೋಡಿ). 9 ವರ್ಷಗಳ ನಂತರ 1979 ರಲ್ಲಿ ಇದು $2^1/_2$ ಗೆ ಇಳಿಯಿತು.

ಚಹಾ ಉತ್ಪಾದನೆಗೆ ಸಂಬಂದಪಟ್ಟಂತೆ ನಾವು ಗಮನಿಸಬೇಕಾದ ಅಂಕಿ-ಅಂಶಗಳು ಹೀಗಿವೆ. ಹತ್ತು ಟನ್ ಟೀ ಉತ್ಪಾದನೆಗೆ 1951 ರಲ್ಲಿ 32 ಕಾರ್ಮಿಕರು ಬೇಕಿತ್ತು. 1961, 1971 ಹಾಗೂ 1972 ರಲ್ಲಿ ಇದು ಅನುಕ್ರಮವಾಗಿ 25,17 ನಂತರ 10ಕ್ಕೆ ಇಳಿಯಿತು. 1951 ರಿಂದ 1985 ರ ನಡುವೆ ಚಹಾ ಉತ್ಪಾದನೆ 2.75 ಲಕ್ಷ ಟನ್‌ಗಳಿಂದ 6.5 ಲಕ್ಷಕ್ಕೇರಿತು.

ತೋಟ ಕಾರ್ಮಿಕರ ಶೋಚನೀಯ ಸ್ಥಿತಿ ಸಿರಿತನದ ನಟ್ಟ ನಡುವೆ ಇರುವ ಬಡತನ ಎಂಬುದು ಗಮನಿಸಬೇಕಾದ ಸಂಗತಿ. ಕರ್ನಾಟಕದ 20 ಜಿಲ್ಲೆಗಳಲ್ಲಿ ತೋಟಗಾರಿಕೆಯ ಜಿಲ್ಲೆಗಳಾದ ಕೊಡಗು,

ಚಿಕ್ಕಮಗಳೂರು ಮತ್ತು ಹಾಸನಗಳಲ್ಲಿ ತಲಾ ಆದಾಯ ಅತೀ ಹೆಚ್ಚು. ಅತೀ ಹೆಚ್ಚು ಕೈಗಾರೀಕರಣ ಕಂಡಿರುವ ಬೆಂಗಳೂರು ಜಿಲ್ಲೆಯ ಸ್ಥಾನ ಕೂಡಾ ಇವು ಮೂರು ಜಿಲ್ಲೆಗಳ ನಂತರವೇ. ಹೆಚ್ಚು ಲಾಭಗಿಟ್ಟಿಸುವುದು ಎಲ್ಲಿ ಎಂಬುದು ಸ್ಪಷ್ಟವಾಗುತ್ತದೆ

ಕೋಷ್ಟಕ

ವರ್ಷ	1951	1961	1971
ಕಾಫಿ ಕಾರ್ಮಿಕರ ಸಂಖ್ಯೆ	1,75,11	2,85,444	43808
ಕಾಫಿ ಬೆಳೆ ಪ್ರದೇಶ(ಹೆಕ್ಟೇರು)	91,000	1,14,000	1,10,000
ಒಟ್ಟು ಉತ್ಪಾದನೆ(ಟನ್)	25,000	1,65,000	1,10,000

ಕರ್ನಾಟಕ ದೇಶದ 80% ಕಾಫಿ ಬೆಳೆಯುತ್ತದೆ. 1951 ರಿಂದ 1979 ರ ನಡುವೆ ಕಾಫಿ ಉತ್ಪಾದನೆ ಐದುಪಟ್ಟು ಹೆಚ್ಚಿದೆ. ಆದರೆ ಈ ಅವಧಿಯಲ್ಲೇ ವರದಿಯಾಗಿರುವ ಸರಾಸರಿ ತಲಾಉದ್ಯೋಗಾ ವಕಾಶ ತೀವ್ರವಾಗಿ ಇಳಿದಿದೆ. ಉತ್ಪಾದಕತೆ 28 ಪಟ್ಟು ಹೆಚ್ಚಿದ್ದರೂ ಅದಕ್ಕೆ ಅನುಗುಣವಾಗಿ ಕೂಲಿ ಹೆಚ್ಚಲಿಲ್ಲ.

ದಿನಕೂಲಿಯ ದರ ಹೇಗಿತ್ತು : 1979 ರ ಮೊದಲು ರೂ.6.50; 1984 ರಲ್ಲಿ ರೂ 10-1.4.90 ರಂದು ತುಟ್ಟಿಭತ್ಯೆ ಸೇರಿದರೆ ಇದು ರೂ. 16.16 ಆಗುತ್ತದೆ. ನಡುವೆ ಬೆಲೆಯೇರಿಕೆ ಇಮ್ಮಡಿಯಾಗಿರುವುದನ್ನು ಗಮನಿಸಿದರೆ 1979 ರ ಮಟ್ಟದಲ್ಲಿ 1990 ರ ನಿಜವಾದ ದಿನಕೂಲಿ ರೂ'8'08 ಅಂದರೆ 1.24 ಪಟ್ಟು ಏರಿತಷ್ಟೆ. ಆದರೆ 1979 ರಿಂದ 1985 ರಲ್ಲೇ ಉತ್ಪಾದನೆ 1.4 ಪಟ್ಟು ಹೆಚ್ಚಿತು!

ಅಂದರೆ ತೋಟ ಕಾರ್ಮಿಕನ ಉತ್ಪಾದ ಕತೆ ಹೆಚ್ಚಿದರೂ ಅದಕ್ಕನುಗುಣವಾದ ಕೂಲಿಯೇರಿಕೆ ಅತನಿಗೆ ದೊರೆತಿಲ್ಲ.

ಬೀಡಿ ಉದ್ದಿಮೆಯಲ್ಲಿ

ಈ ಉದ್ದಿಮೆಯ ಬಗ್ಗೆ ಈ ಲೇಖಕನ ಬಳಿ ಅಂಕಿ ಅಂಶಗಳಿಲ್ಲ. ಆದರೆ ಕರ್ನಾಟಕ ಲಾ ಜರ್ನಲ್‌ನ 1989 ರ ಕೊನೆಯ ಕಾಲು ವಾರ್ಷಿಕ ಸಂಚಿಕೆ ಯ ಹಿಂದಿನ ಪುಟದಲ್ಲಿ 'ಮಂಗಳೂರು ಗಣೇಶ ಬೀಡಿ' ಯ ದೈನಿಕ ಮಾರಾಟ 8 ಕೋಟಿ ಬೀಡಿಗಳಿಗಿಂತಲೂ ಹೆಚ್ಚು ಎಂದು ಅದರ ಜಾಹೀರಾತು ಹೇಳಿಕೊಂಡಿದೆ. ಬೀಡಿ ಉತ್ಪಾದನೆಯ ಸರಾಸರಿ ದರಗಳನ್ನು ಕೇರಳದ ದಿನೇಶ ಬೀಡಿ 1988 ರ ಅಂತ್ಯದಲ್ಲಿ ಪ್ರಕಟಿಸಿದ ಅಂಕಿ-ಅಂಶಗಳಿಂದ ಪರಿಶೀಲಿಸೋಣ.

ತಲಾ ಬೀಡಿ ಉತ್ಪಾದನೆ-730 ಪ್ರತಿದಿನ ಸರಾಸರಿ ದೈನಿಕ ಮಾರಾಟ-15 ಲಕ್ಷ ರೂ. ಒಟ್ಟು ಕಾರ್ಮಿಕರ ಸಂಖ್ಯೆ-40,000 ಪ್ರತಿ ಸಾವಿರಕ್ಕೆ ಕೂಲಿ ರೂ 35- ಉತ್ಪಾದನಾ ಖರ್ಚಿನ 67%ರಷ್ಟು ಕೂಲಿ ನೀಡಲಾ ಯಿತು. 730 ಬೀಡಿಗಳ ಉತ್ಪಾದನಾ ವೆಚ್ಚ ಸರಾಸರಿ 37.50 ರೂ ಇದರಲ್ಲಿ 16 ರೂ ಕೂಲಿ 2.50 ಬೋನಸ್ 7.12 ರಜಾ ಮತ್ತಿತರ ಸಾಮಾಜಿಕ ಭದ್ರತಾಕ್ರಮಗಳಿಗಾಗಿ, ರೂ 3.00 ಎಕ್ಸೈಸ್ ಸುಂಕ 8-80 ಕಚ್ಚಾ ಸಾಮಗ್ರಿಗಳಾಗಿ.

ಕೂಲಿಯೊಂದನ್ನು ಬಿಟ್ಟು ಉಳಿದೆಲ್ಲಾ ಖರ್ಚುಗಳು ಗಣೇಶ ಬೀಡಿಗೂ ಹೀಗೇ ಇರಬಹುದು. ಇದೇ ಅವದಿಯಲ್ಲಿ ಗಣೇಶ ಬೀಡಿ ತನ್ನ ಸಗಟು ಕಾಂಟ್ರಾಕ್ಟು ದಾರರಾದ ಜ್ಯೋತಿ ಹೋಂ ಇಂಡಸ್ಟ್ರೀಸ್‌ಗೆ ತೆತ್ತಹಣ ಪ್ರತಿಸಾವಿರಕ್ಕೆ 20 ರೂ. ಇದರಲ್ಲಿ ಅವರು ನೀಡಬೇಕಾದ ಕೂಲಿ, ಇತರ ಖರ್ಚು ಹಾಗೂ ಲಾಭಾಂಶ ಇವೆಲ್ಲವೂ ಸೇರಿದೆ.

1988 ರಲ್ಲಿ ಕರ್ನಾಟಕದಲ್ಲಿ ನೋಟಿಫೈ ಆದ ಬೀಡಿ ಉದ್ದಿಮೆಯ ಕೂಲಿ ದರ ರೂ 14.28-ತುಟ್ಟಿಭತ್ಯೆ ಇತ್ಯಾದಿಯೆಲ್ಲಾ ಸೇರಿ. 8.33 ಬೋನಸ್, ರಜಾವೇತನ, ಪಿ.ಎಫ್ ಇತ್ಯಾದಿಯೆಲ್ಲಾ ಸೇರಿ ಇದು ಸಾವಿರಕ್ಕೆ 18 ರೂ. ಆಗುತ್ತದೆ. ಅಂದರೆ ದಿನೇಶ ಬೀಡಿ ಸಮಾರು ಅರ್ಧ ಖರ್ಚಿನಲ್ಲಿ ಕರ್ನಾಟಕದ ಬೀಡಿ ಮಾಲಿಕರು ಉತ್ಪಾದನೆ ಪಡೆಯುತ್ತಾರೆ. ಪತಿ ದಿನ ಸಾವಿರ ಬೀಡಿಗಳಲ್ಲಿ ಹೀಗೆ 17 ರೂ.

ಉಳಿಸುತ್ತಾರೆಂದರೆ8 ಲಕ್ಷ ಬೀಡಿಗಳಲ್ಲಿ ಉಳಿಸಿದ ರೂ 13.6 ಲಕ್ಷ ವರ್ಷಕ್ಕೆ ಇದು ರೂ. 42.56 ಕೋಟಿ ರೂ.ಗಳು (313 ಕೆಲಸದ ದಿನಗಳು ಎಂದಿಟ್ಟು ಕೊಂಡು) ಕೇವಲ ದಿನೇಶ್ ಬೀಡಿ ಮತ್ತು ಗಣೇಶ ಬೀಡಿಯಲ್ಲಿ ಕೂಲಿ ವ್ಯತ್ಯಾಸವೊಂದ ರಿಂದಲೇ ಉಳಿಸಿದ ಹಣವಿದು. ಗಣೇಶ ಬೀಡಿ ಮಾಲಿಕರು ದೇಶದಲ್ಲೇ ಅದಾಯ ತೆರಿಗೆ ತೆರುವ ಪ್ರಮುಖರಲ್ಲಿ ಒಬ್ಬರಾಗಿ ರುವುದು ಸುಮ್ಮನೆ ಏನೂ ಅಲ್ಲವಲ್ಲ.

> ದಿನೇಶ ಬೀಡಿಗೆ ಹೋಲಿಸಿದರೆ ಕೂಲಿಯೊಂದರಲ್ಲೇ ಪ್ರತಿ ಸಾವಿರ ಬೀಡಿಯಲ್ಲಿ 17 ರೂ. ಉಳಿಸುವ ಗಣೇಶ ಬೀಡಿ ಮಾಲಿಕರು ದೇಶದಲ್ಲೇ ಅದಾಯ ತೆರಿಗೆ ತೆರುವ ಪ್ರಮುಖರಲ್ಲಿ ಒಬ್ಬರಾಗಿದ್ದರೆ ಆಶ್ಚರ್ಯವಿದೆಯೇ?

“ದೇವಸ್ಥಾನ ಚಳುವಳಿ”ಯಿಂದಲೂ ಕಾಂಗ್ರೈಗೆ ಏನೂ ಗಿಟ್ಟಲಿಲ್ಲ ಬಿ.ಜೆ.ಪಿ.ಗೂ ಗಿಟ್ಟಲಿಲ್ಲ

ತಿರುವಾಂಕೂರು ದೇವಸ್ಥಾನ ಮಂಡಳಿಯ ಚುನಾವಣೆಯ ವಿಷಯದಲ್ಲಿ ಕಾಂಗ್ರೆ, ಬಿ.ಜೆ.ಪಿ.,ವಿ.ಹೆಚ್.ಪಿ., ಆರ್.ಎಸ್.ಎಸ್. ಬಹಳಷ್ಟು ಗದ್ದಲವೆಬ್ಬಿಸಿದ್ದನ್ನು ನಮ್ಮ ಓದುಗರು ದಿನ ಪತ್ರಿಕೆಗಳಲ್ಲಿ ಓದಿರಬಹುದು. ಏಕೆ ಅವರು ಚಳುವಳಿ ನಡೆಸಿದರು. ದೇವಸ್ಥಾನಗಳಿಗೂ ಎಲ್.ಡಿ.ಎಫ್.ಗೂ ಏನು ಸಂಬಂಧ ಎಂಬ ಪ್ರಶ್ನೆ ಕೆಲವರಲ್ಲಿ ಎದ್ದಿರಲೂಬಹುದು.

1950 ರಲ್ಲಿ ತಿರುವಾಂಕೂರು-ಕೊಚ್ಚಿ ಹಿಂದೂ ಧಾರ್ಮಿಕ ಸಂಸ್ಥೆಗಳ ಶಾಸನವನ್ನು ಕೇರಳ ವಿಧಾನಸಭೆ ಅಂಗೀಕರಿಸಿತು. ಹಿಂದೂ ಧಾರ್ಮಿಕ ಸಂಸ್ಥೆಗಳ ನಿರ್ವಹಣೆಗೆ ದೇವಸ್ಥಾನ ಮಂಡಳಿ ರಚಿಸಲಾಯಿತು. ಇದರ ಮೂವರು ಸದಸ್ಯರಲ್ಲಿ ಒಬ್ಬರು ವಿಧಾನ ಮಂಡಲವನ್ನು ಪ್ರತಿನಿಧಿಸುವವರಾಗಿದ್ದು ಅವರನ್ನು ವಿಧಾನ ಮಂಡಲದ ಹಿಂದೂ ಸದಸ್ಯರು ಚುನಾಯಿಸಬೇಕೆಂದು ವಿಧಿಸಲಾಯಿತು.

ಕರುಣಾಕರನ್ ಆಳ್ವಿಕೆಯಲ್ಲಿ ಈ ವಿಧಿಯ ಪ್ರಕಾರ ವಿರೋಧ ಪಕ್ಷದ ಆಳ್ವಿಕೆಯಲ್ಲಿ ಈ ಸ್ಥಾನಕ್ಕೆ ಚುನಾಯಿತರಾಗುವುದು ಖಂಡಿತವೆಂದು ಕಂಡುಬಂದಾಗ ಕರುಣಾಕರನ್ ಒಂದು ಸುಗ್ರೀವಾಜ್ಞೆ ತಂದರು. ದೇವರಲ್ಲಿ, ದೇವಸ್ಥಾನ ಪೂಜೆಯಲ್ಲಿ ನಂಬಿಕೆಯಿದ್ದರೂ ಎಂ.ಎಲ್.ಎ.ಗಳು ಮಾತ್ರ ಮತ ಚಲಾಯಿಸಬಹುದೆಂಬುದು ಆ ಸುಗ್ರೀವಾಜ್ಞೆ. ಆ ಸುಗ್ರೀವಾಜ್ಞೆಯನ್ನು ಶಾಸನವಾಗಿ ಪರಿವರ್ತಿಸುವ ಗೋಜಿಗೇ ಹೋಗಲಿಲ್ಲ. ಅದು ತಂತಾನೇ ಅನೂರ್ಜಿತವಾಯಿತು. ಕರುಣಾಕರನ್ ನಿಜ ಉದ್ದೇಶ ಏನೆಂದು ಇದರಿಂದ ಸ್ಪಷ್ಟವಾಗಿತ್ತು.

ಏಪ್ರಿಲ್ 1990 ರಲ್ಲಿ ದೇವಸ್ಥಾನ ಮಂಡಳಿಯ ಆ ಕಾಂಗ್ರೆ ಸದಸ್ಯರ ಅಧಿಕಾರಾವಧಿ ಮುಕ್ತಾಯಗೊಂಡು ಎಲ್.ಡಿ.ಎಫ್. ನ ಅಭ್ಯರ್ಥಿ ಕಾಂಗ್ರೆಸ್ (ಎಸ್)ನ ಸದಸ್ಯರೊಬ್ಬರು ಆಯ್ಕೆಯಾದರು. ಈ ಚುನಾವಣೆಯ ವಿರುದ್ಧ, ಕಾಂಗ್ರೆ, ಬಿ.ಜೆ.ಪಿ. ವಿ.ಹೆಚ್.ಪಿ. ಆರ್.ಎಸ್.ಎಸ್. ಹೈಕೋರ್ಟಿಗೆ ಹೋಯಿತು. ಹೈಕೋರ್ಟು ಶಾಸನದಲ್ಲಿ 'ಹಿಂದೂ' ಎಂದರೆ ದೇವರಲ್ಲಿ, ದೇವಸ್ಥಾನ ಪೂಜೆಯಲ್ಲಿ ನಂಬಿಕೆಯಿರುವ ವ್ಯಕ್ತಿ ಎಂದು ತೀರ್ಪಿತ್ತು ಚುನಾವಣೆಯನ್ನು ಅನೂರ್ಜಿತಗೊಳಿಸಿತು. ಹೈಕೋರ್ಟಿನ ಈ ತೀರ್ಪಿನ ಪರಿಣಾಮ ನಿವಾರಿಸಲು ಕೇರಳ ವಿಧಾನಸಭೆ ಜೂನ್ 20 ರಂದು ಒಂದು ತಿದ್ದುಪಡಿ ಮಸೂದೆಯನ್ನು 52-28 ಮತಗಳಿಂದ ಅಂಗೀಕರಿಸಿತು.

ಹೈಕೋರ್ಟಿನ ತೀರ್ಪನ್ನು ಬಳಸಿ ಎಲ್.ಡಿ.ಎಫ್. ವಿರುದ್ಧ ಹಿಂದೂಗಳನ್ನು ಎತ್ತಿ ಕಟ್ಟಲು ಕರುಣಾಕರನ್ ಮತ್ತವರ ತಂಡ ಪ್ರಯತ್ನಿಸಿತು. ಸಹಜವಾಗಿಯೇ ಅದಕ್ಕೆ ಬಿ.ಜೆ.ಪಿ-ವಿ.ಹೆಚ್.ಪಿ., ಆರ್.ಎಸ್.ಎಸ್. ದೇವಸ್ಥಾನ ರಕ್ಷಣಾ ಸಮಿತಿ ರಚಿಸಿಕೊಂಡು ತಿದಿಯೂದಿತು. ಆದರೆ ಏನೂ ಫಲಸಿಗಲಿಲ್ಲ. ಕಾಂಗ್ರೆ ಕೃಪೆಯಿಂದ ಚುನಾಯಿತರಾದ, ನೇಮಕಗೊಂಡ 'ಪವಿತ್ರ ದೇವಸ್ಥಾನ ಮಂಡಳಿ'ಯ ಸದಸ್ಯರು ತಮ್ಮ ಸುಪರ್ದಿಯಲ್ಲಿದ್ದ ದೇವರುಗಳಿಗಿಂತ ತಮ್ಮ ಜೇಬನ್ನೇ ಹೆಚ್ಚು ಪ್ರೀತಿಸಿದರೆಂಬುದು ಈ ಬಗ್ಗೆ ಈಗ ನಡೆಯುತ್ತಿರುವ ಹೈಕೋರ್ಟ್‌ನ ತನಿಖೆಯೊಂದರಿಂದ ಬೆಳಕಿಗೆ ಬರುತ್ತಿದೆ. ಇಂತಹ ಕಾಂಗ್ರೆಗಳದ್ದು ಇದು ಕೇವಲ ಹೇಗಾದರೂ

ಎಲ್.ಡಿ.ಎಫ್.ಗೆ ಕಿರುಕುಳ ಕೊಡುವ ಆಟ ಎಂಬುದು ಈಗ ಬಹುಮಂದಿಗೆ ಸ್ಪಷ್ಟವಾಗಿದೆ.

ಹೈಕೋರ್ಟಿನ 'ಹಿಂದೂ' ತೀರ್ಪಿನ ಬಗ್ಗೆ ತೀಕ್ಷ್ಣ ಟೀಕೆ ಮಾಡುತ್ತಾ ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಈಗ 'ಹೈಕೋರ್ಟ್ ಅನುಮತಿ ಪಡೆದ ಹಿಂದೂ' ಎಂಬ ಹೊಸ ಪಂಥವೊಂದಿದೆಯೇ ಎಂದು ವ್ಯಂಗವಾಗಿ ಪ್ರಶ್ನಿಸುತ್ತಾ ಈ ತೀರ್ಪಿನ ಪ್ರಕಾರ ದಯಾನಂದ ಸರಸ್ವತಿ, ವಿವೇಕಾನಂದ. ಟಾಗೋರ್, ನೆಹರೂ 'ಹೈಕೋರ್ಟ್ ಹಿಂದೂ' ಅಲ್ಲ ಎಂದು ವ್ಯಂಗ್ಯ ವಾಡಿದ್ದಾರೆ.

ನಿಜವಾಗಿ ಕಾಂಗ್ರೆ ಮತ್ತಿತರ ಬಿ.ಜೆ.ಪಿ. ಮಿತ್ರರು ಎತ್ತಿತೋರಿಸುವ ಅಭ್ಯಂತರವೇನು? ತೋರಿಕೆಗೆ ಅವರ ಅಭ್ಯಂತರವಿಷ್ಟೇ. ದೇವರಲ್ಲಿ, ದೇವಸ್ಥಾನದಲ್ಲಿ ನಂಬಿಕೆಯಿಲ್ಲದ ಹಿಂದೂಗಳು ಚುನಾಯಿಸಿದರೆ ದೇವಸ್ಥಾನದ ಆಡಳಿತ ನಾಸ್ತಿಕರ ಕೈಗೆ ಹೋಗಿ ಅಲ್ಲಿನ ವಾತಾವರಣವನ್ನೇ ಕಲಕುತ್ತದೆ! ಆದರೆ ಕೇರಳ ವಿಧಾನಸಭೆ ಅಂಗೀಕರಿಸಿದ ತಿದ್ದುಪಡಿ ಸ್ಪಷ್ಟವಾಗಿ ಹೇಳುತ್ತದೆ-ಮತದಾನ ನೀಡುವಲ್ಲಿ ಎಲ್ಲಾ ಹಿಂದೂ ಎಂ.ಎಲ್.ಎ.ಗಳು ಭಾಗವಹಿಸಬಹುದು. ಆದರೆ ಹಾಗೆ ಚುನಾಯಿತನಾದ ಪ್ರತಿನಿಧಿ ದೇವಸ್ಥಾನ ಮಂಡಳಿಯ ಕಾರ್ಯದರ್ಶಿಯೆದುರು ದೇವರಲ್ಲಿ, ದೇವಸ್ಥಾನದಲ್ಲಿ ತನಗೆ ನಂಬಿಕೆಯಿದೆ ಎಂದು ಪ್ರತಿಜ್ಞೆಮಾಡಬೇಕು. ಅಂದರೆ ಹಿಂದೂಗಳ ಧಾರ್ಮಿಕ ಭಾವನೆಗೆ ಕುಂದು ತರುವ ಪ್ರಶ್ನೆಯೇ ಇಲ್ಲ. ಆದರೂ ಏಕೆ ಈ ಅರ್ಭಟ? ದುರುದ್ದೇಶ ಅತಿ ಸ್ಪಷ್ಟ.

ಉದಾರೀಕರಣದ ದಿಕ್ಕಿನಲ್ಲಿ ದೊಡ್ಡ ನೆಗೆತ

ಹೊಸ ಕೈಗಾರಿಕಾ ಧೋರಣೆ ವಿದೇಶೀ ವಿನಿಮಯದ ಸಮಸ್ಯೆಯನ್ನು ಸರಿಪಡಿಸಲು ಸಾಲದ ಬಲೆಯತ್ತ ದೇಶ ಸಾಗುತ್ತಿರುವುದನ್ನು ತಪ್ಪಿಸಲು ಏನೇನೂ ಮಾಡಿಲ್ಲ ಎಂದು ಹನ್ನೊಂದು ಪ್ರಮುಖ ಆರ್ಥಿಕ ತಜ್ಞರು ನವದೆಹಲಿಯಲ್ಲಿ ನೀಡಿದ ಜಂಟಿ ಹೇಳಿಕೆಯೊಂದರಲ್ಲಿ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದಾರೆ. ಉದಾರೀಕರಣದ ದಿಕ್ಕಿನಲ್ಲಿ ಒಂದು ದೊಡ್ಡ ನೆಗೆತ ಹಾಕಿರುವ ನೀತಿಯಿದು; ಆ ಮೂಲಕ ಯೋಜನಾ ಬದ್ಧ ಅಭಿವೃದ್ಧಿಯ ತರ್ಕವನ್ನೇ ನಿರ್ಲಕ್ಷಿಸಿದ ನೀತಿಯಿದು ಎಂದು ಹೇಳಿಕೆ ತಿಳಿಸಿದೆ.

ಖಾಸಗೀ ವಲಯದ ರಫ್ತು ಪಟ್ಟಿಯಲ್ಲಿ ಇರುವ ಸಾಮಗ್ರಿಗಳು ಏನು ಎಂಬುದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿ. ಹೀಗಿರುವಾಗ ಅವರಿಗೆ ಅತ್ಯಂತ ಉದಾರತೆ ತೋರಿ ದೇಶಕ್ಕೆ ಹೆಚ್ಚಿನ ವಿದೇಶೀ ವಿನಿಮಯ ದೊರಕಿಸಬೇಕೆಂಬುದು ಮೂರ್ಖತನವಷ್ಟೇ. ಬದಲಿಗೆ ದೇಶ ಮತ್ತಷ್ಟು ಸಾಲಗಾರವಾಗುತ್ತದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಉದಾರೀಕರಣ ಯಾರ ಹಿತಾಸಕ್ತಿ ಈಡೇರಿಸುತ್ತದೆ? ಸಣ್ಣ ಉದ್ದಿಮೆಗಳದ್ದೇ ಅಥವಾ ದೊಡ್ಡ ಭಾರತೀಯ ಉದ್ಯಮಗಳದ್ದೇ? ಅಥವಾ ರಾಷ್ಟ್ರೀಯ ಟೋಪಿ ಹಾಕಿಕೊಂಡ ವಿದೇಶೀ ಕಂಪೆನಿಗಳದ್ದೇ? ಇಂತಹ ಪ್ರಶ್ನೆಗಳಿಗೆ ಉತ್ತರ ಸ್ವಯಂವೇದ್ಯ ಎಂದು ಈ ಹನ್ನೊಂದು ಆರ್ಥಿಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಹೋರಾಟದ ಹಾದಿಯಲ್ಲಿ ಕಾಯಂ ಆಗದ ಕಾರ್ಮಿಕರು.

ಮಧ್ಯಪ್ರದೇಶ ಸರಕಾರದ ವಿವಿಧ ಇಲಾಖೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಕ್ಯಾಷುಯಲ್, ದಿನಗೂಲಿ, ವರ್ಕ್‌ಚಾರ್ಜ್ ಮತ್ತು ಹಂಗಾಮಿ ಕಾರ್ಮಿಕರು ಹಾಗೂ ನೌಕರರು ದುಡಿಯುತ್ತಿದ್ದು ಅವರಿಗೆ ತಮ್ಮ ಕಾಯಮಾತಿ ಮತ್ತು ಇತರ ಸೌಲಭ್ಯಗಳ ಕೇಳಿಕೆಗಾಗಿ ಸಮರ ಸಾರುವ ಸಿದ್ಧತೆಯಲ್ಲಿದ್ದಾರೆ.

ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ, ನೀರಾವರಿ, ಅರಣ್ಯ ಮತ್ತು ಕೃಷಿ ಅಲ್ಲದೆ ಸ್ವಾಯತ್ತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸಂಘಗಳ ವಿಶೇಷ ಸಮಾವೇಶವೊಂದು ಇತ್ತೀಚೆಗೆ ನಡೆದು ಜುಲೈ 23 ರಂದು ಭೂಪಾಲ್‌ನಲ್ಲಿ ವಿಧಾನಸಭೆ ಮುಂದೆ ಬೃಹತ್ ಪ್ರದರ್ಶನ ನಡೆಸಲು ಕರೆ ನೀಡಿತು.

20-30 ವರ್ಷಗಳಿಂದ ದುಡಿಯುತ್ತಾ ಬಂದಿರುವ ಈ ನೌಕರರು, ಕಾರ್ಮಿಕರನ್ನು ಕಾಯಂ ಮಾಡಿಲ್ಲ. ಅಲ್ಲದೆ ಇತರರಿಗೆ ದೊರೆಯುವ ವೇತನ ಶ್ರೇಣಿ, ಭತ್ಯೆ ಮತ್ತಿತರ ಸೌಲಭ್ಯಗಳಿಂದ ಅವರನ್ನು ವಂಚಿಸಲಾಗಿದೆ ಎನ್ನುವುದನ್ನು ಸಮಾವೇಶ ಗಮನಿಸಿತು. ಅನ್ಯಾಯಕ್ಕೊಳಗಾಗಿರುವ ಈ ದುಡಿಮೆಗಾರರು ಈಗ ಸಿ.ಐ.ಟಿ.ಯು ನೇತೃತ್ವದಲ್ಲಿ ಸಂಘಟಿತರಾಗಿ ಮಧ್ಯಪ್ರದೇಶ ಸರಕಾರದ ವಿರುದ್ಧ ಚಳವಳಿ ನಡೆಸಲು ಸನ್ನದ್ಧರಾಗಿದ್ದಾರೆ.

ಅನೇಕ ವರ್ಷಗಳಿಂದ ಸಿಐಟಿಯು

ದೇಶದೊಳಗೆ

ನೇತೃತ್ವದಲ್ಲಿ ಹೋರಾಡುತ್ತಿರುವ ಈ ವಿಭಾಗದ ಜನರಿಗೆ ಹಿಂದಿನ ಕಾಂಗ್ರೆಸ್(ಐ) ಸರಕಾರದಿಂದ ಹಲವು ಆಶ್ವಾಸನೆಗಳು ದೊರಕಿದ್ದವು. ಆದರೆ, ಯಾವುದೂ ಕಾರ್ಯಗತವಾಗಿರಲಿಲ್ಲ. ಈಗ ಅಧಿಕಾರದಲ್ಲಿರುವ ಬಿ.ಜೆ.ಪಿ. ತಾನು ಅಧಿಕಾರಕ್ಕೆ ಬಂದರೆ ಈ ಕಾರ್ಮಿಕರನ್ನು ಕಾಯಂ ಮಾಡುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದ ಮೇಲೆ ಅದು ಕೂಡ ಕಾಂಗ್ರೆ ಸೂತ್ರವನ್ನೇ ಅಳವಡಿಸಿಕೊಂಡಿದೆ. ಕಾಯಮಾತಿ ಪ್ರಕ್ರಿಯೆ ಬಗ್ಗೆ ಪರಿಶೀಲನೆಗೆ ಅಧಿಕಾರಿಗಳ ಸಮಿತಿ ಯೊಂದನ್ನು ಅದು ನೇಮಿಸಿದೆ. ಇದು ಕಳೆದ ಐದು ವರ್ಷಗಳಲ್ಲಿ ಇಂಥ ಐದನೇ ಸಮಿತಿ ಯಾಗಿದೆ.

ಇದೊಂದು ದಿನದೂಡುವ ತಂತ್ರವಾಗಿದ್ದು, ಇದನ್ನು ಪ್ರತಿಭಟಿಸಿ 'ಸಿಟು' ಮೇ 11 ರಿಂದ ಹಲವಾರು ಚಳವಳಿಗಳನ್ನು ನಡೆಸುತ್ತಾ ಬಂದಿದೆ. ವಿಶೇಷ ಸಮಾವೇಶ ಪ್ರಥಮ ಹಂತದ ಕೊನೆಯ ಕಾರ್ಯಕ್ರಮ.

ಕಾರ್ಮಿಕರು ಮತ್ತು ನೌಕರರಿಗೆ ಕೊಟ್ಟ ಆಶ್ವಾಸನೆಯನ್ನು ಗೌರವಿಸದ ಬಿ.ಜೆ.ಪಿ.ಯನ್ನು ಸಮಾವೇಶವನ್ನು ಉದ್ಘಾಟಿಸಿದ ರಾಜ್ಯಸಿಐಟಿಯು ಕಾರ್ಯದರ್ಶಿ ಮೋತಿಲಾಲ್ ಶರ್ಮಾ ಖಂಡಿಸಿದರು. ಸಿ.ಪಿ.ಐ(ಎಂ) ರಾಜ್ಯ ಸಮಿತಿಯ [illegible] ಕಾರ್ಯದರ್ಶಿ ಶೈಲೇಂದ್ರ

ಬಿ.ಟಿ.ಆರ್. ಭವನ ಉದ್ಘಾಟನೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹಿರಿಯ ನೇತಾರ ಕಾ/ ಬಿ.ಟಿ. ರಣದಿವೆ ಅವರಿಗೆ ಗ್ವಾಲಿಯರ್‌ನ ಕಾರ್ಮಿಕರು ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ಶ್ರದ್ಧಾಂಜಲಿ ಸಭೆಯಲ್ಲಿ ಬಿ.ಟಿ.ಆರ್ ಭಾವಚಿತ್ರಕ್ಕೆ ಅನೇಕರು ಹಾರಾರ್ಪಣೆ ಮಾಡಿದರು. ಗ್ವಾಲಿಯರ್ ಜಿಲ್ಲಾ ಸಿ.ಐ.ಟಿ.ಯು. ಅಧ್ಯಕ್ಷ ಶೈಲೇಂದ್ರ ಶೈಲಿ ಅವರು ದಿವಂಗತ ನಾಯಕ ಕಾರ್ಮಿಕ ವರ್ಗದ ಬಗ್ಗೆ ಇಟ್ಟುಕೊಂಡಿದ್ದ ಪ್ರೇಮ ಮತ್ತು ನಿಷ್ಠೆಯನ್ನು ವಿವರಿಸಿದರು. ಆ ಬಗ್ಗೆ ಅನೇಕ ಘಟನೆಗಳನ್ನು ಉದಾಹರಿಸಿದರು.

ಗ್ವಾಲಿಯರ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರು ಕಟ್ಟಿಸಿರುವ ಸಿ.ಐ.ಟಿ.ಯು. ಕಾರ್ಯಾಲಯಕ್ಕೆ 'ಕಾ/ ಬಿ.ಟಿ. ರಣದಿವೆ ಭವನ' ಎಂದು ಹೆಸರಿಸಲಾಗಿದೆ. ನಾಮಫಲಕ ಅನಾವರಣದ ನಂತರ ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾದಲ್ ಸರೋಜ್ ಮಾತನಾಡಿದರು.

ಅಂಗನವಾಡಿ ಕಾರ್ಯಕರ್ತೆಯರ 'ದಿಲ್ಲಿ ಚಲೋ'

ಸಂಸತ್ತಿನ ಮಳೆಗಾಲದ ಅಧಿವೇಶನ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಬೃಹತ್ ಮೆರವಣಿಗೆ ಮತ್ತು ಮತಪ್ರದರ್ಶನ ನಡೆಸಲು ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಸಿದ್ಧತಾ ಸಮಿತಿ ನಿರ್ಧರಿಸಿದೆ.

ಆಗಸ್ಟ್ ಎಂಟರಂದು ಈ ಚಳವಳಿ ಕಾರ್ಯಕ್ರಮ ನಡೆಯಲಿದ್ದು ಬೆಳಿಗ್ಗೆ 9 ಕ್ಕೆ ಮಂಡಿ ಹೌಸಿನಿಂದ ಮೆರವಣಿಗೆ ಹೊರಡಲಿದೆ. ಬೋಟ್ ಕ್ಲಬ್ ತಲುಪಿ ಅಲ್ಲಿ ಸಾರ್ವಜನಿಕ ಸಭೆಯನ್ನು ನಡೆಸಲಾಗುವುದು. ಅಂದು ಸಂಘಟನೆಯ ನಿಯೋಗವೊಂದು ಪ್ರಧಾನಿ ವಿ.ಪಿ.ಸಿಂಗ್‌ರನ್ನು ಭೇಟಿಯಾಗಿ ಸಮಸ್ಯೆಗಳ ಬಗ್ಗೆ ಸಮಾಲೋಚನೆ ನಡೆಸುತ್ತದೆ.

ಉದ್ಯೋಗದ ಹಕ್ಕಿಗಾಗಿ ಮದರಾಸಿನಲ್ಲಿ ಪ್ರದರ್ಶನ

ಉದ್ಯೋಗ ಹಕ್ಕಿಗೆ ಸಾಂವಿಧಾನಿಕ ಖಾತರಿ ನೀಡಬೇಕು ಹಾಗೂ ಅದನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕೆಂದು ಆಗ್ರಹಿಸಿ ಜೂನ್ 9 ರಂದು ಮದರಾಸಿನಲ್ಲಿ ವಿಶಿಷ್ಟ ರ್‍ಯಾಲಿಯೊಂದು ನಡೆಯಿತು. ನಿರುದ್ಯೋಗ ವಿರೋಧಿ ಆಂದೋಲನ ಸಮಿತಿ(ಸಿ.ಸಿ.ಎ.ಯು.) ಮುಖಂಡತ್ವದಲ್ಲಿ ನಡೆದ ಈ ರ್‍ಯಾಲಿಯಲ್ಲಿ ಸಾವಿರಾರು ಜನರು ಪಾಲ್ಗೊಂಡು ಪ್ರಸಕ್ತ ನಿರುದ್ಯೋಗದ ಪರಿಸ್ಥಿತಿ ತಂದೊಡ್ಡಿರುವ ಹಾಹಾಕಾರವನ್ನು ಪ್ರತಿಭಟಿಸಿದರು.

ಫುಲೆ-ಅಂಬೇಡ್ಕರ್ ಶತಾಬ್ದಿ ವರ್ಷದಲ್ಲಿ

ಇತ್ತೀಚೆಗೆ ಪ್ರಯಾಣದರ ಏರಿಸಿರುವುದರಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆಂದು ನಿವೇದಿಸುವ ಮನವಿಪತ್ರವೊಂದು ಮಹಾರಾಷ್ಟ್ರ ಎಸ್.ಎಫ್.ಐ. ಕಾರ್ಯದರ್ಶಿ ಮಂಡಳಿಯು ರಾಜ್ಯದ ಸಾರಿಗೆ ಸಂಸ್ಥೆಯ ಅಧ್ಯಕ್ಷರಿಗೆ ಒಪ್ಪಿಸಿತು. ರಾಜ್ಯದ ಹಣಕಾಸು ಸಚಿವರು ಪ್ರಾಥಮಿಕ, ಮಾಧ್ಯಮಿಕ ಉಚ್ಚ ಮಾಧ್ಯಮಿಕ ಶಿಕ್ಷಣದ ಶುಲ್ಕವನ್ನು ಏರಿಸಿ ಪ್ರಕಟಣೆ ಹೊರಡಿಸಿರುವುದನ್ನೂ ಎಸ್.ಎಫ್ ಐ. ಖಂಡಿಸಿದೆ.

ಫುಲೆ-ಅಂಬೇಡ್ಕರ್ ಶತಾಬ್ದಿ ವರ್ಷದಲ್ಲಿ ಪ್ರಯಾಣದರ, ಪುಸ್ತಕಗಳ ಬೆಲೆ ಏರಿಸಿದ್ದಲ್ಲದೆ ಶಿಕ್ಷಣ ಶುಲ್ಕವನ್ನೂ ಹೆಚ್ಚಿಸುವ ಮೂಲಕ ಸರಕಾರ ಆ ನಾಯಕರುಗಳ ವಿಚಾರ ಮತ್ತು ಕಾರ್ಯಗಳಿಗೆ ತಿಲಾಂಜಲಿ ನೀಡುತ್ತಿದೆ ಎನ್ನುವುದು ಎಸ್.ಎಫ್.ಐ. ಅಭಿಪ್ರಾಯವಾಗಿದೆ. ಶುಲ್ಕ ಹೆಚ್ಚಳದಿಂದ ಸಾಮಾನ್ಯ ವಿದ್ಯಾರ್ಥಿಗಳು ಶಿಕ್ಷಣದಿಂದಲೇ ವಂಚಿತರಾಗುವ ಸನ್ನಿವೇಶ ಸೃಷ್ಟಿಯಾಗಿದೆ.

ಐ.ಟಿ.ಐ ವಿದ್ಯಾರ್ಥಿಗಳ ಹೋರಾಟ

ರಾಜ್ಯದ ಐ.ಟಿ.ಐ ವಿದ್ಯಾರ್ಥಿಗಳನ್ನು ಪ್ರತಿನಿಧಿಸಿದ ಸುಮಾರು 1,000 ವಿದ್ಯಾರ್ಥಿಗಳು ಜೂನ್ 21 ರಂದು ಮುಂಬಯಿಯಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಮುಂದೆ ಪ್ರತಿಭಟನೆ ನಡೆಸಿದರು.

ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ಐ.ಟಿ.ಐ. ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಎಸ್.ಎಫ್.ಐ. ಈ ಕಾರ್ಯಕ್ರಮವನ್ನು ಯೋಜಿಸಿತ್ತು.

ಪ್ರಶ್ನೆ ಪತ್ರಿಕೆಗಳನ್ನು ಮಾತೃಭಾಷೆಯಲ್ಲಿ ಒದಗಿಸಬೇಕು, 100 ಶೇ. ಸ್ಟೈಪೆಂಡ್ ಮತ್ತು ಅಪ್ರೆಂಟಿಸ್‌ಶಿಪ್, ಇ.ಬಿ.ಸಿ. ಸೌಲಭ್ಯದ ಹಣವನ್ನು ತ್ವರಿತವಾಗಿ ಹಿಂದಿರುಗಿಸಬೇಕು. ವಿದ್ಯಾರ್ಥಿ ವೇತನ ಪಡೆಯುವ ಎಲ್ಲರಿಗೂ ಇ.ಬಿ.ಸಿ. ಸೌಲಭ್ಯ ದೊರೆಯಬೇಕು. ಹೊಸದಾಗಿ ಜಾರಿಗೆ ತಂದಿರುವ 15 ರೂ. ತರಬೇತಿ ಶುಲ್ಕ ರದ್ದುಪಡಿಸಬೇಕು ಮೊದಲಾದವು ಅವರ ಬೇಡಿಕೆಗಳು.

ಮನವಿಯನ್ನು ಅಧಿಕಾರಿಗಳಿಗೆ ಒಪ್ಪಿಸಿದ ನಂತರ ಪ್ರದರ್ಶನಕಾರರನ್ನುದ್ದೇಶಿಸಿ ಮರಿಯಮ್ ಬಟವಾಲಾ, ಭಾಗವತ ಝೂಡಗೆ, ರಾಜೂ ಗೋರಡೆ, ಪಾಂಡುರಂಗ ರಾಠೋಡ್ ಮಾತನಾಡಿದರು.

“ನನ್ನ ಮನಮುಟ್ಟಿದ ಘಟನೆ”

ನಮ್ಮ ಕಣ್ಣ ಮುಂದೆಯೇ ಅನೇಕ ಘಟನೆಗಳು ಕ್ರಾಂತಿಕಾರಿಗಳಾದ ನಮ್ಮ ಮನಸ್ಸನ್ನು ಕಲಕುವ, ಮನ ಮುಟ್ಟುವ, ನಮ್ಮ ಚಳುವಳಿಯಲ್ಲಿ ನೆಚ್ಚಿಗೆ ಮೂಡಿಸುವ ಘಟನೆಗಳು- ಕಾರ್ಮಿಕರ ರೈತರ ಸಾಮಾನ್ಯ ಜನರ ವೀರಾವೇಶದ ಕೃತ್ಯಗಳು - ಹೋರಾಟಗಳಲ್ಲಿ, ಹೋರಾಟಗಳ ಸೋಲಿನಲ್ಲಿ, ದಿನನಿತ್ಯದ ಬದುಕಿನಲ್ಲಿ ನಡೆಯುತ್ತಿರುತ್ತವೆ. ನಿಮ್ಮ ಮನಸ್ಸನ್ನು ತಾಕಿದ ಘಟನೆಗಳು 'ಐಕ್ಯರಂಗ' ಓದುಗರ ಮನಸ್ಸಿಗೆ ಘಟನೆಗಳುಮುಟ್ಟಲು ಒಂದರಿಂದ ಎರಡು ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

ನಿಮ್ಮ ಪತ್ರಿಕೆ 'ಐಕ್ಯರಂಗ' ದಲ್ಲಿ ಹೊಸ ಶೀರ್ಷಿಕೆಗಳು. ಓದುಗರಿಗೆ [illegible]

ಐತಿಹಾಸಿಕ 28 ನೇ ಮಹಾಧಿವೇಶನ

ಸೋವಿಯತ್ ಕಮ್ಯುನಿಸ್ಟ್ ಪಕ್ಷದ 28 ನೇ ಮಹಾಧಿವೇಶನ ಎಲ್ಲಾ ದುಡಿಯುವ ಜನತೆಗೆ, ಇಡೀ ವಿಶ್ವದ ಜನತೆಗೆ ಅತ್ಯಂತ ಮಹತ್ವದ ಘಟನೆ ಎನ್ನುವುದರಲ್ಲಿ ಸಂಶಯವಿಲ್ಲ. ಎಲ್ಲರೂ ಈ ಮಹಾಧಿವೇಶನವನ್ನು ಆತಂಕ, ಕಾತುರದಿಂದ ಗಮನಿಸುತ್ತಿದ್ದಾರೆ. ಈ ನಡುವೆ ನಾಟೋ ಶೀತಲ ಸಮರದ ಅಂತ್ಯ ಘೋಷಿಸಿದೆ. ನಾಟೋ ಹೇಳುವಂತೆ, ಈ ಎರಡು ಘಟನೆಗಳಿಗೆ ಸಂಬಂಧವಿಲ್ಲದಿಲ್ಲ. ಕೆನಡಾದಲ್ಲಿ ಭಾಷಾ ಫೆಡರಲ್ ವ್ಯವಸ್ಥೆ ಬಗ್ಗೆ ಇದ್ದ ಮೀಚ್ ಜಲಾಶಯ ಒಪ್ಪಂದ ಬಗ್ಗೆ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ಜಾಂಬಿಯಾ, ಬ್ರೆಜಿಲ್‌ಗಳು ಸಾಮ್ರಾಜ್ಯಶಾಹಿ ಆರ್ಥಿಕ ಒತ್ತಡದಿಂದ ನರಳುತ್ತಿದ್ದು ರಾಜಕೀಯ ಬಿಕ್ಕಟ್ಟಿಗೆ ಎಡೆ ಮಾಡಿಕೊಟ್ಟಿದೆ.

ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ 28 ನೇ ಮಹಾಧಿವೇಶನ ಜುಲೈ 2 ರಿಂದ 7 ದಿನಗಳ ಕಾಲ ನಡೆಯುತ್ತಿದೆ. ಮಹಾಧಿವೇಶನದ ಮುಂದೆ ಕೇಂದ್ರ ಸಮಿತಿ ಅಂಗೀಕರಿಸಿದ 'ವೇದಿಕೆ' ಅಲ್ಲದೆ ಅಲ್ಪಸಂಖ್ಯಾತ ಪ್ರತಿನಿಧಿಗಳ ಅಭಿಪ್ರಾಯ ಪ್ರತಿ ಬಿಂಬಿಸುವ 'ಮಾರ್ಕ್ಸ್‌ವಾದಿ ವೇದಿಕೆ' ಮತ್ತು 'ಪ್ರಜಾಸತ್ತಾತ್ಮಕ ವೇದಿಕೆ' ಸಹ ಇದೆ. ಇದಲ್ಲದೆ ಸೋವಿಯತ್ ಕಮ್ಯುನಿಸ್ಟ್ ಪಕ್ಷದ 'ಹೊಸನಿಯಮಗಳು' (ಪ್ರಮುಖ ಬದಲಾವಣೆಗಳು ಇರುವ) ಮಹಾಧಿವೇಶನ ದಲ್ಲಿ ಚರ್ಚೆಗೆ ಬರುತ್ತಿದೆ.

ಮಹಾಧಿವೇಶನದಲ್ಲಿ 4700 ಪ್ರತಿನಿಧಿಗಳು ಭಾಗವಹಿಸುತ್ತಿದ್ದು ಈ ಪ್ರತಿನಿಧಿಗಳು 4000 ಸದಸ್ಯರಿಗೆ ಒಬ್ಬರಂತೆ ಚುನಾಯಿತ ರಾಗಿದ್ದಾರೆ-ಸ್ಪರ್ಧೆ ಇದ್ದ ಚುನಾವಣೆಗಳ ಆಧಾರದ ಮೇಲೆ. ಆದರೆ ಕಾರ್ಮಿಕ ಪ್ರತಿ ನಿಧಿಗಳ ಸಂಖ್ಯೆ ಇಳಿದಿದೆ. 28ನೇ ಮಹಾ ಧಿವೇಶನದಲ್ಲಿ ಶೇಕಡಾ 42 ರಿಂದ ಶೇಕಡಾ 11.6 ಕ್ಕೆ ರೈತರ ಸಂಖ್ಯೆ ಶೇಕಡಾ 9ರಿಂದ ಶೇಕಡಾ 4.8ಕ್ಕೆ ಇಳಿದಿದೆ. ಇದರಿಂದಾಗಿ ಕೇಂದ್ರ ಸಮಿತಿ 350 ಕಾರ್ಮಿಕ ಮತ್ತು ರೈತಪ್ರತಿನಿಧಿಗಳನ್ನು ವಿಶೇಷವಾಗಿ ಆಮಂತ್ರಿ ಸಲು ನಿರ್ಧರಿಸಿದೆ. ಆಂತರಿಕ ಸಮಸ್ಯೆಗಳ ಬಗ್ಗೆನೇ ಮಹಾಧಿವೇಶನಹೆಚ್ಚು ಕಡಿಮೆ ಪೂರ್ಣಗಮನ ಹರಿಸುವುದರಿಂದ ಮಹಾ ಧಿವೇಶನಕ್ಕೆ ವಿದೇಶಿ ಸೋದರ ಪಕ್ಷಗಳ ಪ್ರತಿನಿಧಿಮಂಡಲಗಳನ್ನು ಆಹ್ವಾನಿಸಲಿಲ್ಲ.

ಮಹಾಧಿವೇಶನದ ಮುಂದೆ ಮೂರು ಪ್ರಮುಖ 'ವೇದಿಕೆ'ಗಳಿದ್ದಾಗ್ಯೂ ಸಮಗ್ರ ಚರ್ಚೆಯ ನಂತರ ಸೈದ್ಧಾಂತಿಕವಾಗಿ, ಸಂಘಟನಾತ್ಮಕವಾಗಿ ಪಕ್ಷವನ್ನು ಒಗ್ಗೂಡಿಸಿ ಸಮಾಜದಲ್ಲಿ ಪಕ್ಷದ ನಾಯಕ ಪಾತ್ರವನ್ನು ನೈಜ ಆಧಾರದ ಮೇಲೆ ಭದ್ರಪಡಿಸುವ ಆಶಯವಿದೆ. ಮಹಾಧಿವೇಶನವನ್ನು ನಡೆ ಸು[illegible] ಅಧ್ಯಕ್ಷೀಯ ಮಂಡಳಿಯಆಯ್ಕೆ ಕೆಲಸ ಕೂಡಾ ಬರಿಯ ಕಾಟಾಚಾರವಾಗಿ ರಲಿಲ್ಲ. ಪ್ರತಿನಿಧಿಗಳ ಸಕ್ರಿಯ ಭಾಗವಹಿಸು [illegible]ಕೆ ಕಂಡು ಬಂತು. ಪ್ರತಿದಿನದ ಚರ್ಚೆ [illegible] ಅಕ್ಷರಶಃ 'ಪ್ರಾವ್ದಾ' (ಪಕ್ಷದ ಮುಖಪತ್ರಿಕೆ) ದಲ್ಲಿ ಪ್ರಕಟವಾಗುವುದಲ್ಲದೆ ಟಿವಿಯಲ್ಲೂ ತೋರಿಸಲಾಯಿತು.

ಮಹಾಧಿವೇಶನದಲ್ಲಿ ಮುಖ್ಯವಾಗಿ ಕಳೆದ 5 ವರ್ಷಗಳ 'ಗ್ಲಾಸ್‌ನೋಸ್ತ್' ಮತ್ತು 'ಪೆರೆಸ್ಟ್ರೋಯಿಕಾ'ದ ನೀತಿಯ ಜಾರಿಯ ಪುನರಾವಲೋಕನ ನಡೆಯಿತು. ಕೆಲವು ವಿಷಯಗಳ ಬಗ್ಗೆ ಆಳವಾದ ಚರ್ಚೆ ನಡೆಸಲು ಮಹಾಧಿವೇಶನ ಆರು-ಕೃಷಿ ನೀತಿ ಸೇರಿದಂತೆ - ವಿಶೇಷ ಕಾರ್ಯಕಾರಿ ಗುಂಪುಗಳನ್ನು ರಚಿಸಿದೆ. ವಿದೇಶ ನೀತಿ, ರಕ್ಷಣಾ ನೀತಿ, ಮಾರುಕಟ್ಟೆ, ಸುಧಾರಣೆ ಗಳು, ಹೊಸ ಆಸ್ತಿ ಕಾನೂನುಗಳು ಇವು ಹಲವು ಚರ್ಚಾಸ್ಪದ ವಿಷಯಗಳು. ಇವ ಲ್ಲದೆ ಉಳಿದ ಪಕ್ಷಗಳ ಜತೆ ಸಂಬಂಧ, ಪಕ್ಷದ ಪತ್ರಿಕೆಗಳು, ಪ್ರತ್ಯೇಕತಾವಾದದ ವಿರುದ್ಧ ಹೋರಾಟ ಇತ್ಯಾದಿ ವಿಷಯಗಳ ಬಗ್ಗೆ ಮಹಾಧಿವೇಶನ ನಿರ್ಣಯಗಳನ್ನು ಅಂಗೀಕರಿಸುವ ನಿರೀಕ್ಷೆ ಇದೆ.

ಮತ್ತು ಗೋರ್ಬಚೇವ್‌ರಿಗೆ ನಾಟೋದ ಮುಖ್ಯ ಕಚೇರಿಗೆ ಭೇಟಿ ಕೊಡಲು ಆಹ್ವಾನ - ಇವು ಸೇರಿವೆ.

ಅಮೆರಿಕಾ ಹಿಂತೆಗೆದುಕೊಳ್ಳಬೇಕೆಂದಿ ರುವುದು ಸುಮಾರು 18 ಮೈಲಿ ದೂರ ಹೊಡೆಯಬಲ್ಲ ಅಣ್ವಸ್ತ್ರ ಸಜ್ಜಿತ 'ಶೆಲ್' ಗಳನ್ನು ಸುಮಾರು 1,400 ಈ ರೀತಿಯ ಅಣ್ವಸ್ತ್ರ 'ಶೆಲ್'ಗಳು ಪ.ಜರ್ಮನಿ ಸೇರಿ ದಂತೆ ನಾಲ್ಕು ದೇಶಗಳಲ್ಲಿವೆ. ಆದರೆ ಈ ಅಣ್ವಸ್ತ್ರ 'ಶೆಲ್'ಗಳನ್ನು ತೆಗೆದ ಮೇಲೂ ಅಣ್ವಸ್ತ್ರಗಳು ಮತ್ತು ಅಣುಬಾಂಬುಗಳು ಇರುತ್ತವೆ - ಯುರೋಪಿನಲ್ಲಿ.

ನಾಟೋ ತೆಗೆದುಕೊಂಡ ಪ್ರಮುಖ ನಿರ್ಧಾರಗಳು ಅಮೆರಿಕನ್‌ಅಧ್ಯಕ್ಷ ಬುಶ್ ಮಂಡಿಸಿದ ನಿರ್ಣಯದ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ. ಸೋವಿಯತ್ ಒಕ್ಕೂಟ ಮತ್ತು ವಾರ್ಸಾ ಬಣದ ದೇಶ ಗಳು 40 ವರ್ಷಗಳಿಂದ ಎರಡೂ ಬಣ ಗಳನ್ನು ಒಮ್ಮೆಗೆ ವಿಸರ್ಜಿಸಬೇಕೆಂಬ ಸಲಹೆ ಮಂಡಿಸುತ್ತಾ ಬಂದಿವೆ. ಅಲ್ಲದೆ ವಾರ್ಸಾ ಬಣ ತಾನು'ಅಣ್ವಸ್ತ್ರ ಬಳಸುವ ಮೊದಲ ದೇಶ'ವಾಗುವುದಿಲ್ಲ ಎನ್ನುವ ಘೋಷಣೆ ಆಗಲೇ ಮಾಡಿದೆ. ಇಂತಹ ಘೋಷಣೆ ಮಾಡಲು ನಾಟೋ ಹಿಂದೇಟು ಹಾಕಿದೆ. ಹೀಗಾದಾಗ ಮಾತ್ರ ಶೀತಲಸಮರ

ಕೆನಡಾದಲ್ಲಿ ಭಾಷಾ - ಪ್ರತ್ಯೇಕತಾ ಸಮಸ್ಯೆ

ಅಭಿವೃದ್ಧ ದೇಶಗಳಲ್ಲಿ ಭಾಷಾ ಸಮಸ್ಯೆ ಪ್ರತ್ಯೇಕತಾ ಸಮಸ್ಯೆ ಎಂದಿರಾ? ಹೌದು. ಇದು ಮೂರನೇಯ ಜಗತ್ತಿನ ದೇಶಗಳಿಗೆ ಸೀಮಿತವಾಗಿಲ್ಲ. ಕೆನಡಾ ಇಂಗ್ಲಿಷ್ ಮಾತನಾಡುವವರು ಬಹುಸಂಖ್ಯಾತರಿರುವ ದೇಶ. ಆದರೆ ಕ್ವಿಬೆಕ್ ಪ್ರಾಂತ್ಯ ಫ್ರೆಂಚ್ ಮಾತನಾಡುವವರು ಬಹು ಸಂಖ್ಯಾತರಿರು ವಂತಹದ್ದು. ಸುಮಾರು ಕಾಲುಭಾಗ ಪಾರ್ಲಿಮೆಂಟು ಸದಸ್ಯರಿರುವ ಕ್ವಿಬೆಕ್‌ನಲ್ಲಿ ಮೊದಲಿನಿಂದಲು ಅಲ್ಪಸಂಖ್ಯಾತ ಭಾಷಿಕರ ಭಯದ ಆತಂಕ ವಾತಾವರಣ ಇದ್ದೇ ಇತ್ತು. ಭಾಷೆ ಸಮಸ್ಯೆಯ ಜತೆ ರಾಜ್ಯ ಕೇಂದ್ರ ಆರ್ಥಿಕ ಸಂಬಂಧಗಳ ಬಗ್ಗೆ ವಿವಾದವು ಸೇರಿದೆ. 1987 ರಲ್ಲಿ ಈ ಸಮಸ್ಯೆ ಬಗೆಹರಿಸಲು ಫ್ರೆಂಚ್ ಭಾಷೆಗೆ ಮಾನ್ಯತೆ ಕೊಡುವ, ಕ್ವಿಬೆಕ್ 'ಪ್ರತ್ಯೇಕ ಸ್ಥಿತಿ' ಇರುವ ಪ್ರದೇಶ ಎಂದು ಒಪ್ಪಿಕೊಳ್ಳುವ ಒಂದು ಒಪ್ಪಂದಕ್ಕೆ ಎಲ್ಲಾ ರಾಜಕೀಯ ನಾಯಕರು, ಪ್ರಾಂತ್ಯದ ನಾಯಕರು ಸಹಿ ಹಾಕಿದ್ದರು. ಇದನ್ನು ಒಂದು ಸಂವಿಧಾನದ ತಿದ್ದುಪಡಿಯಾಗಿ ತರಬೇಕಾದರೆ ಎಲ್ಲಾ ಪ್ರಾಂತ್ಯಗಳು ಅದನ್ನು ಅನುಮೋದಿಸಬೇಕು. ಇದಕ್ಕೆ 3 ವರ್ಷಗಳ ಅವಧಿ ನಿಗದಿಪಡಿಸಲಾಗಿತ್ತು. 1987 ರಲ್ಲಿ ಆದ ಈ ಒಪ್ಪಂದಕ್ಕೆ 'ಮೀಚ್ ಸರೋವರ' ಒಪ್ಪಂದ ಎಂದು ಕರೆಯಲಾಗಿತ್ತು. ರಾಜ್ಯಗಳು ಈ ತಿದ್ದುಪಡಿ ಯನ್ನು ಅನುಮೋದಿಸಲು ಒಪ್ಪದೆ ಇರುವುದರಿಂದ, ಈ ಒಪ್ಪಂದಮುರಿದು ಬಿದ್ದಂತಾಗಿದೆ. ಕ್ವಿಬೆಕ್‌ನಲ್ಲಿ ಪ್ರತ್ಯೇಕತಾವಾದಿ ಪಕ್ಷಗಳು ಚಳುವಳಿ ಹೂಡುವ ಮಾತ ನಾಡುತ್ತಿವೆ. ಇತರ ಜನಾಂಗೀಯ, ಭಾಷಾ ಅಲ್ಪಸಂಖ್ಯಾತರು ಕೂಡಾ ಆತಂಕಿತರಾಗಿದ್ದಾರೆ. ಇದರಿಂದ ಕೆನಡಾದಲ್ಲಿ ರಾಜ ಕೀಯ ಬಿಕ್ಕಟ್ಟು ಉಂಟಾಗಿದೆ.

ಸಂಕ್ಷಿಪ್ತ ಸುದ್ದಿಗಳು

★ ಜಾಂಬಿಯಾದಲ್ಲಿ ಒಬ್ಬ ಸೈನ್ಯಾಧಿಕಾರಿ ರೇಡಿಯೋ ಕೇಂದ್ರಕ್ಕೆ ನುಗ್ಗಿ ಕ್ಷಿಪ್ರಕ್ರಾಂತಿ ಘೋಷಿಸುವ ಪ್ರಯತ್ನ ವಿಫಲಗೊಂಡಿದೆ. ಇದು ತಲೆತಿರುಕ ಕುಡುಕ ಸೈನ್ಯಾಧಿ ಕಾರಿಯ ಹುಚ್ಚು ಪ್ರಯತ್ನ ಎಂದು ತಳ್ಳಿಹಾಕಿದ್ದರೂ ಜಾಂಬಿಯಾದಲ್ಲಿ ಇತ್ತೀಚೆ ಗಷ್ಟೇ ನಡೆದ ಆಹಾರ ದಂಗೆಗಳ ಹಿನ್ನೆಲೆಯಲ್ಲಿ ಈ ಕ್ಷಿಪ್ರಕ್ರಾಂತಿಯ ಯತ್ನ ನಡೆದಿದೆ ಎಂದು ಗಮನಾರ್ಹ. ಆರ್ಥಿಕ ಬಿಕ್ಕಟ್ಟಿನಲ್ಲಿರುವ ಜಾಂಬಿಯಾ IMF ಸಾಲ ತೆಗೆದುಕೊಂಡಿದ್ದು, ಅವರಿಗಿಷ್ಟವಾದ ಐ.ಎಂ.ಎಫ್. ಬಯಸಿದ ಆಹಾರ ಸಬ್ಸಿಡಿ ಯನ್ನು ಕಿತ್ತುಹಾಕುವ ನಿರ್ಧಾರವನ್ನು ಸರ್ಕಾರ ಇತ್ತೀಚೆಗಷ್ಟೆ ಜಾರಿಗೆ ತಂದಿತ್ತು.

★ ಬ್ರೆಜಿಲ್ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ 'ಬ್ಲಾಕ್ ಮೇಲ್'ಗೆ ಒಳಗಾಗಿ ರುವ ಇನ್ನೊಂದು ದೇಶ. ಮೇ ತಿಂಗಳಲ್ಲಿ ಬ್ರೆಜಿಲ್ ಸರ್ಕಾರ ಶೇಕಡಾ 5 ಸಾವಿರ ಹಣದುಬ್ಬರ, 31 ಶತಕೋಟಿ ಡಾಲರು ಹಣಕೊರತೆ ಎದುರಿಸುತ್ತಿರುವ ಆರ್ಥಿಕ ಪರಿಸ್ಥಿತಿಯಲ್ಲಿ 'ಆರ್ಥಿಕ ಆಧುನೀಕರಣ'ಕ್ಕಾಗಿ ಸರ್ಕಾರದ ವೆಚ್ಚಕಡಿತ ಅನಿವಾರ್ಯ ಎಂದು ನಿರ್ಧರಿಸಿತು. ಜೂನ್ 18 ರೊಳಗೆ ಶೇಕಡಾ 25 ರಷ್ಟು ಸರ್ಕಾರಿ ನೌಕರರನ್ನು ಬರ್ಖಾಸ್ತುಗೊಳಿಸುವುದು ಅಥವಾ ಸಂಬಳ ಕಡಿತ ಕ್ರಮಕೈಗೊಳ್ಳಬೇಕಾಗುವುದುಎಂದು ಘೋಷಿಸುತ್ತಾ. ಇದರ ಪ್ರಕಾರ 3.6 ಲಕ್ಷ ನೌಕರರು ಕೆಲಸ ಕಳೆದುಕೊಳ್ಳುವ ಸಾಧ್ಯತೆ ಇತ್ತು. ಆದರೆ ಇದರ ವಿರುದ್ಧ ಬಂದ ಭಾರೀ ವಿರೋಧದಿಂದಾಗಿ ಹಿಂತೆಗೆದು ಕೊಳ್ಳಲಾಗಿದೆ. ಆದರೆ ಸಾವಿರ ನೌಕರರು / ಭಾಗಶಃ ಸಂಬಳ ತೆಗೆದುಕೊಂಡು ಮನೆಯಲ್ಲಿರಬೇಕೆಂದು ನಿರ್ಧರಿಸಿದೆ.

★ ಬ್ರಿಟನ್‌ನಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಕಾರ್ಮಿಕರ ಸಂಘಟನೆ Indian worker's Association (IWA) 52 ವರ್ಷಗಳಷ್ಟು ದೀರ್ಘ ಚರಿತ್ರೆಯುಳ್ಳ ಸಂಘಟನೆ. ಅದು ಭಾರತೀಯ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವಲ್ಲಿ, ವರ್ಣಭೇಧ, ಸಾಮ್ರಾಜ್ಯಶಾಹಿ ಶೋಷಣೆ ವಿರುದ್ಧ ನಿರಂತರ ಹೋರಾಡಿದ ಸಂಘಟನೆ. ಎಡ ಒಲವಿನ ಕಮ್ಯುನಿಸ್ಟರ ನಾಯಕತ್ವದಲ್ಲಿನ ಸಂಘಟನೆ. ಅದು 1967 ರಲ್ಲಿ ದುರದೃಷ್ಟವಷಾತ್ ಇಬ್ಭಾಗ ವಾಗಿತ್ತು. ಆದರೂ ಅಂದಿನಿಂದ ಇಂದಿನ ವರೆಗೆ ಐಕ್ಯಕಾರ್ಯಾಚರಣೆಗಳನ್ನು ನಡೆಸು ತ್ತಿತ್ತು. ಇತ್ತೀಚೆಗೆ ಸಿಖ್ ಮೂಲಭೂತವಾದಿ ಗಳ ಸವಾಲಿನ ವಿರುದ್ಧ ಎರಡೂ ಸಂಘಟನೆಗಳು ಹೋರಾಡಿದವು. ಈ ಹೋರಾಟದಲ್ಲೇ ಅವೆರಡು ಹತ್ತಿರ ಬಂದು ಈಗ ಪುನಃ ಒಂದಾಗಿವೆ. ಕಾಸುರ್ಜಿತ್ ಈ ಐಕ್ಯ ಅಧಿವೇಶನದಲ್ಲಿ ಹಾಜರಿದ್ದರು. ಸಧ್ಯಕ್ಕೆ CARL (campaign Against Racist Laws ವರ್ಣಭೇಧ ಕಾನೂನುಗಳ ವಿರುದ್ಧ ಪ್ರಚಾರ) ಎಂಬ ಸಂಘಟನೆ ನಡೆಸುತ್ತಿದೆ. 1992ರಲ್ಲಿ ಯುರೋಪಿನ ಐಕ್ಯತೆ ಯಾದರೆ, ಈ ಪ್ರಚಾರವನ್ನು ಯುರೋಪಿಯನ್ ಮಟ್ಟಕ್ಕೆ ಒಯ್ಯಲುನಿರ್ಧರಿಸಿದೆ.

ಲೋಕ ಸಂಚಾರ

ಶೀತಲ ಸಮರದ ಅಂತ್ಯ ಸನ್ನಿಹಿತ?

ಲಂಡನ್ ನಲ್ಲಿ ಸೇರಿದ್ದ 2 ದಿನಗಳ 'ನಾಟೋ' ದೇಶಗಳ ಸಮ್ಮೇಳನ ಪ್ರಮುಖ ಐತಿಹಾಸಿಕ ಎನ್ನಬಹುದಾದ ನಿರ್ಧಾರ ಗಳನ್ನು ಕೈಗೊಂಡಿದೆ. ಈ ನಿರ್ಧಾರಗಳ ಒಟ್ಟು ಸಾರ ಸುಮಾರು 50 ವರ್ಷಗಳ 'ಶೀತಲ ಸಮರದ' ಅಂತ್ಯ ಎಂದು ಕೆಲವು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಹಾಗಂತ ಹೇಳುವುದು ಇನ್ನೂಅವಸರದ್ದು ಎನ್ನಬಹುದು, ಆದರೆ ಆದರತ್ತ ಒಂದು ಹೆಜ್ಜೆ ಎನ್ನಲಡ್ಡಿಯಿಲ್ಲ.

ಪ್ರಮುಖ ನಿರ್ಧಾರಗಳಲ್ಲಿ ಯುರೋಪಿ ನಲ್ಲಿ ಒಂದು ವರ್ಗದ ಅಮೆರಿಕನ್ ಅಣ್ವಸ್ತ್ರಗಳ ಕಡಿತ ರಣನೀತಿಯಲ್ಲಿ ಅಣ್ವಸ್ತ್ರ ಗಳು ಪ್ರಮುಖ ಆಕ್ರಮದ ಪಾತ್ರದಿಂದ ಕೊನೆಯ ಅಸ್ತ್ರ ವಾಗಿ ಬದಲಾವಣೆ, ಐಕ್ಯ ಜರ್ಮನಿ ನಾಟೋ ಕೂಟದಲ್ಲಿರಲು ಕೇಳಿಕೆ, ಐಕ್ಯ ಜರ್ಮನಿಯ ಸೈನ್ಯದಲ್ಲಿ ಕಡಿತ,

ಮುಗಿದಿದೆ ಎನ್ನಬಹುದು.ಜನತೆ ಇತ್ತೀಚಿನ ಪೂರ್ವ ಯುರೋಪಿನ ದೇಶ ಗಳಲ್ಲಿನ ವಿದ್ಯಮಾನಗಳ ಹಿನ್ನೆಲೆಯಲ್ಲಿ, ಪ ಯುರೋಪಿನ ದೇಶಗಳ (ಅದರಲ್ಲೂ ಪ. ಜರ್ಮನಿಯ) ಅಣ್ವಸ್ತ್ರಗಳ ಮತ್ತು ನಾಟೋ ಬಣದ ಅವಶ್ಯಕತೆ ಬಗ್ಗೆ ಪ್ರಶ್ನಿಸು ತ್ತಿದ್ದಾರೆ. ಹಾಗೇನೇ ಅಮೆರಿಕಾದ ಶಸ್ತ್ರಾಸ್ತ್ರ ಗಳು ಮತ್ತು ಸೈನ್ಯಗಳು ಯುರೋಪಿನಲ್ಲಿ ರುವುದರ ಅವಶ್ಯಕತೆ ಬಗ್ಗೆ ಕೂಡಾ. ಈ ಭಾವನೆ ದೊಡ್ಡ ಚಳುವಳಿಯಾಗುವುದರ ಮೊದಲೇ, ತಾವೂ ಶಾಂತಿ ಬಗ್ಗೆ ಕಾಳಜಿ ಇಟ್ಟು ಕೊಂಡಿದ್ದೇವೆ. ಬದಲಾದ ಸನ್ನಿವೇಶ ದಲ್ಲಿ (ತೋರಿಕೆಗಾದರೂ) ತಮ್ಮ ರಣನೀತಿ ಬದಲಾಯಿಸಿದ್ದೇವೆ ಎಂಬುದನ್ನು ತೋರಿ ಸುವ ಅಗತ್ಯ ಯುರೋಪಿನ ಆಳುವ ವಲಯಗಳಿಗೆ ಮತ್ತು (ಇನ್ನೂ ಹೆಚ್ಚಾಗಿ) ಅಮೆರಿಕಕ್ಕೆ) ಬೇಕಾಗಿದೆ. ಅಮೆರಿಕಾದ ಈ ಸಲಹೆಯನ್ನು ನಾಟೋಯುರೋಪಿಯನ್ ಸಹವರ್ತಿಗಳು ಒಪ್ಪಿರುವುದರಿಂದ,ನಾಟೋ ದಲ್ಲಿ ಅಮೆರಿಕನ್ ನಾಯಕತ್ವ ಸಹ ಭದ್ರವಾದಂತಾಗಿದೆ.

ಅನಕ್ಷರತೆ ನಿರ್ಮೂಲನ ಉದಾತ್ತ ಧ್ಯೇಯ

ಬಿ.ಜೆ.ವಿ.ಜೆ. ಬೆಂಗಳೂರು ಜಿಲ್ಲಾ ಸಮಾವೇಶ

ಬಡತನ ಮತ್ತು ಅನಕ್ಷರತೆ ಒಂದ ಕ್ಕೊಂದು ಸಂಬಂಧವಿರುವ ಸಮಸ್ಯೆಗಳು. ಅಕ್ಷರ ಕಲಿಕೆಯಿಂದ ನಮ್ಮ ಹೊಟ್ಟೆ ತುಂಬುವುದೇ ಎಂಬ ಅಭಿಪ್ರಾಯ ಜನ ಸಾಮಾನ್ಯರಲ್ಲಿದೆ. ಆದ್ದರಿಂದ ಅನಕ್ಷರತೆ ನಿರ್ಮೂಲನದಂಥ ಉದಾತ್ತ ಧ್ಯೇಯ ಸಾಧನೆಗೆ ಹೊರಡುವ ಯಾರೇ ಆದರೂ ಪಸ್ತು ಸ್ಥಿತಿಯ ಅರಿವುಳ್ಳವರಾಗಿದ್ದು ಜನರನ್ನು ಅವರದೇ ಆದ ಆಕರ್ಷಕ ಕಲೆ ಮತ್ತಿತರ ಮಾಧ್ಯಮಗಳ ಮೂಲಕ ತಲು[illegible] ಕಾರ್ಯಕ್ರಮರೂಪಿಸಬೇಕಾಗುತ್ತದೆ.

ದೇಶದ ಎಲ್ಲೆಡೆ ನಡೆಯುವ ಭಾರತ ಜ್ಞಾನ ವಿಜ್ಞಾನ ಜಾಥಾ ದ (ಬಿಜೆವಿಜೆ) ಬೆಂಗಳೂರು ನಗರ ಜಿಲ್ಲಾ ಸಮಾವೇಶ ಬೆಂಗಳೂರು ಸೆಂಟ್ರಲ್ ಕಾಲೇಜ್ ಸೆನೆಟ್ ಹಾಲ್‌ನಲ್ಲಿ 1990 ಜುಲೈ 8 ರಂದು ಜರುಗಿದಾಗ ಮುಖ್ಯ ಅತಿಥಿ ಖ್ಯಾತ [illegible] ಸಿ.ಆರ್. ಸಿಂಹ ನುಡಿದ ಎಚ್ಚರಿಕೆಯ ಮಾತುಗಳಿವು.

[illegible] ಹಾಗೂ ನಿರಂತರ [illegible] ಇಂದಲ್ಲ, ನಾಳೆಯಾದರೂ ಸಂಪೂರ್ಣ ಸಾಕ್ಷರತೆಯ ಗುರಿ ತಲು ಪಲು ಸಾಧ್ಯವಾದೀತೆಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

ಅನಕ್ಷರಸ್ಥ ಮಹಿಳೆ ರತ್ನಮ್ಮ ಯಾದವ್ ಅವರು 'ಅ'ಬರೆಯುವ ಮೂಲಕ ಸಮಾ ವೇಶವನ್ನು ಸಾಂಕೇತಿಕವಾಗಿಯೂ ಅರ್ಥ ಪೂರ್ಣವಾಗಿಯೂ ಉದ್ಘಾಟಿಸಿದರು.

ಬೆಂಗಳೂರು ಮಹಾನಗರ ಪಾಲಿಕೆಯ ಉಪಮೇಯರ್ ಕೆ.ಸಿ.ಲಕ್ಷ್ಮಿದೇವಿ ಅಧ್ಯಕ್ಷತೆ ವಹಿಸಿದ್ದರು.

ಸಮಾವೇಶದ ಇನ್ನೋರ್ವ ಮುಖ್ಯ ಅತಿಥಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ ಜಿ.ಎಸ್. ಸಿದ್ದಲಿಂಗಯ್ಯ, ಸರ್ವತ್ರ ಹರಡಿರುವ ಶೋಷಣೆಯ ಜಾಲವನ್ನು ಭೇದಿಸಲು ಅಕ್ಷರ ಜ್ಞಾನ ಒಂದು ಮುಖ್ಯ ಸಾಧನೆ ಎಂದುವಿಶ್ಲೇಷಿಸಿದರು.

ಜಾಥಾ ಯಶಸ್ವಿಗೆ ಸರಕಾರದ ಸಂಪೂರ್ಣ ಸಹಕಾರ ನೀಡುವುದಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ತಾರಾ ಅಜಯ ಸಿಂಹ ಅವರು ಆಶ್ವಾಸನೆ ನೀಡಿದರು.

ಎಲ್ಲೆಲ್ಲೂ ಹಿಂಸೆ, ಸುಲಿಗೆಯಂಥ ಪ್ರವೃತ್ತಿಯೇ ಹೆಚ್ಚಿರುವಾಗ ಸಾಕ್ಷರತೆಗಾಗಿ ಮಹತ್ವ ಪೂರ್ಣ ಚಳವಳಿ ನಡೆಯು ತ್ತಿರುವುದು ಉತ್ತಮ ಬೆಳವಣಿಗೆ ಹಾಗೂ ಸಂತೋಷದಾಯಕ ವಿಚಾರ. ಆದರೆ ಸಾಕ್ಷರತೆಯೊಂದರಿಂದಲೇ ಏನೂ ಸಾಧನೆ ಯಾಗದು. ಉತ್ತಮ ಶಿಕ್ಷಣವೂ ಅಗತ್ಯ ಎಂದು ಇನ್ನೋರ್ವ ಮುಖ್ಯ ಅತಿಥಿ ಯಾದ ಕರ್ನಾಟಕ ಆಡಳಿತಮಂಡಳಿಯ ಮುಖ್ಯಸ್ಥ ನ್ಯಾ ಎಸ್.ಡಿ. ವೆಂಕಟೇಶ ಹೇಳಿದರು. ಜಾಥಾದ ಪ್ರೇರಕ ಶಕ್ತಿಯಾದ ಅಖಿಲ ಭಾರತ ಜನತಾ ವಿಜ್ಞಾನ ಜಾಲ (AIPSN) ದ ಪ್ರಮುಖರಲ್ಲೊಬ್ಬ ರಾದ ಕ.ರಾ.ವಿ.ಪ.ಗೌರವ ಕಾರ್ಯದರ್ಶಿ ಎಂ.ಎ. ಸೇತುರಾವ್ ಅವರೂ ಮಾತನಾಡಿದರು.

ಬಿ.ಜಿ.ವಿ.ಜೆ. ಜಿಲ್ಲಾ ಸಂಚಾಲಕ ಎಚ್.ಎಂ. ವೆಂಕಟೇಶ್ ವರದಿ ಮಂಡಿಸಿ ದರು. ಜಿಲ್ಲಾ ಸಾಕ್ಷರತಾ [illegible] ಎ.ಪಿ.ನಿರಂಜನಾರಾಧ್ಯ ಜಾಥಾದ [illegible] ವಿವರಿಸಿದರು.

ಸಮಾವೇಶದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪುಟ [illegible] ರಿಂದ

ಉದ್ದೇಶವುಳ್ಳ ಸಮಾಜವಾದಿ ದೇಶಗಳೊಳಗಿನ ಕಮ್ಯುನಿಸ್ಟ್ - ವಿರೋಧಿ ಶಕ್ತಿಗಳಿಗೆ ಅವರು ಸಕ್ರಿಯ ಕುಮ್ಮಕ್ಕು, ನೆರವು ನೀಡುತ್ತಿದ್ದಾರೆ. ಸಿ.ಪಿ.ಎಸ್.ಯು. ನ 28 ನೇ ಮಹಾಧಿವೇಶನದ ಕಲಾಪಗಳು ಸೋವಿಯತ್ ಒಕ್ಕೂಟದಲ್ಲಿ ಕಮ್ಯುನಿಸ್ಟರನ್ನು, ವಿಶ್ವ ಸಮಾಜವಾದದ ಶಕ್ತಿಗಳನ್ನು ಮತ್ತಷ್ಟು ಬಲಯುತಗೊಳಿಸಿ ವಿರೋಧಿಗಳ ಪ್ರಯತ್ನಗಳಿಗೆ ತಕ್ಕ ಉತ್ತರ ನೀಡುತ್ತವೆ ಎಂದು ನಾವು ಆಶಿಸುತ್ತೇವೆ.

ಸಂಗಾತಿಗಳೇ,

ಉನ್ನತಿಗಾಗಿ ಹೋರಾಟಗಳಲ್ಲಿ ಸಿ.ಪಿ.ಎಸ್.ಯು. ವಿಶ್ವಾದ್ಯಂತ ಮಿಲಿಯಗಟ್ಟಲೆ ಶ್ರಮಿಕರಿಗೆ, ಪ್ರಜ್ಞಾವಂತ ಜನರಿಗೆ ಸದಾ ಒಂದು ಪ್ರೇರಣೆಯ ಸ್ರೋತವಾಗಿದೆ. ಲೆನಿನ್ನರ ಈ ಪಕ್ಷ ನಿಜವಾಗಿಯೂ ಮಾನವ ಕುಲದ ಪ್ರಗತಿಯ ಹಾದಿ ಬೆಳಗಿದ ಒಂದು ಶಕ್ತಿ. ಮೊತ್ತಮೊದಲ ಸಮಾಜವಾದಿ ಪ್ರಭುತ್ವವನ್ನು ಕಟ್ಟಿ ಬೆಳೆಸಿದ್ದು, ಒಂದು ಶಕ್ತಿಶಾಲಿ ಕೈಗಾರಿಕೀಕೃತ ಸೋವಿಯತ್ ಒಕ್ಕೂಟದ ನಿರ್ಮಾಣ, ಫ್ಯಾಸಿಸಂನ ಪತನ, ವಿಶ್ವಶಾಂತಿಗೆ ನಿರಂತರ ಯತ್ನ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ವಿಶ್ವದ ಜನಗಳ ಹೋರಾಟಗಳಲ್ಲಿ ನೀಡಿದ ನೈತಿಕ ಮತ್ತು ಭೌತಿಕ ಬೆಂಬಲ ಈಗಲೂ ವಿಶ್ವದಲ್ಲೆಲ್ಲಾ ಕೋಟ್ಯಾಂತರ ಜನಗಳಿಗೆ ಸ್ಫೂರ್ತಿಯ ಸೆಲೆ.

ಈ ಭವ್ಯ ಪರಂಪರೆಯ ಹೆಜ್ಜೆ ಗುರುತುಗಳಲ್ಲಿ ಮುಂದುವರಿದು ಸಿ.ಪಿ.ಎಸ್.ಯು.ನ 28 ನೇ ಮಹಾಧಿವೇಶನದ ಕಲಾಪಗಳು ಮಾರ್ಕ್ಸ್‌ವಾದ-ಲೆನಿನ್‌ವಾದ ಹಾಗೂ ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಗೆ ತಮ್ಮ ಬದ್ಧತೆಯನ್ನು ಮತ್ತೊಮ್ಮೆ ಒತ್ತಿ ಹೇಳಿ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದವನ್ನು ಮತ್ತಷ್ಟು ಬಲಗೊಳಿಸುತ್ತವೆ ಎಂದು ನಾವು ಆಶಿಸುತ್ತೇವೆ. ಈ ಬೃಹತ್ ಪ್ರಯತ್ನದಲ್ಲಿ ಸಿ.ಪಿ.ಎಸ್.ಯು.ಗೆ ಈ ಸಂಗ್ರಾಮದ ಸಮಯದಲ್ಲಿ [illegible] ರೀತಿಯ ಯಶಸ್ಸು ದೊರೆಯಲೆಂದು ಸಿ.ಪಿ.ಐ(ಎಂ) ಹಾರೈಸುತ್ತದೆ.

ಕೇಂದ್ರ ಸಮಿತಿ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ರಾಷ್ಟ್ರೀಯ ರಂಗ ಸರಕಾರ ಸಿರಿವಂತ - ಪರ ಧೋರಣೆಗಳಿಗೆ ಸಿ.ಪಿ.ಐ(ಎಂ) ಬೆಂಬಲ ಸಾಧ್ಯವಿಲ್ಲ

ಪುಟ 1 ರಿಂದ

1% ಘಟಕಗಳಷ್ಟೇ ಎಂಬುದು ನಿಮಗೆ ತಿಳಿದಿರಬೇಕು" ಎಂದು ಇ.ಎಂ.ಎಸ್. ತಮ್ಮ ಪತ್ರದಲ್ಲಿ ವಿ.ಪಿ.ಸಿಂಗ್‌ರಿಗೆ ನೆನಪಿಸಿದ್ದಾರೆ.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿ 8 ನೇ ಯೋಜನೆಯ ರೂಪ —. ರೇಷೆಯ ಕರಡನ್ನು ಚರ್ಚಿಸುವ ಹಿಂದಿನ ದಿನವೇ ಈ ಹೇಳಿಕೆ ಹೊರಡಿಸಿದ್ದು ಈ ದಸ್ತಾವೇಜಿನಲ್ಲಿ ನಮೂದಿಸಿರುವ ಸರಕಾರದ ಕೆಲವು ನಿಲುವುಗಳಿಗೇ ಅದು ವಿರುದ್ಧವಾಗಿದೆ. ಉದ್ಯೋಗಾವಕಾಶ ನಿರ್ಮಾಣ, ಶ್ರೀಮಂತರ, ಮೇಲ್ವರ್ಗದ ಬಳಕೆ ಸಾಮಗ್ರಿಗಳತ್ತ ಒಲವು ತೋರಿದ ಕೈಗಾರಿಕಾ ಬೆಳವಣಿಗೆ ವಿಧಾನದ ಆಮೂಲಾಗ್ರ ಬದಲಾವಣೆ, ಈ ಬಗ್ಗೆ ರಾಷ್ಟ್ರೀಯ ರಂಗದ ಚುನಾವಣಾ ಪ್ರಣಾಳಿಕೆ ಬಹಳ ತೀವ್ರವಾಗಿ ವಾದಿಸಿತ್ತು. ವಿದೇಶೀ ಬಂಡವಾಳಕ್ಕೆ ದೇಶದ ಆರ್ಥಿಕವನ್ನು ಬೇಕಾಬಿಟ್ಟಿ ತೆರೆಯುವ ವಿರುದ್ಧ ಅದು ಎಚ್ಚರಿಸಿತ್ತು ಎಂದು ಪ್ರಧಾನಿಗಳಿಗೆ ನೆನಪಿಸಿರುವ ಇ.ಎಂ.ಎಸ್. ಪತ್ರ ಅವರ ಸರಕಾರದ ಕೈಗಾರಿಕಾ ಧೋರಣೆ ಇವೆಲ್ಲ ಗುರಿಗಳಿಗೂ ತಿಲಾಂಜಲಿಯಿತ್ತಿದೆಯೆಂದು ಹೇಳಿದೆ.

"ನಿಜ ನಿಮ್ಮ ಸರಕಾರ ಕಾಂಗ್ರೆಸ್ ಸರಕಾರದ ಹಿಂದಿನ ಧೋರಣೆಗಳು ಸೃಷ್ಟಿಸಿದ ಆರ್ಥಿಕ ಸಮಸ್ಯೆಗಳನ್ನು ಬಳುವಳಿಯಾಗಿ ಪಡೆದಿದೆ. ಆದರೆ ವಿಶ್ವ ಬ್ಯಾಂಕ್, ಐ.ಎಂ.ಎಫ್. ಒತ್ತಡದಿಂದ ರಾಜೀವಗಾಂಧಿ ಸರಕಾರ ಅನುಸರಿಸಿದ ಉದಾರೀಕರಣದ ಖಾಸಗೀಕರಣದ ಅಬ್ಬರವನ್ನು ತ್ಯಜಿಸಿದೆ ಅವನ್ನೆಲ್ಲಾ ಸರಿಪಡಿಸುವುದು, ಹೊಸ ಹಾದಿ ತುಳಿಯುವುದು ಸಾಧ್ಯವಿಲ್ಲ" ಎಂದು ಇ.ಎಂ.ಎಸ್. ತಮ್ಮ ಪತ್ರದಲ್ಲಿ ಸ್ಪಷ್ಟಪಡಿಸುತ್ತಾ ವಿಶ್ವಬ್ಯಾಂಕ್, ಐ.ಎಂ.ಎಫ್.ನ ಒತ್ತಡಗಳನ್ನೂ ಅಮೆರಿಕಾದ ಸುಪರ್ 301 ರ ಬೆದರಿಕೆಯನ್ನು ಎದುರಿಸುತ್ತೇವೆ. ಸಾಲ ಬಲೆಯಲ್ಲಿ ಸಿಲುಕುವುದಿಲ್ಲ ಎಂದು ವಿ.ಪಿ.ಸಿಂಗ್ ಸರಕಾರ ತಳೆದ ದೃಢ ನಿಲುವಿಗೆ ಸಿ.ಪಿ.ಐ(ಎಂ) ಮೆಚ್ಚುಗೆ ವ್ಯಕ್ತಪಡಿಸಿದ್ದನ್ನು ನೆನಪಿಸುತ್ತಾರೆ. ಆದರೆ ಈಗ ಹಿಡಿದಿರುವ ದಿಕ್ಕು, ಕೈಗಾರಿಕಾ ಧೋರಣೆ ಹೇಳಿಕೆ, ಕೆಲವು ಕೇಂದ್ರ ಮಂತ್ರಿಗಳ ಅಂಬೋಣಗಳು ಆತಂಕ, ಕಳವಳ ಮೂಡಿಸುವಂತಹವು ಎಂದು ಇ.ಎಂ.ಎಸ್. ಪ್ರಧಾನಿಗೆ ಬರೆದಿದ್ದಾರೆ.

ವಿದ್ಯುತ್ ಉದ್ದಿಮೆಯ ಉದಾಹರಣೆಯನ್ನು ಇ.ಎಂ.ಎಸ್ ತಮ್ಮ ಪತ್ರದಲ್ಲಿ ನೀಡಿದ್ದಾರೆ. ಈ ರಂಗದಲ್ಲಿ ಖಾಸಗೀ ವಲಯಕ್ಕೆ ದೊಡ್ಡ ರಿಯಾಯ್ತಿಗಳನ್ನು ನೀಡಲಾಗಿದೆ. ಇದರಿಂದ ವಿದೇಶೀ ಸಾಲದ ಮೇಲೆ ವಿದೇಶೀ ವಿದ್ಯುತ್ ಉತ್ಪಾದನಾ ಉಪಕರಣಗಳ ಆಮದಿಗೆ ಅವಕಾಶ ಮಾಡಿಕೊಟ್ಟಿದೆ. ಬಿಹೆಚ್ಇಎಲ್ ನಂತಹ ಸಾರ್ವಜನಿಕ ವಲಯದ ಉದ್ದಿಮೆಗಳು ಆರ್ಡರುಗಳಿಲ್ಲದೆ ಸಾಯಬೇಕಾದ ಸ್ಥಿತಿ ತಂದಿಡುತ್ತಿದೆ. ದೊಡ್ಡ ಬಂಡವಾಳಶಾಹಿಗಳಿಗೆ ಇನ್ನಷ್ಟು ವಿದೇಶೀ ಹಣ ವಿನಿಯೋಗದಲ್ಲಿ ಉದಾರತೆಯ ಗುತ್ತೇದಾರಿಕೆ ತಡೆಯುವ ನಿಯಮಗಳಿಗೆ ಹೆಚ್ಚೆಚ್ಚು ರಿಯಾಯ್ತಿಯ ಭರವಸೆನೀಡಲಾಗುತ್ತಿದೆ.

"ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಸಿದ್ಧಗೊಂಡ ಐ.ಎಂ.ಎಫ್. ವಿಶ್ವಬ್ಯಾಂಕ್ ನಿಲುವನ್ನು ನಾಚಿಕೆಯಿಲ್ಲದೆ ಪ್ರತಿಪಾದಿಸುವ ಒಂದು ದಸ್ತಾವೇಜನ್ನು ಕಾರ್ಯದರ್ಶಿಗಳ ಸಮಿತಿ ಚರ್ಚಿಸಿದೆ ಎಂದು ವರದಿಯಾಗಿದೆ. ಇಂತಹ ದೊಡ್ಡ ಬಂಡವಾಳಶಾಹಿ ಪರ, ಬಹು ರಾಷ್ಟ್ರೀಯ ಕಂಪೆನಿಗಳಿಗೆ ಪರವಾದ ಧೋರಣೆಗಳನ್ನು ಸಿ.ಪಿ.ಐ(ಎಂ) ಬೆಂಬಲಿಸುವುದು ಸಾಧ್ಯವಿಲ್ಲ" ಎಂದು ಖಂಡಿತ ನುಡಿಗಳಲ್ಲಿ ಇ.ಎಂ.ಎಸ್. ಪ್ರಧಾನಿಗೆ ತಿಳಿಸಿದ್ದಾರೆ.

ಎರಡು ಲಕ್ಷಕ್ಕೂ ಹೆಚ್ಚು ಸಣ್ಣ, ಮಧ್ಯಮ, ದೊಡ್ಡ ಕೈಗಾರಿಕಾ ಘಟಕಗಳು ಮುಚ್ಚಿದೆ. ರೋಗಗ್ರಸ್ತವಾಗಿವೆ. ಗುತ್ತೇದಾರಿಗೆ ತಡೆಯಲೆಂದು ತಂದ ನಿಯಮಗಳು ವಿಫಲವಾಗಿ ಗುತ್ತೇದಾರಿಗಳ ಕೈಗಳಲ್ಲಿ ಆರ್ಥಿಕ ಶಕ್ತಿ ಕೇಂದ್ರೀಕೃತಗೊಳ್ಳುತ್ತಿದೆ. ಈ ಯಾವ ಜ್ವಲಂತ ಸಮಸ್ಯೆಯತ್ತವೂ ಕೈಗಾರಿಕಾ ಧೋರಣೆ ಗಮನವೇ ನೀಡಿಲ್ಲ ಎಂದು ಬೇಸರದಿಂದ ಬರೆದಿರುವ ಇ.ಎಂ.ಎಸ್. ಮುಂದುವರಿಯುತ್ತ ಜನ ಈಗಾಗಲೇ ಎಲ್ಲಾ ಸಾಮಗ್ರಿಗಳ ಬೆಲೆಯೇರಿಕೆಯಿಂದಾಗಿ ವಿಪರೀತತೊಂದರೆ ಅನುಭವಿಸುತ್ತಿದ್ದರೆ ಕಳೆದ ಸಂಸತ್ ಅಧಿವೇಶನದ ಸಮಯದಲ್ಲಿ ಎಡ ಪಕ್ಷಗಳು ಎಂ.ಪಿಗಳು ನಿಮ್ಮನ್ನು ಭೇಟಿ ಮಾಡಿ ಹಣಕಾಸು ಮಸೂದೆಯಲ್ಲಿ ಸೂಕ್ತ ಬದಲಾವಣೆ ಮಾಡಿ ಹಣದುಬ್ಬರಕ್ಕೆ ಅಸ್ಪದ ನೀಡುವ ಕ್ರಮಗಳಿಂದ ಜನಸಾಮಾನ್ಯರಿಗೆ ಪರಿಹಾರ ನೀಡ ಬೇಕೆಂದು ಅಗ್ರಹಪಡಿಸಿದ್ದನ್ನು ನಾನಿಲ್ಲಿ ನೆನಪಿಸ ಬಯಸುತ್ತೇನೆ. ಆದರೆ ಇಂತಹ ಪರಿಹಾರ ನೀಡಲಿಲ್ಲ" ಎಂಬ ಅಂಶದತ್ತ ಪ್ರಧಾನಿಗಳ ಗಮನಸೆಳೆದಿದ್ದಾರೆ.

"ಈಗ ಘೋಷಿಸಿರುವ ಧೋರಣೆಯ ದಿಕ್ಕು ವಿನಾಶಕಾರಿ ಜನತೆ ಮತ್ತು ದೇಶ ಹಿತಾಸಕ್ತಿಗಳನ್ನು ನಿಜವಾಗಿಯೂ ಈಡೇರಿಸುವ ಒಂದು ಆರ್ಥಿಕ ಧೋರಣೆ ರೂಪಿಸಲು ಸಾಧ್ಯವಾಗುವಂತೆ ನಮ್ಮೊಡನೆ ಮತ್ತು ಸಂಬಂಧ ಪಟ್ಟ ಇತರ ಪಕ್ಷಗಳೊಡನೆ ಯಾವುದೇ ಮಟ್ಟದಲ್ಲಿ ನೀವು ಮಾತುಕತೆ ಆರಂಭಿಸಬಹುದು. ನಾವು ಮುಂದಿಟ್ಟಿರುವ ಅಭಿಪ್ರಾಯಗಳಿಗೆ ಸೂಕ್ತ ಗಮನ ಕೊಡುವುದಾಗಿ ನಾನು ಆಶಿಸುತ್ತೇನೆ" ಎಂಬ ಆಶಯದೊಂದಿಗೆ ಇ.ಎಂ.ಎಸ್. ಈ ಪತ್ರಕೊನೆಗೊಳಿಸಿದ್ದಾರೆ.

ಈ ವಾರ

★ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಅನಕ್ಷರತೆಯನ್ನು ತೊಡೆದು ಹಾಕುವ ವಿಚಾರದಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ ಎಂದು ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘದ (ಸಾರ್ಕ್)ವರದಿಯೊಂದು ತಿಳಿಸಿದೆ.

—ದಿ ಸ್ಟೇಟ್ ಮ್ಯಾನ್, ಜುಲೈ 3

★ ಕಳೆದ ವಾರ (ರುಮೇನಿಯಾ) ಪ್ರಧಾನಿ ಪೆತ್ರ ರೋಮನ್ ಮಾರುಕಟ್ಟೆಯತ್ತ ಸಾಗುವ ಭರವಸೆ ನೀಡುತ್ತಿರುವಂತೆಯೇ 'ಕ್ರಾಂತಿ' ನಂತರ ಬೆಳೆದು ಬಂದ ಇನ್ನೊಂದು ಮಾರುಕಟ್ಟೆಯನ್ನು ಬಗ್ಗುಬಡಿಯಲು ಪೋಲೀಸರು ಯತ್ನಿಸುತ್ತಿದ್ದರು.

ಅದುವೇ : ಕಾಳಸಂತೆ ಲಾಭಕೋರತನ.

★ ವಾರಾಂತ್ಯದೊಳಗೆ ಪೋಲೀಸರು 1680 ಕಾಳಸಂತೆಕೋರರನ್ನು ಬಂಧಿಸಿ 270000 ಡಾಲರ್ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

—ಎ ಸೋಸಿಯೇಟೆಡ್ ಪ್ರೆಸ್ ವರದಿ ಜುಲೈ 4

★ ಮಣಿಪುರ ರಾಜ್ಯದ ಐದು ಜಿಲ್ಲೆಗಳ ಜನರು ಹಸಿವಿನಿಂದ ನರಳುತ್ತಿದ್ದಾರೆ. ಮೂರು ಜಿಲ್ಲೆಗಳ ಜನರು ಪ್ರವಾಹದ ಭೀತಿಯಿಂದ ನಡುಗುತ್ತಿದ್ದಾರೆ. ಇದರ ಮಧ್ಯೆ ರಾಜಕೀಯ ನಾಯಕರು ಅಧಿಕಾರಕ್ಕಾಗಿ ಸೆಣಸಾಡುತ್ತಿದ್ದಾರೆ.

-ಪ್ರಜಾವಾಣಿ, ಜುಲೈ 3

★ ಜನರಿಗೆ ಮೂಲಭೂತ ಅಗತ್ಯಗಳನ್ನು ಒದಗಿಸುವ ಉದ್ದೇಶದಿಂದ ಐದು ವರ್ಷಗಳ ಹಿಂದೆ ಆರಂಭಿಸಿದ ಚೀಣಾದ ಬಡತನ ನಿರ್ಮೂಲನಾ ಆಂದೋಲನ ಅಪಾರ ಯಶಸ್ಸು ಸಾಧಿಸಿದೆ. ಬಡತನ ರೇಖೆಯಿಂದ ಕೆಳಗಿದ್ದ ಜನರ ಸಂಖ್ಯೆ 1985 ರಲ್ಲಿ 11ಕೋಟಿ ಇದ್ದದ್ದು 1989 ರ ಡಿಸೆಂಬರ್ ನಲ್ಲಿ 4 ಕೋಟಿಗೆ ಇಳಿದಿದೆ.

ಚೀಣಾದಲ್ಲಿ ವಾರ್ಷಿಕ 200 ದಶಲಕ್ಷ ಯುಆನ್ (ಅಂದಾಜು 800 ರೂಪಾಯಿ) ಆದಾಯವನ್ನು ಬಡತನ ರೇಖೆ ಎಂದು ಪರಿಗಣಿಸಲಾಗುತ್ತದೆ.

-ಅಧಿಕೃತ ವಕ್ತಾರರನ್ನು ಉಲ್ಲೇಖಿಸಿ ಪಿ.ಟಿ.ಐ. ವರದಿ ಜುಲೈ 4

★ 1986 ರ ಹೊಸ ಶಿಕ್ಷಣ ನೀತಿಯಂತೆ ತೆರೆಯಲಾಗಿರುವ ನವೋದಯ ಶಾಲೆಗಳ ಶಿಕ್ಷಣ ಪದ್ಧತಿ ಮೆಕಾಲೆ ಸಂಪ್ರದಾಯಕ್ಕಿಂತ ಭಿನ್ನವಾಗಿಲ್ಲ.

-ಸರ್ವೋದಯ ನಾಯಕ ಆಚಾರ್ಯರಾಮಮೂರ್ತಿ
ರಾಜೀವಗಾಂಧಿ ಸರಕಾರದ ಶಿಕ್ಷಣ ನೀತಿಯಪುನರ್‌ವಿಮರ್ಶೆಗೆ
ರಾಷ್ಟ್ರೀಯ ರಂಗ ಸರಕಾರ ರಚಿಸಿದ ಸಮಿತಿಯ ಅಧ್ಯಕ್ಷ.

★ ರೋಗಿಗಳನ್ನು ಗುಣಪಡಿಸುವ ವಿಚಾರದಲ್ಲಿ ವೈದ್ಯರು ತಮ್ಮ ನೈಪುಣ್ಯದ ಮೇಲೆ ವಿಶ್ವಾಸವಿರಿಸಬೇಕೇ ಹೊರತು 'ದೇವರ ಕೈಗೆ' ಜವಾಬ್ದಾರಿಗಳನ್ನು ಒಪ್ಪಿಸುವುದಲ್ಲ.

-ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ.
ಹೊಸ ಆಸ್ಪತ್ರೆಯೊಂದರ ಉದ್ಘಾಟನೆ ವೇಳೆ ಅದರ ಮುಖ್ಯ
ವೈದ್ಯರು ದೇವರ ಆಶೀರ್ವಾದ ಬೇಡಿದ್ದಕ್ಕೆ ಪ್ರತಿಕ್ರಿಯೆ.

★ ಕೋಮುವಾದ ಈಗ ಏಡ್ಸ್‌ನಷ್ಟೆ ಅಪಾಯಕಾರಿಯಾದುದು. ಯಾಕೆಂದರೆ ಅದು ಇಡೀ ದೇಶವನ್ನು ರೋಗಗ್ರಸ್ತಗೊಳಿಸಿದೆ.

-ಪ್ರಮುಖ ಇತಿಹಾಸಕಾರ ಡಾ/ ವಿ.ಪಿ.ದತ್ತ,
ದಿಲ್ಲಿಯಲ್ಲಿ ನಡೆದ ವಿಚಾರಗೋಷ್ಠಿಯೊಂದರಲ್ಲಿ.

★ 370 ನೇ ವಿಧಿಯನ್ನು ರದ್ದುಪಡಿಸಬೇಕೆಂದು ಕರೆ ನೀಡುವ ನಿರ್ಣಯವನ್ನು ಅಂಗೀಕರಿಸುವ ಮೂಲಕ ಮಧ್ಯಪ್ರದೇಶ ವಿಧಾನ ಸಭೆ ಸಂವಿಧಾನದ ಪರಮಾಧಿಕಾರ ಮಿತಿಯನ್ನು ಸ್ಪಷ್ಟವಾಗಿಯೇ ಉಲ್ಲಂಘಿಸಿದೆ.

..... ವಿಚಿತ್ರವೆಂದರೆ, ತನ್ನದೇ ಪಕ್ಷದ ನಿರ್ದೇಶನವನ್ನು ಉಲ್ಲಂಘಿಸಿ ಕಾಂಗ್ರೆಸ್ (ಐ) ಸದಸ್ಯರೊಬ್ಬರು ಈ ನಿರ್ಣಯವನ್ನು ಮಂಡಿಸಿದ್ದರು.

'ದಿ ಹಿಂದುಸ್ತಾನ್ ಟೈಮ್ಸ್' ಸಂಪಾದಕೀಯ ಜುಲೈ-9.

★ ನೆಹರೂರವರ ಬೆಂಬಲವಿಲ್ಲದಿದ್ದರೆ ತಾನು ಚುನಾವಣೆಗಳಲ್ಲಿ ಗೆಲ್ಲುತ್ತಿರಲಿಲ್ಲವೆಂದು ಓರ್ವ ಕಾಂಗ್ರೆಸ್ (ಐ) ನಾಯಕ ಬಹಿರಂಗವಾಗಿಯೇ ಹೇಳಿದ್ದರು ಕೂಡ.

'ಪೆಟ್ರಿಯಟ್' ಲೇಖನವೊಂದರಲ್ಲಿ.



ಓದುಗರ, ಏಜೆನ್ಸಿದಾರರ, ಚಂದಾದಾರರ ಗಮನಕ್ಕೆ
ಕಛೇರಿ ಬದಲಾವಣೆ

'ಐಕ್ಯರಂಗ' ಈಗ ಈ ಕೆಳಗಿನ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿದೆ.

95A, 2 ನೇ ಕ್ರಾಸ್, ನಾಗಪ್ಪ ರಸ್ತೆ
ಮುನೇಶ್ವರ ಬ್ಲಾಕ್, ರಾಜಮಹಲ್ ಗುಟ್ಟಹಳ್ಳಿ
ಬೆಂಗಳೂರು - 560 003

ನಿಮ್ಮ ಪತ್ರ, ಚಂದಾ ಹಣ, ಏಜೆನ್ಸಿ ಹಣವನ್ನು ಈ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರುತ್ತೇವೆ

ವ್ಯವಸ್ಥಾಪಕರು.

ಬೆಂಗಳೂರಿನ ಮೇಲೆರಗಿದ...

ಪುಟ 1 ರಿಂದ

ನೆನಪಿಸಿಕೊಂಡರೆ ಈ ಮಾತಿನ ಅರಿವಾಗುತ್ತದೆ.

ನಿಮ್ಮ ದಯೆ ಎನ್ನುತ್ತಾ ಅರಮನೆ ಭೂಮಿಯ ಹಗರಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ, ಅರಸು ಅವರ ಸುತ್ತ "ಜೀಯ, ಪ್ರಸಾದ, ಬುದ್ಧಿ, ನಿಮ್ಮ ಪಾದ" ಎಂದು ಸುತ್ತುತ್ತಿದ್ದ ಬಿ.ಟಿ. ಸೋಮಣ್ಣನವರ ದರ್ಬಾರು, ಬೆಂಗಳೂರು ಸುತ್ತಮುತ್ತಲಿನ ಭೂಒಡೆಯರು ತಮ್ಮ ಅಪಾರ ಬೆಲೆಯ ಹೊಲಗಳನ್ನು ರೆವಿನ್ಯೂ ನಿವೇಶನಗಳನ್ನಾಗಿ ಮಾಡಿ ಮಾರಿಕೊಳ್ಳಲು "ಮೌನಸಮ್ಮತಿ"(ಇಂದು ಆಯೋಜಿತವಾಗಿ ಬೆಂಗಳೂರಿನ ಸುತ್ತಗಟ್ಟಿರುವ ರೆವಿನ್ಯೂ ನಿವೇಶನದಾರರ ಬಗೆಹರಿಯದ ಸಮಸ್ಯೆ-ನೀರು, ವಿದ್ಯುತ್, ರಸ್ತೆ ಶಾಲೆಗಳಿಲ್ಲದೆ ಪರದಾಡುವ ಸಮಸ್ಯೆ ಉಗಮ ಇದೇ' ಸಹಕಾರಿ ಸಂಘಗಳ ಹೆಸರಿನಲ್ಲಿ ಇದೇ ಉದ್ಯಮದ ಮುಂದುವರಿಕೆ ಜನತಾ ಮನೆ ನಿವೇಶನಗಳಲ್ಲಿ, ಬೆಂಗಳೂರು ದಕ್ಷಿಣ, ಉತ್ತರ ತಾಲ್ಲೂಕುಗಳ ಬಿ.ಡಿ.ಓ. ಖನಿ ಹಗಲು ದರೋಡೆ, ಬಿ.ಡಿ.ಎ. ಸೈಟು ಹಂಚಿಕೆಯಲ್ಲಿ, ಮಂತ್ರಿ ಶಾಸಕರು ಐ.ಎ.ಎಸ್ ಅಧಿಕಾರಿಗಳಿಗೆ ಅಕ್ರಮ ಹಂಚಿಕೆಯ ಹಗರಣ ಇವೆಲ್ಲವನ್ನೂ ಇಂದು ನೆನಪಿಸಿಕೊಳ್ಳಬೇಕಾಗಿದೆ.

ಯಾರಿಗೂ ಕಾಣದಂತೆ ಹತ್ತು ಹಲವು ಹೆಸರಿನಲ್ಲಿ ಖೋಡೆಯಂತಹ ಮಾನ್ಯರುಗಳು ಸಾವಿರಾರು ಎಕರೆ ಭೂಮಿಯನ್ನು-ಸರಕಾರಿ, ಖಾಸಗಿ ಎಲ್ಲವೂ ಸೇರಿ ಬೇಲಿ ಹಾಕಿಸಿಕೊಂಡಿರುವ ಉದಾಹರಣೆಗಳತ್ತ ಗಮನ ಸೆಳೆಯಬೇಕಾಗಿದೆ.

ಇಂತಹ ಅಕ್ರಮ ಬೆಳವಣಿಗೆಯ ಉತ್ತುಂಗ ಶಿಖರದಲ್ಲಿಯೇ ಹೆಗ್ಗಡೆಯವರ ರೇವಜೀತು, ಮಧುವನ ಹಾಗೂ ಈಗ ಚರ್ಚಿತವಾಗುತ್ತಿರುವ 'ಅನಿವಾಸಿಗಳ ನಿವಾಸ'ದ ಹಗರಣಗಳು ಬಂದಿರುವುದು. ಈ ಉತ್ತುಂಗ ಶಿಖರದಲ್ಲಿಯೇ ಬಾರತದ ಬಂಡವಾಳಿಗರ ಕೇಂದ್ರವಾದ ಬಾಂಬೆಯ ರಣಹದ್ದುಗಳ ಬೆಂಗಳೂರಿನ ಮೇಲೆರಗಿರುವುದು. ಇಂದು ಬೆಂಗಳೂರಿನಲ್ಲಿ ಎಲ್ಲೆಲ್ಲೂ ವಿಜೃಂಭಿಸುತ್ತಿರುವ ಅಪಾರ್ಟ್‌ಮೆಂಟ್‌ಗಳು ಅದನ್ನು ಕಟ್ಟಲು ಉದ್ಭವಿಸಿರುವ ಬಾಂಬೆ ಬಂಡವಾಳಿಗರ, ಸ್ಥಳೀಯ ಬಂಡವಾಳಿಗರ ಬಿಲ್ಡರ್ಸ್ ಕಂಪನಿಗಳು 'ಮಹಾ ವಿಸ್ತಾರದ ಈ ಕಟ್ಟೋಣ ಉದ್ಯಮದ ಗರಿಷ್ಠರೂಪವೇ ಲೋಖಂಡವಾಲ ಅನಿವಾಸಿಗಳ ಹೆಸರಿನಲ್ಲಿ ಸೃಜಿಸಿದ ಖೋಟ ಕಂಪನಿ ಮತ್ತು ಅದಕ್ಕೆ ಬಂಡವಾಳಶಾಹಿ ರಾಜಕಾರಣದ ಸಹಭಾಗಿತ್ವ, ಇಂದು ನಗರಗಳಲ್ಲಿನ ಜನತಾದಳದ ದೌರ್ಬಲ್ಯಕ್ಕೆ ಪ್ರಬಲ ಕಾರಣ.

ಬದಲಿ ಕಾರ್ಮಿಕರಿಗೆ ವಿಜಯ ಮೈಸೂರು ಮಿಲ್‌ನ

ಬೆಂಗಳೂರಿನಲ್ಲಿ ಹತ್ತಿ ಗಿರಣಿಯೊಂದರಲ್ಲಿ ಬೆಂಕಿ ಹೊತ್ತಿ ಸುಟ್ಟು ಹೋದದ್ದು ಹಾಗೂ ಅದರ ಕಾರ್ಮಿಕರು ಕಂಗಾಲಾಗಿರುವುದು 'ಐಕ್ಯರಂಗ' ಓದುಗರಿಗೆ ಪರಿಚಿತ ವಿಷಯ. ಇತ್ತೀಚೆಗೆ ಮಿಲ್‌ನ ಕೆಲವು ವಿಭಾಗಗಳನ್ನು ಆರಂಭಿಸಿ ಕಾಯಂ ಕೆಲಸಗಾರರಿಗೆ ಮಾತ್ರ ಕೆಲಸ ನೀಡಿ 418 ಬದಲಿ ಕೆಲಸಗಾರರನ್ನು ಕೈಬಿಟ್ಟಿರುವುದರ ಬಗ್ಗೆ ಎಲ್ಲಾ ಕಾರ್ಮಿಕ ಸಂಘಗಳೂ ಸೇರಿ ಧರಣಿ ಮುಷ್ಕರ ನಡೆಸಿದ ಬಗ್ಗೆಯೂ ನಮ್ಮ ಪತ್ರಿಕೆಯಲ್ಲಿ ವರದಿಯಾಗಿದೆ.

ಬದಲಿ ಕಾರ್ಮಿಕರಿಗೆ ತಿಂಗಳಿಗೆ 500 ರೂ ನಂತೆ ಉಪವಾಸ ಭತ್ಯೆ (ಉಪವಾಸದಿಂದ ತಪ್ಪಿಸಿಕೊಳ್ಳುವುದಕ್ಕಾಗುವಷ್ಟು ಭತ್ಯೆ Subsistance allowance) ನೀಡುತ್ತಿದ್ದುದನ್ನು ಇದ್ದಕ್ಕಿದ್ದಂತೆ ಈ ತಿಂಗಳು ನಿಲ್ಲಿಸಲಾಯಿತು. ಇದರಿಂದ ಪರಿಸ್ಥಿತಿ ಬಿಗಡಾಯಿಸಿ ಬದಲಿ ಕಾರ್ಮಿಕರು ಕಾರ್ಖಾನೆಯ ಮುಂದೆ ಸೇರಿ ಕೆಲಸದ ಪಾಳಿ ಬದಲಾಗುವ ಸಮಯದಲ್ಲಿ ಕೆಲಸಕ್ಕೆ ಹೋಗುವ ಕಾರ್ಮಿಕರನ್ನು ಒಳಕ್ಕೆ ಬಿಡದೆ ಒಳಗಿದ್ದ ಕಾರ್ಮಿಕರನ್ನು ಹೊರಕ್ಕೆ ಬಿಡದೆ ಪ್ರತಿಬಂಧಿಸಿದರು. ಕಾರ್ಖಾನೆಯ ಯಾವ ಅಧಿಕಾರಿಗೂ ಚಲಿಸಲು ಬಿಡಲಿಲ್ಲ, ಮಾತ್ರವಲ್ಲ ಕಾರ್ಮಿಕ ನಾಯಕರೂ ಕೂಡ ಈ ಪ್ರಶ್ನೆ ಇತ್ಯರ್ಥವಾಗುವವರೆಗೆ ತಮ್ಮೊಡನೆಯೇ ಇರಬೇಕೆಂದು ಒತ್ತಾಯಿಸಿದರು. ಎಲ್ಲರೂ ಊಟ, ನೀರು ಕೂಡ ಬಿಡಬೇಕಾಯಿತು. ಕಾರ್ಮಿಕ ಅಧಿಕಾರಿಗಳನ್ನು ಎಷ್ಟು ಒತ್ತಾಯಿಸಿದರೂ ಈ ಮಿಲ್‌ನ ಒಡೆಯನಾದ ಎನ್.ಟಿ.ಸಿ.(ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್) ಒಪ್ಪಲಿಲ್ಲ. ಕೊನೆಗೆ ಕಾರ್ಖಾನೆಯ ಎಲ್ಲ ಕೆಲಸವೂ ಬಂದಾಗುತ್ತದೆ. ಪರಿಸ್ಥಿತಿ ಮತ್ತಷ್ಟು ಪ್ರಕೋಪಕ್ಕೆ ಹೋಗಬಹುದೆಂಬ ಸ್ಥಿತಿ ಮುಟ್ಟಿದಾಗ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾ॥ ವಿ.ಜಿ.ಕೆ ನಾಯರ್‌ರವರ ಮಧ್ಯಪ್ರವೇಶದಿಂದ ತಕ್ಷಣವೇ ಉಪವಾಸ ಭತ್ಯೆ ನೀಡಲಾಗುವುದೆಂಬ ಘೋಷಣೆಯನ್ನು ಮಾಡಲು ಎನ್.ಟಿ.ಸಿ. ಯ ಅಧ್ಯಕ್ಷರು ಒಪ್ಪಿದರು. ಮರುದಿನ ಅವರಿಗೆ ಕೆಲಸ ನೀಡುವುದಕ್ಕಾಗಿ ಮಿಲ್‌ನ ಮತ್ತೊಂದು ವಿಭಾಗವನ್ನುಪುನರಾರಂಭಿಸಲು ಹಾಗೂ ಸ್ವಯಂ ನಿವೃತ್ತಿ ಪಡೆದ 50ರಷ್ಟು ಕಾರ್ಮಿಕರನ್ನೂಪುನರ್ನೇಮಕ ಮಾಡಿಕೊಳ್ಳಲು ಕಾರ್ಮಿಕ ಕಮೀಷನರ್‌ರವರ ಮುಂದೆ ಒಪ್ಪಂದವಾಗಿದೆ. ನೌಕರಿ ತಪ್ಪಿಯೇ ಹೋಗುವುದೆಂಬ ಅಭದ್ರತೆಯಿಂದ ಅನೇಕ ಸಂಕಷ್ಟಗಳಿಂದ ಬಳಲುತ್ತಿದ್ದ ನೌಕರರಿಗೆ ಪರಿಹಾರ ದೊರೆತಂತಾಗಿದೆ. ಇದು ಕಾರ್ಮಿಕರಲ್ಲಿ ಉತ್ಸಾಹ ಹುಮ್ಮಸ್ಸುಗಳಿಗೆ ...

Printed and Published by P. Ramachandra Rao, on behalf of Communist Party of India (M...